# ಅಧ್ಯಯನ 15 Study XV

# ನೂತನ ಸೃಷ್ಟಿಗಳ ವಿರೋಧಿಗಳು ಮತ್ತು ಆಕ್ರಮಣಕಾರರು

## THE FOES AND BESETMENTS OF THE NEW CREATION

**"ಪೂರ್ವಸ್ವಭಾವವು' – ನೂತನ ಸೃಷ್ಟಿಯ ಶತ್ರುವಾಗಿರುವ ಈ ಪ್ರಪಂಚವು – ಮಹಾ ವಿರೋಧಿಯಾದ ಸೈತಾನನು. – ಆತನು ಆದಿಯಿಂದಲೂ ಸುಳ್ಳುಗಾರನೂ, ಕೊಲೆಗಾರನೂ ಆಗಿದ್ದಾನೆ – ಕೆಡುಕಿನಲ್ಲಿ ಸೈತಾನನ ಸಹಚರರು; ಪಿಶಾಚಿಗಳ ದಂಡು –ದುಷ್ಟ ಶಕ್ತಿಗಳ ದೊಡ್ಡಸಮೂಹ– ಸೈತಾನನ ಪ್ರಥಮ ಸುಳ್ಳು ಯಾವ ರೀತಿಯಲ್ಲಿ ಶಾಶ್ವತಗೊಂಡಿದೆ – ಕ್ರೈಸ್ತ ವಿಜ್ಞಾನ ಮತ್ತು ದೈವಜ್ಞಾನ –"ನಾವು ಹೋರಾಡುವುದು ಕೇವಲ ಮಾಂಸ ಮತ್ತು ರಕ್ತದೊಂದಿಗೆ ಅಲ್ಲ" –ಕೆಡುಕನ ಸೇವೆ –ವಿರೋಧಿಯ ಆಕ್ರಮಣಗಳು–ವಿಶ್ವಾಸಿಗಳ ಪ್ರಾರ್ಥನೆಯು ರೋಗಿಗಳನ್ನು ರಕ್ಷಿಸುತ್ತದೆ – ಸೈತಾನನು ಸೈತಾನನನ್ನು ಹೊರ ಹಾಕಿದರೆ ಆತನ ರಾಜ್ಯವು ಕ್ಷೀಣಿಸುತ್ತದೆ – ನೀತಿವಂತಿಕೆಯನ್ನು ಪ್ರೀತಿಸಿರಿ; – ದುಷ್ಟತನವನ್ನು ದ್ವೇಷಿಸಿರಿ. ಮಾರ್ಕ 16: 9–20 – ನೂತನ ಸೃಷ್ಟಿಯ ವಿರೋಧಿಯಾಗಿ ನಾಮಾಂಕಿತ ಕ್ರೈಸ್ತ ಸಭೆ – ದೇವರ ಶಸ್ತ್ರ.**

ನೂತನ ಸೃಷ್ಟಿಯು ವಿರೋಧಿಗಳಲ್ಲಿ ಬಹಳ ಪ್ರಮುಖವಾದುದು "ಪೂರ್ವಸ್ವಭಾವ"– ಹಳೆಯ ಚಿತ್ತ. ಈ ಪ್ರಸ್ತಾಪದ ಬಗ್ಗೆ, ಸಾಮಾನ್ಯವಾಗಿ ಮಾಡುವ ತಪ್ಪನ್ನು ನಾವು ಮಾಡದಿರೋಣ. ನೂತನ ಸೃಷ್ಟಿಯವರು ಎರಡು ಮನಸ್ಸು, ಎರಡು ಚಿತ್ತಗಳನ್ನು ಹೊಂದಿದ್ದಾರೆಂದು ನಾವು ಭಾವಿಸದಿರೋಣ' ಎರಡು ಮನಸ್ಸುಳ್ಳ ವ್ಯಕ್ತಿಯು ಚಂಚಲನೂ, ಸ್ವಯಂನೀತಿಯುಳ್ಳವನೂ, ಕರ್ತನಿಗೆ ಒಳಗಾಗದವನೂ ಆಗಿದ್ದಾನೆ. ನೂತನ ಸೃಷ್ಟಿಯು ಎರಡು ಮನಸ್ಸುಳ್ಳವನಲ್ಲ. ಆತನಿಗೆ ಒಂದೇ ಮನಸ್ಸು, ಒಂದೇ ಆತ್ಮ, ಒಂದೇ ಉದ್ಧೇಶ ಮತ್ತು ಒಂದೇ ಚಿತ್ತ. ಅದುವೇ ನೂತನ ಚಿತ್ತ, ಕರ್ತನ ಆತ್ಮ, ಪವಿತ್ರಾತ್ಮ. ಕರ್ತನ ಮನಸ್ಸನ್ನು ಸ್ವಲ್ಪಮಟ್ಟಿಗೆ ಅಂಗೀಕರಿಸುವ ಬದಲು, ತನ್ನ ಸ್ವಂತ ಚಿತ್ತವನ್ನು ಸ್ವಲ್ಪಮಟ್ಟಿಗೆ ಕಾಪಾಡಿಕೊಳ್ಳುವ ಬದಲು ಆತನು ತನ್ನ ಹಳೆಯ ಚಿತ್ತವನ್ನು ಸಂಪೂರ್ಣವಾಗಿ ಕರ್ತನಿಗೆ ಪ್ರತಿಷ್ಠೆಗೊಳಿಸಿದವನಾಗಿದ್ದಾನೆ. ಆ ಹಳೆಯ ಚಿತ್ತವು ಸತ್ತಿದೆ ಎಂದು ಎಣಿಸಿಕೊಳ್ಳಲಾಗಿದೆ ಮತ್ತು ಅದು ಆತನ ವಿಚಾರಗಳನ್ನು ನಿಯಂತ್ರಿಸುವುದರಿಂದ ದೂರವಿರಿಸಲಾಗಿದೆ. ಈ ರೀತಿಯಾಗಿ ಆತನು ಕರ್ತನ ದೇಹದ ಅಂಗವಾಗಿ ಅಂಗೀಕರಿಸಲ್ಪಟ್ಟಿದ್ದಾನೆ ಮತ್ತು ಆತನ ಸ್ವಂತ ಚಿತ್ತವೆಂಬುದು ಇಲ್ಲವಾಗಿದ್ದು ದೇಹದ ಶಿರಸ್ಸಿನ ಚಿತ್ತವು ಆತನನ್ನು ನಿಯಂತ್ರಿಸುವಂತೆ ಅನುಮತಿಸಲಾಗಿದೆ. ಈ ರೀತಿಯಾಗಿ ಆತನು ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಯಾಗಿದ್ದಾನೆ ಮತ್ತು "ಹಳೆಯ ಸಂಗತಿಗಳೆಲ್ಲವೂ ಗತಿಸಿಹೋಗಿದ್ದು ಎಲ್ಲವೂ ನೂತನವಾಗಿವೆ" ಆ ರೀತಿಯಾದ ಪ್ರತಿಷ್ಠೆಯನ್ನು ಮಾಡದೇ ಹೋದವರು ಒಂದು ವೇಳೆ ಆ ದೇಹದ ಎಲ್ಲಾ ಸದಸ್ಯರೂ ಮತ್ತು ಆಯ್ದುಕೊಂಡವರು ಬರುವ ವಿಶ್ವಾಸಿಗಳ ಮನೆಯ ಸದಸ್ಯರಾದರೂ ಅವರುಗಳು ಇನ್ನೂ ಪವಿತ್ರ ಸಭೆಯಾದ ಕ್ರಿಸ್ತನ ದೇಹದ ಅಂಗಗಳಾಗಿರುವುದಿಲ್ಲ; "ಆಯ್ಕೆ"ಯಾದ (Elect) ಎಲ್ಲಾ ಸದಸ್ಯರೂ "ದೇಹ"ದಿಂದ (Body) ಬಂದವರಾಗಿದ್ದಾರೆ.

ಆದರೆ ಹಳೆಯ ಮನಸ್ಸನ್ನು ಸಮಗ್ರವಾಗಿ ಮತ್ತು ನಿತ್ಯ ನಿರಂತರವಾಗಿ ವರ್ಜಿಸಿರಬಹುದಾದರೂ, ಅದು ಸತ್ತಿದೆ ಎಂದು ಎಣಿಕೆ ಮಾಡಿದಾಗ್ಯೂ (ಕರ್ತನಿಂದ ಮತ್ತು ಆತನ ದೃಷ್ಟಿಕೋನದಲ್ಲಿ ಸಂಗತಿಗಳನ್ನು ನೋಡುವ ಎಲ್ಲರಿಂದ) ಮತ್ತು ದೇಹವು ಪಾಪದ ಪಾಲಿಗೆ ಸತ್ತಿದೆ ಎಂದು ಎಣಿಸಿದಾಗ್ಯೂ ಅದು ಕರ್ತನ ಸಂಬಂಧದಲ್ಲಿ ಜೀವಿತಗೊಂಡಿದೆ, ಆತನ ವಾಗ್ದಾನಗಳ ಮೂಲಕ ಸಜೀವಗೊಂಡಿದೆ ಮತ್ತು ನೂತನ ಚಿತ್ತದ ನಿಯಂತ್ರಣಕ್ಕೆ ಒಳಗಾಗಿದೆ (ರೋಮಾ. 6: 11 ಮತ್ತು 8:11 ಇವುಗಳನ್ನು ನೋಡಿರಿ). ಪರಂತು, ದೇಹದ ಮತ್ತು ಅದರ ಚಿತ್ತದ ಈ ಮರಣವು ಮತ್ತು ನೂತನ ಚಿತ್ತದ ಸೇವಕನಾಗಿ ಆ ದೇಹದ ಪುನರುತ್ಥಾನವು ಸ್ವರ್ಣನಿಯಮದ ಅಡಿಯಲ್ಲಿ ಕರ್ತನ ಮತ್ತು ಸತ್ಯದ ಸೇವೆಗಳೆಲ್ಲವೂ ನಾವು ಎಣಿಸಿಕೊಳ್ಳುವ ಸಂಗತಿಗಳಾಗಿವೆ. "ಮರಣ ಹೊಂದಿದ' ಮತ್ತು "ಜೀವಿಸುವ' ಪರಿಸ್ಥಿತಿಗಳು ನೂತನ ಚಿತ್ತದ ವಿರೋಧವಾದ ಹಳೆಯ ಚಿತ್ತದ ಯಾವುದೇ ಜೀವ ಅಥವಾ ಚಟುವಟಿಕೆಗಳಿಂದ ನಿರಂತರ ವಿರೋಧ ಮತ್ತು ದೇಹದ ಮೇಲೆ ಅದರ ಪ್ರಭಾವಗಳಿಂದ ಸಂರಕ್ಷಿಸಲ್ಪಡಬೇಕಾಗುತ್ತದೆ. ಒಂದು ವೇಳೆ ನೂತನ ಚಿತ್ತವು ತಟಸ್ಥಗೊಂಡು ಮರ್ತ್ಯ ದೇಹವನ್ನು ಶ್ರೇಷ್ಠ ಮತ್ತು ಆತ್ಮೀಕ ಸಂಗತಿಗಳಲ್ಲಿ ತನ್ನ ಸೇವಕನನ್ನಾಗಿ ನಿರಂತರವಾಗಿ ಉಪಯೋಗಿಸಲು ವಿಫಲವಾದರೆ, ದೇಹವು ಬಲು ಬೇಗನೇ ತನ್ನನ್ನು ಪುನಃಪ್ರತಿಪಾದಿಸಿಕೊಂಡು ತನ್ನದೇ ಆದ ಚಲನವಲನ ಮತ್ತು ಬಯಕೆಗಳನ್ನು ಹೊಂದಿಕೊಳ್ಳುತ್ತದೆ. ಇವುಗಳು ನೂತನ ಮನಸ್ಸಿಗೆ ವಿರೋಧವಾಗಿದ್ದು ನೂತನ ಸೃಷ್ಟಿಯ ಹಿತಾಸಕ್ತಿಗಳಿಗೆ ಮಾರಕವಾಗುತ್ತವೆ. ಆದುದರಿಂದ ಎರಡನೆಯ ಇಂತಹ ಉಪ ವಿಪ್ಲವಗಳಿಗೆ ನಿರಂತರವಾಗಿ ಜಾಗರೂಕರಾಗಿದ್ದು, ಅಪೋಸ್ತಲನು ಹೇಳುವಂತೆ ಅವರು ತಮ್ಮ ಹಳೆಯ ಸ್ವಾರ್ಥಮನಸ್ಸು ಮತ್ತು ಸ್ವಯಂಚಿತ್ತಗಳನ್ನು ಕೆಳಗಿಳಿಸಿ, ದೇಹದ ಆಶೆ ಆಕಾಂಕ್ಷೆಗಳ ಪಾಲಿಗೆ ಸತ್ತಂತಿರಬೇಕು. ಅಪೋಸ್ತಲನು ಈ ಬಗ್ಗೆ ವಿವರಿಸುತ್ತಾ ತನ್ನ ಬಗ್ಗೆ ಹೇಳಿಕೊಳ್ಳುವುದೇನೆಂದರೆ– "ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ" (1 ಕೊರಿಂಥ 9:27).

ಸ್ಫೂರ್ತಿದಾಯಕ ವಚನವೊಂದು "ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ" (ಯೆರೆಮಿಯ 17:9) ಎಂಬುದಾಗಿ ಪ್ರಕಟಿಸುತ್ತದೆ. ಹೃದಯವೆಂದರೆ ದೇಹದಲ್ಲಿರುವ ಅಂಗವಲ್ಲವಾದರೂ ಅದು ದೇವರ ವಾಕ್ಯದಲ್ಲಿ ಪ್ರತಿನಿಧಿಸಿರುವ ಹೃದಯುವಾಗಿದೆ. ಅದೇನೆಂದರೆ ಸ್ವಾಭಾವಿಕವಾದ ವಾತ್ಸಲ್ಯಗಳು. ನೂತನ ಸೃಷ್ಟಿಗಳಿಗೆ ನೂತನ ಹೃದಯ, ನೂತನ ಚಿತ್ತ, ನೂತನ ಮಟ್ಟದ ವಾತ್ಸಲ್ಯ ಇವುಗಳು

ದೊರೆಯುತ್ತವೆ. ಇವುಗಳಲ್ಲಿ ದೇವರು, ಆತನ ನೀತಿವಂತಿಕೆ, ಸತ್ಯ, ಮತ್ತು ಚಿತ್ತ ಹಾಗೂ ಯೋಜನೆಗಳೇ ಪ್ರಥಮವಾದಂಥವುಗಳು; ಉಳಿದವುಗಳೆಲ್ಲವೂ ಕರ್ತನ ಮತ್ತು ಆತನ ನೀತಿವಂತಿಕೆಯೊಂದಿಗಿರುವ ಅವರ ಸಾಮರಸ್ಯಕ್ಕೆ ಅನುಪಾತವಾಗಿ ಗೌರವಾನ್ವಿತ ಹಾಗೂ ಪ್ರೀತಿಯ ಸ್ಥಾನಗಳನ್ನು ಅಲಂಕರಿಸುವುವು. ಈ ನೂತನ ಹೃದಯವನ್ನು ಹೊಂದಿದವರಿಗೆ ನೂತನ ಸೃಷ್ಟಿಯ ಸದಸ್ಯರೆಲ್ಲರೂ ಅವಶ್ಯಕವಾಗಿ ಪ್ರಥಮ ಮತ್ತು ಅತ್ಯಂತ ನಿಕಟವರ್ತಿಗಳೂ ಆಗಿರುತ್ತಾರೆ. ಆದುದರಿಂದ, ಅಪೋಸ್ತಲನು ಹೇಳುವಂತೆ. ನೂತನ ಸೃಷ್ಟಿಗಳಿಗೆ ಸಹೋದರ ಪ್ರೀತಿಯು ಎಲ್ಲಾ ಸಂಬಂಧಗಳ ಉತ್ತಮವಾದ ಪರೀಕ್ಷೆಯಾಗಿದೆ. ಆದರೆ ಈಗಾಗಲೇ ತೋರಿಸಿದಂತೆ ಇದು ಇತರರ ಬಗ್ಗೆ ತಮ್ಮ ಹಂಗನ್ನು (ನ್ಯಾಯವಾದ ಕರ್ತವ್ಯ) ಗ್ರಹಿಸುವಲ್ಲಿ ಮಧ್ಯೆ ಪ್ರವೇಶಿಸಬಾರದು.

ನೂತನ ಸೃಷ್ಟಿಯ, ನೂತನ ಹೃದಯವು ತನ್ನ ನೂತನ ವಾತ್ಸಲ್ಯದೊಂದಿಗೆ ನಿರಂತರವಾಗಿ ಶತ್ರುಗಳಿಂದ ಅಂದರೆ ಹೃದಯದ ಹಳೆಯ ವಾತ್ಸಲ್ಯಗಳಿಂದ, ಸ್ವಾರ್ಥಪೂರಿತ ಪ್ರವೃತ್ತಿಗಳಿಂದ ದಾಳಿಗೊಳಗಾಗುತ್ತಾ ಇರುತ್ತದೆ; ಎರಡನೆಯದು, ನೂತನ ಸೃಷ್ಟಿಯು ಇವುಗಳ ಬಗ್ಗೆ ಇರುವ ಗೌರವವಾದ ಪರಿಗಣನೆಯಲ್ಲಿ ಮತ್ತು ಉದಾರಿಗಳಾಗಿರುವಲ್ಲಿ ದೈವಿಕ ಆಜ್ಞೆಗಳಿಗೆ ಬದ್ಧವಾಗಿದ್ದೇವೆಂದು ತಿಳಿದು, ಅಡಿಗಡಿಗೆ ನೂತನ ಹೃದಯವನ್ನು ವಂಚಿಸುತ್ತಿದೆ ಮತ್ತು ಪರಿಣಾಮಕಾರಿಯಾಗಿ ಅದಕ್ಕೆ – " ಈಗ ನೀನು ನನ್ನನ್ನು ಸತ್ತಿದ್ದೇನೆಂದು ಎಣಿಸಿರುವೆ; ನೀನು ನನ್ನನ್ನು ಹೊರ ಹಾಕಿದ್ದೀ ಮತ್ತು ನಾನು ಏನಾಗಿದ್ದೆನೋ ಅದರಿಂದ ಸತ್ತಿದ್ದೇನೆ; ಈಗ ನಾನು ಮೊದಲಿನ ಹಳೆಯ ಹೃದಯದವನಲ್ಲ; ಆದರೆ ನೀನು ನನ್ನನ್ನು ಸ್ವಲ್ಪಮಟ್ಟಿಗೆ ಪರಿಗಣಿಸಬೇಕು. ನೀನು ನನ್ನೊಡನೆ ಒರಟಾಗಿ ವರ್ತಿಸಬಾರದು. ನನ್ನಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂದು ನೀನು ಒಪ್ಪಿಕೊಳ್ಳಬೇಕು. ಮತ್ತು ನನ್ನ ಮೇಲೆ ದೊಡ್ಡ ಹೊರೆಯನ್ನು ಹೊರಿಸಬಾರದು; ಅದು ನ್ಯಾಯವೆನಿಸದು, ನೀನು ಸ್ವಲ್ಪಮಟ್ಟಿಗಾದರೂ ಸ್ವಾರ್ಥಿಯಾಗಿರಬೇಕು. ನೀನು ಮೊದಲನೆಯವನಾಗಲು ನೋಡಬೇಕು ಮತ್ತು ನಿನ್ನ ಕುಟುಂಬವನ್ನು ನೋಡಬೇಕು; ಕೇವಲ ಅವರ ಅಗತ್ಯಗಳಿಗಾಗಿ ಅಲ್ಲ, ಆದರೆ ಅದಕ್ಕೂ ಹೆಚ್ಚಾಗಿ – ಅವರಿಗೆ ಸಂಪತ್ತು ಮತ್ತು ಸಾಮಾಜಿಕ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ನೀನು ನಿನ್ನನ್ನೇ ಅವರಿಗಾಗಿ ತ್ಯಾಗಮಾಡಬೇಕು"

ಈ ಹಳೆಯ ಹೃದಯವು ಅದೆಷ್ಟು ವಂಚಕ! ಅದರ ಅಸತ್ಯ ಉದ್ದೇಶಗಳು ತೋರಿಕೆಗೆ ಎಷ್ಟು ಚೆನ್ನಾಗಿವೆ! ಆದರೆ ಎಷ್ಟೋ ಜನರಿಗೆ ಇದು ದುಃಖಕರವಾಗಿ ರುಜುವಾತಾಗಿದೆ! ಎಷ್ಟೋ ಮಂದಿ ಇದರಿಂದ ಮರಳುಗೊಂಡು ಅವರ ಹೊಸ ಮನಸ್ಸು ಹಳೆಯದಕ್ಕೆ ಸೋತು ಸೆರೆಯಾಗಿವೆ! ಎಷ್ಟೋ ನೂತನ ಮನಸ್ಸಿನವರು ಈ ಹಳೆ ಮನಸ್ಸಿನ ವಂಚನೆಯ ಕಾರಣ ಪುನಃ ದಾಸತ್ವಕ್ಕೆ ಒಳಗಾಗಿದ್ದಾರೆ! ನೂತನ ಸೃಷ್ಟಿಗಳಿಗೆ ನೀಡಿರುವ ಅಚ್ಚುಮೆಚ್ಚಿನ ವಾದದ ಒಂದು ಅಪ್ಪಣೆ ಏನೆಂದರೆ "ಸಾಧ್ಯವಾದರೆ, ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ" (ರೋಮಾ. 12:18). ಅಪೋಸ್ತಲನ ಈ ಸಾಮಾನ್ಯ ಬುದ್ಧಿಮಾತು ಆತನ ವಿನ್ಯಾಸಕ್ಕೂ ಮೀರಿ ಮೇಲೇರ ಬಯಸಿದೆ ಮತ್ತು ದೇವರ ಅಪ್ಪಣೆಗಳನ್ನು ಶ್ರೇಷ್ಠಗೊಳಿಸಿವೆ – (1) ನಾವು ನಮ್ಮ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು (2) ನಮ್ಮ ನೆರೆಯವನನ್ನು ನಮ್ಮಂತೆಯೇ ಪ್ರೀತಿಸಬೇಕು. ಇದು ಶಾಂತಿಯನ್ನು ಯಾವುದೇ ಬೆಲೆಗೂ ಅನುಮತಿಸುವುದಿಲ್ಲ. ಹಳೆಯ ಸ್ವಭಾವ, ಹಳೆಯ ಮನಸ್ಸು ಮತ್ತು ಹಳೆಯ ಚಿತ್ತವು ಹೊಸ ಹೃದಯದ ಬಳಿಗೆ ಸತ್ಯದ ಸಂಧಾನಕ್ಕೆ ಅಥವಾ ಶಾಂತಿಯ ಸಲುವಾಗಿ ಕರ್ತವ್ಯದ ಬಗ್ಗೆ ರಾಜಿ ಮುಂತಾದವುಗಳಿಗೆ ಬರಬಹುದು. ಅದರ ಕೇಳಿಕೆಗಳಿಗೆ ಅಂತ್ಯವೇ ಇಲ್ಲ. ಇದರ ಫಲಿತಾಂಶವೇನೆಂದರೆ, ನೂತನ ಸೃಷ್ಟಿಯು ಶಾಂತಿಗೋಸ್ಕರ, ಹೀಗೆ ಮಾಡಲು ಬಯಸದೇ ಹೋದರೂ ಕರ್ತನೊಡನೆ ಮಾಡಿಕೊಂಡ ತನ್ನ ಒಡಂಬಡಿಕೆಯ ತಿರುಳನ್ನೇ ಉಲ್ಲಂಘಿಸಿ ತನ್ನನ್ನು ಒಪ್ಪಿಸಿ ಕೊಡುವ ಇಚ್ಛೆ ಇಲ್ಲದಾಗ್ಯೂ ಪೂರ್ಣವಾಗಿ ಪುನಃ ತನ್ನನ್ನು ಹಳೆಯ ಚಿತ್ತಕ್ಕೇ ಒಪ್ಪಿಸಿಕೊಡಬಹುದು. – ನಿಜವಾಗಿಯೂ ಹಳೆಯ ಚಿತ್ತದೊಡನೆ ಹೆಣಗಿ ಆತನು ಕಡೆಗೆ ಅದರ ವಂಚನೆಗೆ ಮತ್ತು ದೇವರ ವಾಕ್ಯಗಳ ಚಾತುರ್ಯಪೂರ್ವಕವಾದ ಅಪಾರ್ಥಗಳಿಗೆ ಬಲಿಯಾಗುತ್ತಾನೆ.

ಈ ರೀತಿಯಲ್ಲಿ ಆಕ್ರಮಣಕ್ಕೊಳಗಾದಾಗ, ಶಾಂತಿಯು ಮನೆಯಲ್ಲಿಯೂ, ಬೇರೆಲ್ಲೆಡೆಗಳಲ್ಲಿಯೂ ಅಗತ್ಯವಿದ್ದಾಗ್ಯೂ ಶಾಂತಿಯೇ ಕರ್ತನ ವಾಗ್ದಾನಕ್ಕೆ ಪ್ರಾಥಮಿಕ ಶರತ್ತಾಗಿರುವುದಿಲ್ಲ ಎಂಬುದನ್ನು ನೂತನ ಸೃಷ್ಟಿಗಳು ಮುಕ್ತವಾಗಿ ಪ್ರಕಟಿಸಬೇಕು. ನಿಜವಾಗಿಯೂ, ಕರ್ತನು ನೂತನ ಸೃಷ್ಟಿಯವರನ್ನು ಎಚ್ಚರಿಸಿ ಅವರು ಎಷ್ಟು ನಿಶ್ಚಯವಾಗಿ ದೈವಿಕ ಮಾರ್ಗದಲ್ಲಿ ನಡೆಯುತ್ತಾರೋ ಅಷ್ಟು ಹಿಂಸೆಗಳಿಗೆ ತುತ್ತಾಗಬೇಕಾಗುತ್ತದೆ ಎಂದಿದ್ದಾನೆ. – ಹಿಂಸೆಯು ಎಲ್ಲರೊಡನೆ ಶಾಂತಿಯನ್ನು ಸೂಚಿಸುವುದಿಲ್ಲ. ಅದು ವ್ಯತಿರಿಕ್ತವಾಗಿದೆ. ಅವರು ಎಷ್ಟು ನಿಶ್ಚಯವಾಗಿ ಬೆಳಕನ್ನು ಪ್ರಕಾಶಿಸುವಂತೆ ಮಾಡುತ್ತಾರೋ, ಕತ್ತಲೆಯು ಬೆಳಕನ್ನು ಅಷ್ಟೇ ದ್ವೇಷಿಸುತ್ತದೆ ಮತ್ತು ಅದನ್ನು ಪ್ರತಿಭಟಿಸುತ್ತದೆ. ಸಾಧ್ಯವಾದರೆ ಬೆಳಕಿನ ಯಜಮಾನನಿಗೆ ಅದನ್ನು ಕೊಳಗದೊಳಗೆ ಬಚ್ಚಿಡುವಂತೆ ಪ್ರೇರೇಪಿಸುತ್ತದೆ. ಈ ರೀತಿಯಾಗಿ ಪ್ರೇರೇಪಿಸುವ ಸಲುವಾಗಿ ಅಂಧಕಾರವು ಒಂದು ಕಾದಾಟವನ್ನೇ ನಡಿಸುವುದಾಗಿದೆ ಮತ್ತು ಇದು ಶಾಂತಿಯ ಹೊರತಾಗಿ ಬೇರೇನೂ ಅಲ್ಲ. ಇವುಗಳು ನೂತನ ಸೃಷ್ಟಿಗೆ ಬರುವ ಪರೀಕ್ಷೆಗಳು ಎಂದು ಕರ್ತನು ಭರವಸೆ ನೀಡಿದ್ದಾನೆ. ಶಾಂತಿಯು ತನಗೆ ಬಹು ಮುಖ್ಯವಾದುದು; ಆದರೆ ದೇಹದ ಶಾಂತಿಯಲ್ಲ, ಹೃದಯದ ಶಾಂತಿ ಎಂಬುದಾಗಿ ಆತನು ನಿರ್ಧರಿಸಬೇಕಾಗುತ್ತದೆ –"ಎಲ್ಲಾ ಗ್ರಹಿಕೆಗೂ ಮೀರಿದ ದೇವ ಶಾಂತಿ" (ಫಿಲಿಪ್ಪಿ 4:7).

ಹೊರಗಣ ಪರಿಸ್ಥಿತಿಯು ಶಾಂತಿಗೆ ವ್ಯತಿರಿಕ್ತ ವಾಗಿರುವಾಗಲೂ ಎಲ್ಲಾ ಗ್ರಹಿಕೆಯನ್ನು ಮೀರುವ ಈ ದೇವ ಶಾಂತಿಯು ತನ್ನ ಹೃದಯವನ್ನು ಆಳುವಂತೆ ಹೊಂದಿಕೊಳ್ಳಲು ನೂತನ ಸೃಷ್ಟಿಯು ಕಲಿತುಕೊಳ್ಳಬೇಕು. ಆದರೆ, ಕರ್ತನೊಂದಿಗೆ ಪೂರ್ಣ ಸಾಮರಸ್ಯವು ಆತನಿಗೆ ತೋರಿಸುವ ನಿಷ್ಠೆಗೆ ಅದರ ಬೆಲೆ ಏನೇ ಇರಲಿ, ಮಾಡುವ ತ್ಯಾಗ ಯಾವುದೇ ಇರಲಿ ಅದಕ್ಕೆ ದೊರೆಯುವ ಪ್ರತಿಫಲವಾಗಿದೆ. ಆದುದರಿಂದ ದೇಹದ

ಬಯಕೆಗಳಿಂದ ಮತ್ತು ಮೊದಲಿನ ಸಂಬಂಧದಲ್ಲಿ ಹತ್ತಿರದವರ ಮತ್ತು ಪ್ರಿಯರ ವಾದಗಳ ಮೂಲಕ ಮನವಿ ಮಾಡಿಕೊಂಡಾಗ ನೂತನ ಸೃಷ್ಟಿಯು ಮೊದಲಿಗೆ ತನ್ನ ಪ್ರಾಥಮಿಕ ಹಂಗಾದ – ತಾನು ತನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದನ್ನು ಎಲ್ಲಾದಕ್ಕಿಂತ ಮೊದಲು ಪರಿಗಣಿಸತಕ್ಕದ್ದು. ಆತನ ಕುಟುಂಬ ಅಥವಾ ದೇಹ ಅಥವಾ ನೆರೆಹೊರೆಯವರೊಂದಿಗೆ ಆತನ ವ್ಯವಹಾರಗಳೆಲ್ಲವೂ ದೇವರಿಗೆ ವಿಧೇಯರಾಗಿರಬೇಕಾದ ಈ ಪ್ರಾಥಮಿಕ ನಿಯಮಕ್ಕೆ ಒಳಪಡಬೇಕು.

ಮತ್ತೊಂದು ಕಡೆ, ನೂತನ ಸೃಷ್ಟಿಯು ತನಗೆ ಮಾತ್ರವಲ್ಲದೆ ಇತರರಲ್ಲಿರುವ ಅಸಮಾಧಾನಕರವಾದ ವಿಚಾರಗಳಿಂದ, ಅವುಗಳನ್ನು ತ್ಯಜಿಸುವಂತೆ, ಆ ಧರ್ಮಾಂಧತೆಯನ್ನು ದೂರವಾಗಿಸಬೇಕು; ದೇವರ ಮನಸ್ಸು ಯಾವಾಗಲೂ ತನ್ನ ಧೋರಣೆಗೆ ವಿರೋಧವಾಗಿದೆ ಎಂಬ ನಿರ್ಣಯಗಳಿಂದ ದೂರವಿರಬೇಕು. ದೇವರ ವಾಕ್ಯವನ್ನು ಮತ್ತು ದೇವರ ಅವಶ್ಯಕತೆಗಳನ್ನು ಒತ್ತಿಹೇಳುವ ಸ್ಫೂರ್ತಿ ಮತ್ತು ತತ್ವಗಳನ್ನು ತನ್ನ ದೈನಂದಿನ ಜೀವಿತಕ್ಕೆ ಸರಿಯಾದ ರೀತಿಯಲ್ಲಿ ಅಳವಡಿಸಿ ಕೊಳ್ಳಬೇಕಾದರೆ ಅವುಗಳನ್ನು ನಿಷ್ಠೆ ಮತ್ತು ತಾಳ್ಮೆಯಿಂದ ಧ್ಯಾನಿಸಬೇಕಾಗುತ್ತದೆ. ಆದರೆ ತುಲನಾತ್ಮಕವಾಗಿ ಕೆಲವರು ಈ ದೆಸೆಯಲ್ಲಿ ಶೋಧನೆಳಿಗೆ ಒಳಗಾಗುತ್ತಾರೆ. ಹೆಚ್ಚಿನವರು ದೇಹ ತೃಪ್ತಿಯ ಸಲುವಾಗಿ ಹೆಚ್ಚಿನ ಪ್ರಲೋಭನೆಗಳಿಗೆ ತುತ್ತಾಗುತ್ತಾರೆ. ಅಂಥವರು ಈ ದೆಸೆಯಲ್ಲಿ ವಿಶೇಷವಾದ ಎಚ್ಚರಿಕೆ ವಹಿಸಬೇಕಾಗುತ್ತದೆ. ಇಲ್ಲವಾದಲ್ಲಿ ಅವರು ದೇಹದ ವಿಷಯದಲ್ಲಿ, ಅದನ್ನು ತೃಪ್ತಿಪಡಿಸುವ ದೆಸೆಯಲ್ಲಿ, ಅದರ ಸೇವೆಮಾಡಲು, ಅದಕ್ಕೆ ಒಳಗಾಗುವಂತೆ ನಡೆಯುವವರಾಗುತ್ತಾರೆ. ಈ ರೀತಿಯಾಗಿ ಅವರು ತಮ್ಮ ಪ್ರತಿಷ್ಠೆಯ ವಿರುದ್ಧ ದಿಕ್ಕಿನಲ್ಲಿ ನಡೆಯುವವರಾಗಿದ್ದಾರೆ. ಅಥವಾ ಅವರು ಅದನ್ನು ಅನುಸರಿಸುವ ಅಥವಾ ಸೇವೆಮಾಡುವ ಅರ್ಥದಲ್ಲಿ ದೇಹಕ್ಕನುಸಾರ ನಡೆಯದೇಹೋದರೆ ಅವರನ್ನು ವಿಶೇಷವಾದ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಅವರ ದೇಹವು ಅವರನ್ನು ಆತ್ಮನ ಕಡೆಗೆ ನಡೆಯದಿರುವಂತೆ, ಆತ್ಮೀಕ ಸಂಗತಿಗಳಲ್ಲಿ ಪ್ರಗತಿ ಹೊಂದಿಕೊಳ್ಳದಂತೆಯೂ ಅವರನ್ನು ತಡೆಯುತ್ತದೆ. ಅವರ ಆತ್ಮೀಕ ಬೆಳವಣಿಗೆಗಳನ್ನು ಸ್ಥಗಿತಗೊಳಿಸಲು ಹೆಣಗುತ್ತದೆ ಮತ್ತು ಈ ರೀತಿಯಲ್ಲಿ ಅವರ ಫಲಧಾಯಕತೆಯನ್ನು, ಪ್ರಯೋಜನಕಾರಿ ಸಂಗತಿಗಳಲ್ಲಿ ಬೆಳೆದು ವೃದ್ಧಿಹೊಂದುವುದನ್ನು ಮೊಟಕುಗೊಳಿಸುತ್ತದೆ. ಅಂತಿಮವಾಗಿ ಅವರಿಂದ ಮಹಾಬಹುಮಾನವನ್ನು ಅಂದರೆ ಚಿಕ್ಕಹಿಂಡಿನ ಸದಸ್ಯರಾಗಿ ದೇವರರಾಜ್ಯದ ಜೊತೆ ವಾರಸುದಾರರಾಗುವ ಭಾಗ್ಯವನ್ನು ಕಸಿದುಕೊಳ್ಳುತ್ತದೆ.

ನೂತನ ಸೃಷ್ಟಿಗಳು ತಮ್ಮೆಲ್ಲಾ ಲೌಕಿಕ, ದೈಹಿಕ ಹಿತಾಸಕ್ತಿಗಳನ್ನು ತ್ಯಾಗಮಾಡುವಂತೆ ತಮ್ಮನ್ನು ಪ್ರತಿಷ್ಠೆಗೊಳಿಸಿ ಕೊಂಡಿರುತ್ತಾರೆ ಇದಕ್ಕಿಂತ ಕಡಿಮೆಯಾದ ಯಾವುದೂ ಅವರನ್ನು ನೂತನ ಸೃಷ್ಟಿಗಳನ್ನಾಗುವಂತೆ, ಪೂರ್ಣ ಅಭಿವೃದ್ಧಿ ಹೊಂದಿಕೊಂಡು ಕ್ರಿಸ್ತನ ದೇಹದ ಅಂಗಗಳಾಗಿ ಪ್ರಥಮ ಪುನರುತ್ಥಾನದ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಹೊಂದಿಕೊಳ್ಳುವಂತೆ "ಬೆಳಕಿನ ರಾಜ್ಯದೊಳಗೆ ದೇವಜನರ ಭಾಧ್ಯತೆಯಲ್ಲಿ ಸೇರಲು" ಅನುಮತಿಸದು ಎಂಬ ಆಲೋಚನೆಯನ್ನು ಅವರು ಸದಾ ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಪೂರ್ಣ ತ್ಯಾಗದ ಈ ದಿಕ್ಕಿನಲ್ಲಿ ನಾವು ಗ್ರಹಿಸಬಹುದಾದ ಏಕೈಕ ನಿರ್ಬಂಧವೆಂದರೆ, ಇತರರ ಹಿತಾಸಕ್ತಿಗಳು ಎಲ್ಲಿ ತಮ್ಮವುಗಳೊಂದಿಗೆ ಹೆಣೆಯಲ್ಪಟ್ಟಿವೆಯೋ, ಸುವರ್ಣ ನಿಯಮವು ಎಲ್ಲಿ ತ್ಯಾಗದ ಮೇಲೆ ತನ್ನ ಮಿತಿಯನ್ನು ಹೇರಿದೆಯೋ ಅಲ್ಲಿ ನಮ್ಮೊಡನೆ ತ್ಯಾಗದ ಪ್ರತಿಷ್ಠೆಯನ್ನು ಮಾಡಕೊಳ್ಳದ ನಮ್ಮ ಪ್ರಿಯರಿಗೆ ಸಮಂಜಸವಾದ ವಿನಾಯಿತಿಯನ್ನು ನೀಡುವುದು.

## ನೂತನ ಸೃಷ್ಟಿಯ ಶತ್ರುವಾಗಿರುವ ಈ ಪ್ರಪಂಚವು

## The World as an Enemy of the New Creation

ಪ್ರಸ್ತುತ ಕೆಡುಕಿನ ಪ್ರಪಂಚಕ್ಕೆ ಸಂಬಂಧಿಸಿದ ಪ್ರತಿಯೊಂದು ಸಂಗತಿಯೂ ನೀತಿವಂತಿಕೆಯೊಂದಿಗೆ ಹೆಚ್ಚುಕಡಿಮೆ ಸಮನಾಗಿ ನಿಲ್ಲಲಾರದು. ಅದುದರಿಂದ ಅವು ನೂತನ ಸೃಷ್ಟಿಗೆ ಮತ್ತು ಅದರ ನೈತಿಕತೆಯ ಮಟ್ಟಕ್ಕೆ ಹೆಚ್ಚು ಕಡಿಮೆ ವ್ಯತಿರಿಕ್ತವಾಗಿದೆ. ಈ ಲೋಕದ ಕಾನೂನುಗಳು ಒಟ್ಟಾರೆಯಾಗಿ ಸಾಮಾನ್ಯರೀತಿಯಲ್ಲಿ ಸ್ವಾರ್ಥಪರವಾಗಿದೆ ಎಂದು ಹೇಳಲಾಗುತ್ತದೆ. ಅವುಗಳು ನ್ಯಾಯಕ್ಕೆ ಭವ್ಯವಾದ ಮಾನ್ಯತೆ ನೀಡುವಲ್ಲಿ ಗಣನೀಯವಾದ ಔಚಿತ್ಯತೆಯನ್ನು ಎದುರಿಸುತ್ತಿಲ್ಲ. ನಾಗರೀಕ ಪ್ರಪಂಚದ ಎಲ್ಲಾ ಕಾನೂನುಗಳೂ, ನಿಯಮಗಳೂ ಕೆಟ್ಟವುಗಳು ಎಂದು ನಂಬುವವರು ನಾವಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕ್ರೈಸ್ತ ಪ್ರಪಂಚದ ನಿಯಮಗಳು ಎಷ್ಟೊಂದು ಭವ್ಯವಾಗಿವೆ ಎಂದು ನಾವು ಆಗಾಗ್ಯೆ ಆಶ್ಚರ್ಯಪಡುವವರಾಗಿದ್ದೇವೆ. ಅವುಗಳು ಎಷ್ಟೋ ಅಮೂಲ್ಯವಾಗಿದ್ದು, ಅವುಗಳಲ್ಲಿ ಹಲವು ಬಲಹೀನರನ್ನು ಬಲವುಳ್ಳವರಿಂದ ರಕ್ಷಿಸುವಂತೆ ಜಾಣ್ಮೆಯಿಂದ, ನ್ಯಾಯವಾದ ರೀತಿಯಲ್ಲಿ ರಚಿಸಲ್ಪಟ್ಟಿದ್ದು ಎಲ್ಲರಿಗೂ ನ್ಯಾಯವನ್ನುಂಟುಮಾಡುತ್ತಿವೆ. ಪರಂತು, ಪ್ರಪಂಚದ ಪ್ರತಿಯೊಂದು ಆಲೋಚನೆಯಲ್ಲಿಯೂ, ಮಾತಿನಲ್ಲಿಯೂ ಮತ್ತು ಕ್ರಿಯೆಯಲ್ಲಿಯೂ ಸ್ವಾರ್ಥತೆಯು ಮನೆಮಾಡಿಕೊಂಡಿದ್ದು ನ್ಯಾಯದ ಬಗ್ಗೆ ಅದರ ಶ್ರೇಷ್ಟವಾದ ಕಲ್ಪನೆಯನ್ನು ಬಗ್ಗಿಸಿ ನುಲುಚಿ ವಿಪರ್ಯಾಸಗೊಳಿಸಿರುವುದು ಆಶ್ಚರ್ಯವೆನಿಸದು.

ಇದಕ್ಕೆ ವಿರುದ್ಧವಾದ ನಮ್ಮ ವಿಸ್ಮಯವೆಂದರೆ, ಬಿದ್ದುಹೋಗಿರುವ ಬಡ ಮಾನವ ಜಾತಿಯು ಇಂತಹ ಭವ್ಯವಾದ ಕಾನೂನು ಪದ್ಧತಿಯ ರಚನೆಯನ್ನು ಗ್ರೇಟ್ ಬ್ರಿಟನ್, ಸಂಯುಕ್ತ ಸಂಸ್ಥಾನ ಇವೇ ಮುಂತಾದ ಇತರ ದೇಶಗಳ ಕಾನೂನು ಪುಸ್ತಕಗಳಲ್ಲಿ ಕಂಡುಕೊಳ್ಳಬಹುದು. ಮೋಶೆಯು ನೀಡಿರುವ ಧರ್ಮಶಾಸ್ತ್ರದ ಕಾನೂನುಗಳು ಆದರ್ಶವಾದವುಗಳು ಮತ್ತು ನಮ್ಮ ಕರ್ತನಾದ ಯೇಸುಕ್ರಿಸ್ತನಿಂದ ಮತ್ತು ಆತನ ಅಪೋಸ್ತಲರುಗಳಿಂದ ಅವುಗಳು ವಿವರಿಸಲ್ಪಟ್ಟಿವೆ ಮತ್ತು ಅವುಗಳ ಗೌರವ ಹೆಚ್ಚಿವೆ, ಎಂಬುದನ್ನು ನಾವು ಸಂಶಯಿಸುವುದಿಲ್ಲ. ಇವುಗಳು ನಿಜವಾಗಿಯೂ ಮಾನವ ಕಾನೂನುಗಳಿಗೆ ಬುನಾದಿಯಾಗಿವೆ. ಪರಂತು, ಎಲ್ಲರೂ ಒಪ್ಪಿಕೊಳ್ಳುವಂತೆ, ನ್ಯಾಯದ ಬಗ್ಗೆ ಮಾನವನ

ಅರ್ಥವಿವರಣೆಯೊಂದಿಗೆ ಮಾನವರ ಸ್ವಾರ್ಥತೆಯು ನಿರಂತರವಾಗಿ ಕಾದಾಡುತ್ತಿರುತ್ತದೆ ಮತ್ತು ಅವನ್ನು ಭಾಗಶಃ ಇಲ್ಲವೇ ಪೂರ್ಣವಾಗಿ ಬದಿಗೆ ತಳ್ಳಲು ಹವಣಿಸುತ್ತಿರುತ್ತದೆ. ವಿರಮಿಸದೆ ದೊಡ್ಡ ಪ್ರಮಾಣದಲ್ಲಿ ಪ್ರಗತಿಗೊಳ್ಳುತ್ತಿರುವ ಇದು ನೂತನ ಸೃಷ್ಟಿಯ ಪ್ರಮುಖ ಸಂಕಟ ಮತ್ತು ಹೋರಾಟಗಳಲ್ಲಿ ಒಂದಾಗಿದೆ.

ಈ ಪ್ರಪಂಚ ಮತ್ತು ಅದರ ದೋರಣೆ, ಸ್ವಾರ್ಥತೆ ಮುಂತಾದ ಮನಸ್ಸು ಇವುಗಳು ನೂತನ ಸೃಷ್ಟಿಯ ಮುಖ್ಯ ಶತ್ರುಗಳಲ್ಲಿ ಒಂದಾಗಿವೆ ಎಂದು ಪರಿಗಣಿಸತಕ್ಕದ್ದು. ಈ ಸರ್ವ ಸಾಮಾನ್ಯ ಪ್ರಾಪಂಚಿಕ ಆತ್ಮದ ಸ್ಫೂರ್ತಿಯ ನೆಲೆಯಲ್ಲಿ ನಡೆಯುತ್ತಿರುವ ಸಮಗ್ರ ಮಾನವ ಜಾತಿಯು ಒಂದು ಕಡೆ ಶೀಘ್ರ ಗತಿ, ಮತ್ತೆ ಕೆಲವೆಡೆ ಮಂದಗತಿಯಿರುವಂತೆ ಎಲ್ಲವೂ ಸ್ವಾರ್ಥತೆ ಎಂಬ ಒಂದೇ ದಿಕ್ಕಿನತ್ತ ಹರಿಯುವ ಮಹಾ ನದಿಯಂತೆ ಸ್ವಾರ್ಥತೆಯ ದಿಕ್ಕಿನತ್ತ ಚಲಿಸುತ್ತಿದೆ. ನೂತನ ಸೃಷ್ಟಿಯು, ತಾನು ಪ್ರತಿಷ್ಠೆಗೊಂಡಿರುವ ಕಾರಣ, ತನ್ನ ನೂತನ ಮನಸ್ಸಿನ ಸ್ಫೂರ್ತಿಯ ಕಾರಣ ಒಂದು ಪ್ರತಿಕೂಲ ಕ್ರಮಕ್ಕೆ ಬದ್ಧನಾಗುತ್ತಾನೆ ಮತ್ತು ಜನಪ್ರಿಯ ಮನೋಭಾವನೆಗಳ, ವಿಚಾರ ಸರಣಿಗಳ, ಸಂಪ್ರದಾಯ ಇವೇ ಅನೇಕ ಮುಂತಾದವುಗಳ ಪ್ರವಾಹಗಳಿಂದ ವಿರೋಧಿಸಲ್ಪ ಡುತ್ತಾನೆ ಮತ್ತು ವಿಚಿತ್ರವಾದವನೋ ಎಂಬಂತೆ ಗುರುತಿಸಲ್ಪಡುತ್ತಾನೆ. ಆತನಿಗೆ ಘರ್ಷಣೆ, ಹೋರಾಟವಿರುತ್ತದೆ. ಆತನ ಸಂಪರ್ಕಕ್ಕೆ ಬರುವ ವಿರುದ್ಧ ದಿಕ್ಕಿನಲ್ಲಿ ನಡೆಯುವವರೊಡನೆ ಆತನು ಅಗತ್ಯವಾಗಿ ವೈರತ್ವವನ್ನು ಕಟ್ಟಿಕೊಳ್ಳಬೇಕಾಗುತ್ತದೆ.ಈ ಘರ್ಷಣೆಯನ್ನು ತಡೆಯಲು ಸಾಧ್ಯವಿಲ್ಲ. ಅಂದರೆ ಇದು ಹೊರಗಣ ಶಾಂತಿಯಲ್ಲ, ಹೊರಗಣ ಘರ್ಷಣೆ. ಈ ಘರ್ಷಣೆಯು ಹೇಗಾದರೂ ಒಳಗಣಶಾಂತಿ ಮತ್ತು ಸಂತೋಷಗಳನ್ನು ಸೂಚಿಸಬಹುದು. ಯಾಕೆಂದರೆ, ಇದಕ್ಕೆ ದೇವರ ಅಂಗೀಕಾರವಿದೆ.

ಈ ಲೋಕದ ಗುರಿ, ಉದ್ದೇಶ ಮತ್ತು ಪದ್ಧತಿಗಳು ಯಾವಾಗಲೂ ತುಚ್ಛವೂ ಅನ್ಯಾಯವಾದುದೂ ಆಗಿರುವುದಿಲ್ಲ. ಆದರೆ ಅದರ ಶ್ರೇಷ್ಠವಾದ ಉದ್ದೇಶಗಳು ಮತ್ತು ಗುರಿಗಳು ಸಾಮಾನ್ಯವಾಗಿ ನೂತನ ಸೃಷ್ಟಿಗಳಿಗೆ ವಿರೋಧವಾದುದೂ ಆಗಿರುತ್ತವೆ. ಯಾಕೆಂದರೆ, ಈ ಪ್ರಪಂಚವು ಮಾನವ ವಿವೇಕದ ಪ್ರವೃತ್ತಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ನೂತನ ಸೃಷ್ಟಿಯು ಮೇಲಿನಿಂದ ಬರುವ ಜ್ಞಾನದಿಂದ ಪ್ರೇರೇಪಿಸಲ್ಪಟ್ಟಿದೆ. ಈ ಲೋಕದ ವಿವೇಕಕ್ಕೆ ಧರ್ಮದ ಬಗ್ಗೆ ತನ್ನದೇ ಆದ ಕಲ್ಪನೆಗಳಿದ್ದು ಅದು ದುಷ್ಟ ಜನರನ್ನು ನಿಗ್ರಹಿಸುವುದಾಗಿದೆ ಎಂಬ ಭಾವನೆ ಇದೆ. ಅದಕ್ಕೆ ನೀತಿವಂತಿಕೆಯ ಬಗ್ಗೆ, ಪರೋಪಕಾರದ ಬಗ್ಗೆ, ವಿಶ್ವಾಸ, ನಿರೀಕ್ಷೆ, ಪ್ರೀತಿ ಇವುಗಳ ಬಗ್ಗೆ ತನ್ನದೇ ಆದ ಸ್ವಂತ ಕಲ್ಪನೆಗಳಿವೆ. – ಅದು ನೂತನ ಸೃಷ್ಟಿಯ ವಿವಿಧ ದೃಷ್ಟಿಕೋನಗಳನ್ನು ಗ್ರಹಿಸುವುದಿಲ್ಲ. ಅದರ ದೃಷ್ಟಿಯು ಅತಿರೇಕದಿಂದ, ಅಸಮಂಜಸತೆ ಮುಂತಾದವುಗಳಿಂದ ಕೂಡಿದೆ ಎಂಬ ಶೀಘ್ರ ಪ್ರವೃತ್ತಿ ಹೊಂದಿದೆ. ಅವು ದೇವರ ಯೋಜನೆಯನ್ನು ಗ್ರಹಿಸುವುದಿಲ್ಲ, ಪ್ರಸ್ತುತ ಜೀವಿತದ ಕ್ಷುಲ್ಲಕ ವಿಚಾರಗಳನ್ನು ಭವಿಷ್ಯದವುಗಳಿಗೆ ಹೋಲಿಸುವಾಗ ದೈವಿಕ ದೃಷ್ಟಿಕೋನಕ್ಕನುಸಾರವಾಗಿ ಅವನ್ನು ಮೆಚ್ಚಿಕೊಳ್ಳುವುದಿಲ್ಲ. ಮಾನವರ ನಿಜವಾದ ಏಳಿಗೆಯಲ್ಲಿ ಅವುಗಳು ದೇವರು ಕಾದಿರಿಸಿರುವ ಮತ್ತು ಈ ಲೋಕದ ಕಾರ್ಯಗಳು ಮುಗಿದ ಮೇಲೆ, ಅಯ್ಕೆಗೊಂಡ ಸಭೆಯನ್ನು ಆಯಲ್ಪಟ್ಟು, ಮೆರುಗುಕೊಟ್ಟು, ಅಂಗೀಕೃತಗೊಂಡು, ಮಹಿಮೆಗೊಂಡ ಕೂಡಲೇ ದೇವರು ಅದನ್ನು ತನ್ನ ರಾಜ್ಯದಲ್ಲಿ ಬೆಳಕಿಗೆ ತಂದು ಯಶಸ್ವಿಯಾಗಿ ಕಾರ್ಯಗತಗೊಳಿಸಲಿರುವ ಆತನ ಮಹಾ ಮತ್ತು ಭವ್ಯವಾದ ವ್ಯವಸ್ಥೆಯೊಂದಿಗೆ ಮಾನವರ ಮಹತ್ವವಾದ ಪ್ರಯತ್ನಗಳು ವ್ಯತ್ಯಾಸಗೊಳ್ಳುವಾಗ ಈ ಲೋಕದ ವಿವೇಕವು ಅವುಗಳನ್ನು ಮೆಚ್ಚಿಕೊಳ್ಳುವುದಿಲ್ಲ.

ಆದುದರಿಂದ, ಈ ಲೋಕವು, ಹಾಗೂ ನೈತಿಕವಾಗಿ, ಧಾರ್ಮಿಕವಾಗಿ ಉತ್ತಮ ರೀತಿಯಲ್ಲಿರುವವರೂ ಸಹಾ ತನ್ನನ್ನು ದ್ವೇಷಿಸುವುದಾದರೆ, ನೂತನ ಸೃಷ್ಟಿಯು ಅದಕ್ಕೆ ಆಶ್ಚರ್ಯಪಡಬೇಕಾದ್ದಿಲ್ಲ. ಲೋಕದವರ ಈ ದ್ವೇಷ ಮತ್ತು ವಿರೋಧವು ಕೆಲವೊಮ್ಮೆ ಎಷ್ಟೋ ಪೀಡನಕಾರಿಯಾಗಿದ್ದು, ಈ ಲೋಕವು ಇನ್ನೂ ಸಹಾ "ಇಹಲೋಕಾಧಿಪತಿಯ ಬಂಧನಕ್ಕೊಳಗಾಗಿದೆ" ಎಂಬುದನ್ನು ನೆನಪುಮಾಡಿ ನಾವು ಪ್ರಾಮಾಣಿಕತೆ ಮತ್ತು ತಾಳ್ಮೆಯನ್ನು ಮೃದುವಾಗಿ ತೆಗೆದುಕೊಳ್ಳುವಂತೆ ಪ್ರಯತ್ನಿಸುತ್ತದೆ ಮತ್ತು ದೇವರ ವಾಕ್ಯದಲ್ಲಿ ವಾಗ್ದಾನ ಮಾಡಿರುವಂತೆ "ಅತ್ಯಂತ ಶ್ರೇಷ್ಠವಾದ ಹಾಗೂ ಅಮೂಲ್ಯ ಸಂಗತಿಗಳನ್ನು", ದೇವರ ಕೃಪೆಯಿಂದ ನಾವು ಅವುಗಳ ಬೆಳಕಿನಲ್ಲಿ ನಮ್ಮ ಎಲ್ಲಾ ನಷ್ಟಗಳನ್ನು, ಶೋಧನೆ, ಕೆಲಸಕ್ಕೆ ಬಾರದ ಮುಂತಾದವುಗಳನ್ನು ಮತ್ತು ಅವುಗಳಿಗಿಂತ "ದೇವರು ನಮಗೆ ವಾಗ್ದಾನ ಮಾಡಿರುವ ಅದ್ಭುತ ಸಂಗತಿಗಳನ್ನು" ನಾವು ಗೆದ್ದುಕೊಳ್ಳಬಹುದು ಎಂದು ಲೆಕ್ಕಿಸಬಹುದಾದ ಆತ್ಮನ ಆಳವಾದ ಸಂಗತಿಗಳನ್ನು ನೋಡಗೊಡಿಸುವುದಿಲ್ಲ. ನಾವು ಈ ಲೋಕದ ಆತ್ಮಕ್ಕೆ ವಶವಾಗುವುದು, ಅದರ ಭಾವನೆಗಳನ್ನು ಶಾಂತಿಯ ಸಲುವಾಗಿ ಅನುಮತಿಸುವುದು ಮುಂತಾದವುಗಳು ಕರ್ತನ ಮತ್ತು ಆತನ ಸತ್ಯತೆಗಳ ಮತ್ತು ಆತನ ಸೇವೆಯಲ್ಲಿ ದೊರೆಯುವ ಸೌಕರ್ಯಗಳ ಬಗ್ಗೆ ಕೆಳಮಟ್ಟದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತವೆ. ಇದರ ಫಲಿತಾಂಶವೇನೆಂದರೆ, ನಾವು ಈ ಲೌಕಿಕತೆಗೆ ಸಂಪೂರ್ಣ ಶರಣಾಗಿ ನಾವು ಎಲ್ಲವುಗಳನ್ನು ಕಳೆದುಕೊಳ್ಳದೇ ಹೋದರೆ. ನಾವು ಕನಿಷ್ಠ ಬಹುಮಾನವನ್ನು, "ಮಹಾ ಸಮೂಹದ" ಭಾಗವಾಗುವುದನ್ನೂ ಮಹಾ ಸಂಕಟದ ಮೂಲಕ ಅದನ್ನು ಅನುಸರಿಸಲಿರುವ ಮಹಿಮೆಯಲ್ಲಿ ಕನಿಷ್ಠವಾದ ಸ್ಥಾನವನ್ನು ಪಡಕೊಳ್ಳುತ್ತೇವೆ.

ಅಪೋಸ್ತಲನ ತೀವ್ರವಾದ ಪ್ರತಿಬಂಧಕಾಜ್ಞೆಯೆಂದರೆ – "ಲೋಕವನ್ನಾಗಲೀ, ಲೋಕದಲ್ಲಿರುವವಗಳನ್ನಾಗಲೀ ಪ್ರೀತಿಸ ಬೇಡಿರಿ. ಯಾವನಾದರೂ ಈ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ" (1 ಯೋಹಾನ 2:15) ಎಂಬುದೇ. ನಾವು ಈ ಲೋಕದ ಆತ್ಮನೊಂದಿಗೆ ತೋರುವ ಪ್ರತಿಯೊಂದು ಸಹಾನುಭೂತಿಯ ಸೂಚನೆ ಅಥವಾ ಸಂಯೋಜನೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು. ನಾವು ಈ ಲೋಕದವರು ಎಂದು ಕರೆಯುವ ನಮ್ಮ ಸ್ನೇಹಿತರೊಡನೆ ಸಹಾನುಭೂತಿಯಿಂದಾಗಲೀ ಅವರ ಹಿತಾಸಕ್ತಿಗಳ ಬಗ್ಗೆ ನಿರ್ಲಕ್ಷ್ಯದಿಂದಿರಬೇಕೆಂದು ಇದರ ಅರ್ಥವಲ್ಲ. ಆದರೆ ಲೌಕಿಕರ ಬಗ್ಗೆ ನಮ್ಮ ಹಂಗುಗಳನ್ನು ನಿಭಾಯಿಸುವಲ್ಲಿ ಜಾಗರೂಕ

ರಾಗಿರುವಾಗ, ಅಂದರೆ, ಗೌರವ ತೋರಬೇಕಾದವರಿಗೆ ಗೌರವ ತೋರುವಾಗ, ಕಪ್ಪ ಕಾಣಿಕೆ ನೀಡಬೇಕಾದವರಿಗೆ ಅದನ್ನು ನೀಡುವಾಗ, ಬೆಂಬಲಿಸ ಬೇಕಾದವರಿಗೆ ಬೆಂಬಲಿಸುವಾಗ, ಕರುಣೆಗೆ ಯೋಗ್ಯರಾದವರಿಗೆ ಕರುಣೆ ತೋರುವಾಗ, ಸಹಾನುಭೂತಿಗೆ ಉಚಿತರಾದವರಿಗೆ ಸಹಾನುಭೂತಿ ತೋರುಬೇಕು. ಪರಂತು ನಾವು ನಮ್ಮ ಸ್ನೇಹಿತರು, ನೆರೆಹೊರೆಯವರು ಮತ್ತು ಇನ್ನೂ ವಿರೋಧಿಯ ಪ್ರಭಾವಕ್ಕೆ ಒಳಗಾಗಿರುವವರಲ್ಲಿ, ಆತ್ಮನಿಂದ ಆ ಪ್ರವೃತ್ತಿಗೆ ಪ್ರೇರೇಪಿಸಲ್ಪಟ್ಟು ತಪ್ಪುದಾರಿಗೆ ಎಳೆಯಲ್ಪಟ್ಟವರು ಎಂದು ಗುರುತಿಸಬೇಕು.

ದಿವ್ಯ ಸೂತ್ರವಾದ ಸುವರ್ಣ ನಿಯಮಕ್ಕೆ ಹೆಚ್ಚಾದ ಅಥವಾ ಕಡಿಮೆಯಾದ ಪ್ರಮಾಣದಲ್ಲಿ ವಿರೋಧ ವ್ಯಕ್ತಪಡಿಸುವ ಸ್ವಾರ್ಥಪರವಾದ ಪ್ರಸ್ತುತ ಸಂಸ್ಥೆಗಳ ಬಗ್ಗೆ ನಾವೆಂದಿಗೂ ಸಹಾನುಭೂತಿ ವ್ಯಕ್ತಪಡಿಸಕೂಡದು. ನಾವು ನಮ್ಮ ವ್ಯವಹಾರಗಳನ್ನು ಈ ಲೋಕದಲ್ಲಿ ಪ್ರಚಲಿತವಾಗಿರುವ ಸ್ವಾರ್ಥದ ನೆಲೆಯಲ್ಲಿ ಗಣನೀಯವಾಗಿ ಮಾಡಬೇಕಾದ ಅವಶ್ಯಕತೆ ನಮಗುಂಟಾಗಬಹುದು. ಆದರೆ ಈ ಪ್ರಶ್ನೆಯ ಬಗ್ಗೆ ನಿರಂತರವಾಗಿ ಪ್ರತಿಭಟಿಸುವುದನ್ನು ನಿಲ್ಲಿಸದೆ, ನಮ್ಮ ಹೃದಯಗಳಲ್ಲಿ ಸ್ವಾರ್ಥ ತತ್ವಗಳೊಂದಿಗೆ ಸಹಾನುಭೂತಿ ತೋರುವುದರಿಂದ ಹೊರಗಿಳಿಯುವ ಮನೋವೃತ್ತಿಯನ್ನು ಇಟ್ಟುಕೊಂಡು, ಜೀವನದ ಎಲ್ಲಾ ವ್ಯವಹಾರಗಳಲ್ಲಿ, ಸಾಧ್ಯವಾದ ಮಟ್ಟಿಗೆ ಈ ಲೋಕದೊಡನೆ ನಮ್ಮ ಎಲ್ಲಾ ವ್ಯವಹಾರಗಳಲ್ಲಿ ಸುವರ್ಣ ನಿಯಮವು ಆಳುವಂತೆ ಬಯಸಬೇಕು.

ಈ ಲೋಕವನ್ನು ಪರಿವರ್ತಿಸಿ ಸಮಾಜದಲ್ಲಿ ಮತ್ತು ಅದರ ಪದ್ಧತಿಗಳಲ್ಲಿ ಕ್ರಾಂತಿಯನ್ನುಂಟುಮಾಡುವ ಪ್ರಯತ್ನ ನಮ್ಮದಲ್ಲ. ಆ ಪರಮ ಸಾಹಸವನ್ನು ಕರ್ತನು ತನಗಾಗಿ ಉಳಿಸಿಕೊಂಡಿದ್ದಾನೆ ಮತ್ತು ಧಾವಿಸಿ ಬರುತ್ತಿರುವ ಆ "ಮಹಾ ದಿನ' ದಲ್ಲಿ ಅದನ್ನು ಯಶಸ್ವಿಯಾಗಿ ಪೂರೈಸುವವನಾಗಿದ್ದಾನೆ. ಅದೇ ಸಮಯದಲ್ಲಿ ವಾಕ್ಯದ ಮಾರ್ಗದರ್ಶನದಲ್ಲಿರುವ ಕರ್ತನ ಜನರು – ಈ ಲೋಕದಲ್ಲಿರುವವರಾದರೂ ಮತ್ತು ಅವಶ್ಯಕವಾಗಿ ಅದರ ವ್ಯವಹಾರಗಳಲ್ಲಿ ಮತ್ತು ಸಂಪ್ರದಾಯಗಳಲ್ಲಿ ಭಾಗವಹಿಸಬೇಕಾದರೂ ಅದರೊಂದಿಗೆ ಪ್ರೀತಿಯುಳ್ಳವರೂ, ಸಹಾನುಭೂತಿಯುಳ್ಳವರೂ ಆಗಬೇಕೆಂದಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಅವರು ದೇವರೊಡನೆ ನಿಕಟ ಸಂಪರ್ಕವುಳ್ಳವರಾಗಿರಬೇಕು, ಮತ್ತು ಆತನ ನೀತಿನಿಯಮಗಳಿಗೆ ಸಹಾನುಭೂತಿಯುಳ್ಳವರಾಗಿರಬೇಕು. ಸಭೆಯಲ್ಲಿ, ರಾಜ್ಯದಲ್ಲಿ, ಆರ್ಥಿಕ ವಲಯದಲ್ಲಿ, ರಾಜಕೀಯದಲ್ಲಿ ಮತ್ತು ಸಾಮಾಜಿಕ ಸಂಪ್ರದಾಯ ಮತ್ತು ವಹಿವಾಟಿನಲ್ಲಿ ಯಾವುದೇ ಮಟ್ಟದಲ್ಲಿ ನಡೆಯುವ ಪ್ರತಿಯೊಂದು ರೀತಿಯ ಅನ್ಯಾಯದ ಬಗ್ಗೆ ದೇವರು ಹೊಂದಿರುವ ರೀತಿಯ ವಿರೋಧವನ್ನೇ ಅವರೂ ಹೊಂದಿರಬೇಕಾಗುತ್ತದೆ.

ಇದನ್ನು ಹೆಚ್ಚು ಕಡಿಮೆ ಸ್ಪಷ್ಟವಾಗಿ ನೋಡಿ, ಕೆಲವರು ಪ್ರಸ್ತುತ ಸಂಸ್ಥೆಗಳನ್ನು ಕರ್ತನು ಮತ್ತು ಅಪೋಸ್ತಲರುಗಳೂ ತಮ್ಮ ಮಾತು ಮತ್ತು ನಡತೆಯಲ್ಲಿ ಅಪ್ಪಣೆ ನೀಡದಿರುವ, ಮಂಜೂರು ಮಾಡದಿರುವ ಅಥವಾ ದೃಷ್ಟಾಂತ ನೀಡದ ರೀತಿಯಲ್ಲಿ ಬಹಿರಂಗವಾಗಿ ಖಂಡಿಸುವ ಅತಿರೇಖಕ್ಕೆ ಹೋಗಿದ್ದಾರೆ ಎಂದು ನಾವು ನಂಬುತ್ತೇವೆ. ಪ್ರಪಂಚವು ಸಮಗ್ರವಾಗಿ, ಅದು ಮೆಚ್ಚಿಕೊಳ್ಳುವಂತ ಶ್ರೇಷ್ಠವಾದ ಮಟ್ಟದಲ್ಲಿ ಜೀವಿಸುತ್ತಿದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇತರರು ನಮ್ಮಂತೆ ಸರಿಪಡಿಸಲು ಅಸಮರ್ಥವಾದ ಸಂಗತಿಗಳ ಬಗ್ಗೆ ತಪ್ಪು ಕಂಡು ಹಿಡಿಯುವುದು ಕೇವಲ ನಿಷ್ಪ್ರಯೋಜಕತೆಗಿಂತಲೂ ಇನ್ನೂ ಹೆಚ್ಚಿನ ಕೆಟ್ಟದ್ದಾಗಿದೆ. ಯಾಕೆಂದರೆ, ಇದು ಕೇವಲ ಅಸಂತೋಷ, ಕೆರಳುವಿಕೆ ಮುಂತಾದವುಗಳನ್ನುಂಟು ಮಾಡುತ್ತದೆಯೇ ಹೊರತು ಯಾವುದೇ ನಿರೀಕ್ಷಿತ ಫಲಿತಾಂಶಗಳನ್ನಲ್ಲ. ಸ್ನಾನಿಕನಾದ ಯೋಹಾನನಿಗೆ ಕೆಲವರು ಸೈನಿಕರ ಉಚಿತವಾದ ಕ್ರಮಗಳ ವಿಚಾರಿಸಿದಾಗ ಆತನು – "ಯಾರನ್ನಾದರೂ ಬೆದರಿಸದಿರಿ; ಯಾರ ಮೇಲಾದರೂ ಸುಳ್ಳುದೂರು ತಂದು ದುಡ್ಡು ಕಸಕೊಳ್ಳಬೇಡಿರಿ; ನಿಮ್ಮ ಸಂಬಳದಲ್ಲಿ ತೃಪ್ತರಾಗಿರಿ" (ಲೂಕ 3:14) ಅಂದರೆ "ಯಾರನ್ನೂ ಹಿಂಸಿಸದಿರಿ, ನಿಮ್ಮನ್ನು ನೇಮಿಸಿದ ಸರ್ಕಾರದ ಕಾನೂನು ಮತ್ತು ನಿಬಂಧನೆಗಳನ್ನು ಉಲ್ಲಂಘಿಸದಿರಿ" ಎಂಬ ಅರ್ಥ ಕೊಡುವ ವಿವೇಕಯುತವಾದ ಬುದ್ದಿಮಾತುಗಳನ್ನು ಈ ದೆಸೆಯಲ್ಲಿ ನೀಡಿರುತ್ತಾನೆ. ಜನರನ್ನು ಪ್ರಸ್ತುತ ಪರಿಸ್ಥಿತಿಗೆ ಮತ್ತು ಸುತ್ತಲ ವಾತಾವರಣಕ್ಕೆ ಕೇವಲ ಅತೃಪ್ತರನ್ನಾಗಿ ಮಾಡುವುದು ಅವಿವೇಕತನ. ಇದಕ್ಕೆ ವ್ಯತಿರಿಕ್ತವಾಗಿ, ನೂತನ ಸೃಷ್ಟಿಯ ಪ್ರಭಾವ, ಚೈತನ್ಯ, ಪ್ರವೃತ್ತಿ ಇವುಗಳು ಸದಾ ಶಾಂತಿಯೆಡೆಗೆ ಇರಬೇಕು. ನಾವು ಪ್ರಸ್ತುತ ಸಂಸ್ಥೆಗಳನ್ನು ಹೆಚ್ಚಾಗಿ ಪ್ರಶಂಸಿಸಲಾಗದಿದ್ದರೆ, ನಾವು ಅವರನ್ನು ವಿಶೇಷವಾಗಿ ಖಂಡಿಸಲೂಬಾರದು.

ಇಂತಹ ಸಂಗತಿಗಳಲ್ಲಿ ನಾವು ಪ್ರಧಾನ ದೇವದೂತನಾದ ಮಿಕಾಯೇಲನ ಉದಾಹರಣೆಯನ್ನು ಅನುಸರಿಸಬಹುದು. ಆತನು ಸೈತನನ ವಿರುದ್ಧವಾಗಿ ನಿಂದನಾತ್ಮಕವಾದ ಯಾವುದೇ ಅಪಾದನೆಯನ್ನು ಮಾಡದೇ "ಕರ್ತನು ನಿನ್ನನ್ನು (ತನ್ನ ಸ್ವಂತ ಸಮಯದಲ್ಲಿ ಮತ್ತು ರೀತಿಯಲ್ಲಿ) ಖಂಡಿಸಲಿ" (ಯೂದ : 09) ಎಂದಷ್ಟೇ ಹೇಳಿದ್ದಾನೆ. ಅದರಂತೆ ನಮ್ಮೊಂದಿಗೂ. ದೇವರು ತನ್ನ ಸೂಕ್ತ ಸಮಯದಲ್ಲಿ ಮತ್ತು ಸೂಕ್ತ ರೀತಿಯಲ್ಲಿ ಈ ಸಂಸ್ಥೆಗಳನ್ನು ಖಂಡಿಸುತ್ತಾನೆ ಎಂಬುದನ್ನು ಗ್ರಹಿಸಿಕೊಂಡು ನಾವು ಅಪೋಸ್ತಲನೊಂದಿಗೆ "ಸಹೋದರನೇ, ತಾಳ್ಮೆಯಿಂದಿರು, ಕರ್ತನ ಬರೋಣವು ಸಮೀಪವಾಗಿದೆ," ಎಂದು ನಮ್ಮಷ್ಟಕ್ಕೆ ಹೇಳಿ ಕೊಳ್ಳಬಹುದು– ದೇವರ ರಾಜ್ಯದ ಸ್ಥಾಪನೆಯು ಹತ್ತಿರವಾಗಿದೆ. ಆಗಮಾತ್ರ ಆತನೇ ಇವೆಲ್ಲಾ ದೋಷಗಳನ್ನು ಸರಿಪಡಿಸುವನು. ಇವುಗಳ ಬಗ್ಗೆ ಮುಂಚಿತವಾದ ಪ್ರತಿಭಟನೆಯು ನಿಷ್ಪ್ರಯೋಜಕ ಮಾತ್ರವಲ್ಲ ಪ್ರತಿಭಟನೆ ಹೊಂದುವವರಿಗೂ, ಅದನ್ನು ಮಾಡುವವರಿಗೂ ಅನಾನುಕೂಲವೂ ಮತ್ತು ಹಾನಿಕರವೂ ಆಗಿ ಅತೃಪ್ತಿಯನ್ನು ಬೆಳೆಸುತ್ತದೆ. ಈ ಪ್ರತಿಭಟನೆಯನ್ನು ಪ್ರಶ್ನಿಸುವ ಕರ್ತನ ಸಮಯ ಬರುವಾಗ ಈ ಲೋಕದ ಮಕ್ಕಳಲ್ಲಿ ಬಹಳಷ್ಟು ಮಕ್ಕಳು ಪ್ರತಿಭಟಿಸುವವರಾಗಿರುತ್ತಾರೆ. ಅದೇ ಸಮಯದಲ್ಲಿ ನೂತನ ಸೃಷ್ಟಿಯ ಎಲ್ಲಾ ಸದಸ್ಯರು ಕಲಹ ಮತ್ತು ಅತೃಪ್ತಿಯನ್ನುಂಟುಮಾಡಬಹುದಾದ ಕಾರಣದಿಂದ ಅಂತಹ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಕರ್ತನ ಜನರಲ್ಲಿ ಮುಖ್ಯವಾಗಿ ಮಾತನಾಡುವವರು, ದೇವರ ಯೋಜನೆಯ ಆಳವಾದ ವಿಷಯಗಳನ್ನು ಹಾಗೂ ಆ ಸಂದರ್ಭಕ್ಕನುಸಾರವಾಗಿ ಸಂಕಟದ ಸಮಯದಿಂದಾಗಿ ಸ್ಥಾಪಿತವಾಗುವ ದೇವರ ರಾಜ್ಯದ ವಿಷಯವನ್ನು "ಕೇಳುವ ಕಿವಿಯುಳ್ಳವ"ರೊಂದಿಗೆ ಮಾತನಾಡುವುದರಲ್ಲಿ ತಮ್ಮ ವಿವೇಕವನ್ನು ಪ್ರದರ್ಶಿಸುವರು.

ನೂತನ ಸೃಷ್ಟಿಗಳು, ರಾಜವಂಶಸ್ಥರಾದ ಯಾಜಕರು ಈ ಲೋಕದವರಿಗಿಂತ ಮತ್ತು ಅದರ ಎಲ್ಲಾ ಪ್ರತಿಭಟನಾ ಮೂಲಗಳಿಂದ ಪ್ರತ್ಯೇಕವಾದ ವಿಶೇಷ ಕೆಲಸವನ್ನು ಹೊಂದಿರುತ್ತಾರೆ. ಈಗಾಗಲೇ ತೋರಿಸಿರುವಂತೆ ಪ್ರಸ್ತುತ ಸಮಯದಲ್ಲಿ ಅವರ ಕೆಲಸವೆಂದರೆ ಬೆಳ್ಳಿಯ ತುತೂರಿಗಳನ್ನು ಊದುವುದು – ದೇವರ ಯೋಜನೆಯ ಸತ್ಯತೆಯನ್ನು ಕೇಳುವ ಕಿವಿಯುಳ್ಳವರಿಗೆ, ವಿರೋಧಿಯ ಕುತಂತ್ರದಿಂದ ಅಂಧರಾಗದೇ, ಕಿವುಡರಾಗದೇ ಇರುವವರಿಗೆ ತಿಳಿಸುವುದು. ಅವರ ನಿಯೋಗವು ಕರ್ತನ ಜನರ ಮಧ್ಯದಲ್ಲಿಯೇ ಇರುವುದಾಗಿದ್ದು ಈ ಸುವಾರ್ತಾಯುಗದ ಕಾರ್ಯವನ್ನು ಮುಗಿಸಿ ಗೋಧಿಯನ್ನು ಕೂಡಿಸುವುದರಲ್ಲಿ ಅದೆ. (ಮತ್ತಾಯ 13:37–43)

ಮತ್ತೊಂದು ಚಿತ್ರದ ಅಡಿಯಲ್ಲಿ, ಸಭೆಯ ಪ್ರಸ್ತುತ ಕಾರ್ಯವನ್ನು ಮದುಮಗಳು ತನ್ನನ್ನು ಮದುವೆಗಾಗಿ ಸಿದ್ಧತೆಮಾಡಿಕೊಳ್ಳುವಂತೆ ತೋರಿಸಲಾಗಿದೆ (2ಕೊರಿಂಥ11:2, ಪ್ರಕಟನೆ 19:7). ಅವರ ಪ್ರಭಾವದ, ಸಂಪಾದನೆ ಮುಂತಾದವುಗಳ ಪ್ರತಿಯೊಂದು ಕಣದಲ್ಲಿಯೂ ನೂತನ ಸೃಷ್ಟಿಗಳಿಗೆ, ಲೋಕದ ಬಗ್ಗೆ ಪ್ರೀತಿಯಾಗಲೀ ಅದರ ಸಂಸ್ಥಾ ವ್ಯವಸ್ಥೆಗಳು, ಮುಂತಾದವುಗಳನ್ನು ಶಾಶ್ವತಪಡಿಸುವ ವ್ಯವಧಾನವಾಗಲೀ ಇರುವುದಿಲ್ಲ. ಪ್ರಸ್ತುತ ಕೆಟ್ಟದಾದ ಈ ಲೋಕವನ್ನು ನೀತಿಯು ವಾಸವಾಗಿರುವ ಪ್ರಪಂಚವಾಗಿ (ಇಬ್ರಿಯ 2:5; 2ಪೇತ್ರ: 3:13) ಮಾರ್ಪಡಿಸುವ ಲಾಭದಾಯಕ ವ್ಯವಸ್ಥೆಯ ಬಗ್ಗೆ ದೇವರ ಬುದ್ಧಿವಂತಿಕೆಯನ್ನು ಮುಂಗ್ರಹಿಸುವ ಪ್ರವೃತ್ತಿಯು ಸಹಾ ಇರುವುದಿಲ್ಲ.

## ಮಹಾ ವಿರೋಧಿಯಾದ ಸೈತಾನನು.
## The Great Adversary, Satan

ನಾವು ನಮ್ಮ ಸ್ವಂತ ದೇಹದ ಬಲಹೀನತೆಗಳೊಡನೆ ಮತ್ತು ನಮ್ಮ ಜೊತೆಗಾರರ ಅಸಮರ್ಪಕತೆಗಳೊಂದಿಗೆ ಹೋರಾಡುವುದಕ್ಕಿಂತ ಹೆಚ್ಚಾಗಿ ಅರ್ಥಮಾಡಿಕೊಳ್ಳುವಂತೆ "ನಿಮ್ಮ ವಿರೋಧಿಯಾಗಿರುವ ಸೈತಾನನು" ಎಂಬುದಾಗಿ ಅಪೋಸ್ತಲನು ಬರೆದಿರುತ್ತಾನೆ. ಸೈತಾನನಲ್ಲಿ ಮೋಸಕರವಾದ ಕುಯುಕ್ತಿ ಉಂಟೆಂದು ನಾವು ಗ್ರಹಿಸಬೇಕೆಂದು ಮತ್ತು ನಾವು ಆತನ ಶೋಧನೆಗಳಿಂದ ಮತ್ತು ಕೆಡುಕನ ಶಕ್ತಿಗಳಿಂದ ಹೊರಗಿರುವಂತೆ ನಮ್ಮ ಕುರುಬನ ಸಮೀಪವೇ ಇರಬೇಕೆಂದು ಆತನು ಬಯಸುತ್ತಾನೆ. ಈ ವಿರೋಧಿಯ ಇರುವಿಕೆಯನ್ನು ಕೆಲವರು ನಿರಾಕರಿಸುತ್ತಿರುವಾಗ ಆತನ ಬಗ್ಗೆ ದೇವರ ವಾಕ್ಯಗಳಲ್ಲಿ ಹೇಳಿರುವ ಕೆಲವೊಂದು ವಚನಗಳನ್ನು ನಾವು ಗಮನಿಸೋಣ :–

**"ನಿಮ್ಮ ವಿರೋಧಿಯಾಗಿರುವ ಸೈತಾನನು ಘರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1 ಪೇತ್ರ 5:8)**

**"ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಆತ್ಮನು ಅವನನ್ನು ಅಡವಿಗೆ ಒಯ್ದನು" (ಮತ್ತಾಯ 4:1)**

**"ಆಮೇಲೆ ಆತನು ಎಡಗಡೆಯಲ್ಲಿರುವವರಿಗೆ – ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಆವನ ದೂತರಿಗೂ ಸಿದ್ಧ ಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ" (ಮತ್ತಾಯ 25:41)**

**"ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರು ನಂಬಿ ರಕ್ಷಣೆ ಹೊಂದಬಾರದೆಂದು ವಾಕ್ಯವನ್ನು ಅವರ ಹೃದಯದಿಂದ ತೆಗೆದುಬಿಡುತ್ತಾನೆ " (ಲೂಕ 8:12)**

**"ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡೆಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲೇ ಇಲ್ಲ. ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ, ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ" (ಯೋಹಾ. 8: 44).**

**"ಅವರು ಊಟಕ್ಕೆ ಕೂತುಕೊಂಡಿದ್ದರು; ಅಷ್ಟರೊಳಗೆ ಸೈತಾನನು ಸಿಮೋನನ ಮಗನಾದ ಇಸ್ಕರಿಯೋತ ಯೂದನ ಮನಸ್ಸಿನಲ್ಲಿ ಯೇಸುವನ್ನು ಹಿಡುಕೊಡಬೇಕೆಂಬ ಆಶೆಯನ್ನು ಹುಟ್ಟಿಸಿದ್ದನು" (ಯೋಹಾನ 13:02)**

**"ಸೈತಾನನಿಗೆ ಅವಕಾಶಕೊಡಬೇಡಿರಿ" (ಎಫೆಸ. 4:27)**

**"ಸೈತಾನನ ತಂತ್ರೋಪಾಯಗಳ್ನು ನೀವು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ... ಧರಿಸಿಕೊಳ್ಳಿರಿ" (ಎಫೆಸ. 6:11)**

**"...ಅಂಥವನಾದರೆ ಉಬ್ಬಿಕೊಂಡು ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಗೆ ಒಳಗಾದಾನು... ಮತ್ತು ಸೈತಾನನ ಉರ್ಲಿನೊಳಕ್ಕೆ ಸಿಕ್ಕಿಬಿದ್ದಾನು" ( 1 ತಿಮೋ. 3: 6,7)**

**"ಸೈತಾನನ ಉರ್ಲಿಗೆ ಬಿದ್ದವರಾದ ಇವರು ಒಂದು ವೇಳೆ ತಪ್ಪಿಸಿಕೊಂಡು ದೇವರ ಚಿತ್ತವನ್ನು ಅನುಸರಿಸುವುದಕ್ಕೆ ಸ್ವಸ್ಥಚಿತ್ತರಾದಾರು"(2 ತಿಮೋ 2:26)**

**"ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನ್ನು ಅಡಗಿಸಿಬಿಡುವುದಕ್ಕೂ... ಅವರಂತೆ ರಕ್ತಮಾಂಸಧಾರಿಯಾದನು" (ಇಬ್ರಿಯ 2:14)**

**"ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು" (ಯಾಕೋಬ 4:7)**

**"ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಸೈತಾನನು ಪಾಪಮಾಡುವವನಾಗಿದ್ದಾನಲ್ಲಾ. ಸೈತಾನನ ಕೆಲಸಗಳನ್ನು ಲಯಮಾಡುವುದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು .... ಇವರು ದೇವರ ಮಕ್ಕಳೆಂಬುದೂ ಅವರು ಸೈತಾನನ ಮಕ್ಕಳೆಂಬುದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ" (1 ಯೋಹಾನ 3: 8, 10).**

**"ಪ್ರಧಾನ ದೇವದೂತನಾದ ಮಿಕಾಯೇಲನು ಮೋಶೆಯ ಶವದ ವಿಷಯದಲ್ಲಿ ಸೈತಾನನೊಡನೆ ವಾಜ್ಯಮಾಡಿ ವಾಗ್ವಾದ ಮಾಡಿದಾಗ ಅವನು ಸೈತಾನನ ಮೇಲೆ ದೂಷಣಾಭಿಪ್ರಾವನ್ನು ಹೇಳುವುದಕ್ಕೆ ಧೈರ್ಯಗೊಳ್ಳದೆ – ಕರ್ತನು ನಿನ್ನನ್ನು ಖಂಡಿಸಲಿ ಅಂದನು" (ಯೂದ : 09)**

"ಇಗೋ, ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವದಕ್ಕಿದ್ದಾನೆ" (ಪ್ರಕಟನೆ 2:10)

"ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟ ಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು; ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು"...(ಪ್ರಕಟನೆ 12:9,12)

"ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು... ಆ ಬೆಂಕಿಯ ಕೆರೆಯೇ ಎರಡನೆಯ ಮರಣವು" ( ಪ್ರಕಟನೆ 20: 10, 14)

"ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು" (ಯೋಹಾನ 12:31).

"ಇನ್ನು ನಾನು ನಿಮ್ಮ ಸಂಗಡ ಬಹಳ ಮಾತುಗಳನ್ನಾಡುವುದಿಲ್ಲ. ಯಾಕೆಂದರೆ, ಇಹಲೋಕಾಧಿಪತಿಯು ಬರುತ್ತಾನೆ. ಅವನಿಗೆ ಸಂಬಂಧಪಟ್ಟದ್ದು ಯಾವದೊಂದೂ ನನ್ನಲ್ಲಿಲ್ಲ" (ಯೋಹಾನ 14: 30)

" ಅವನು ಬಂದು ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು... ಇಹಲೋಕಾಧಿಪತಿಗೆ ನ್ಯಾಯತೀರ್ವಿಕೆಯಾದುದರಿಂದ ನ್ಯಾಯತೀರ್ವಿಕೆಯ ವಿಷಯದಲ್ಲಿಯೂ ಲೋಕಕ್ಕೆ ಅರುಹನ್ನು ಹುಟ್ಟಿಸುವನು" (ಯೋಹಾನ 16: 8, 11)

"ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; (ಎಫೆಸ. 2:2)

ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವಗಿರುವ ಕಾಲವು ಸ್ವಲ್ಪವೆಂದು ತಿಳಿದು ಮಹಾ ರೌದ್ರವುಳ್ಳವನಾಗಿ ನಿಮ್ಮ ಕಡೆಗೆ ಇಳಿದು ಬಂದಿದ್ದಾನೆ " ( ಪ್ರಕಟನೆ 12: 9,12)

"ಅವನು ಪಿಶಾಚನೂ ಸೈತಾನನೂ ಆಗಿರುವ ಪುರಾತನ ಸರ್ಪವೆಂಬ ಘಟ ಸರ್ಪನನ್ನು ಹಿಡಿದು ಸಾವಿರ ವರ್ಷ ಬಂಧನದಲ್ಲಿಟ್ಟನು. ಆ ಸಾವಿರ ವರ್ಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮರುಳುಗೊಳಿಸದ ಹಾಗೆ ದೇವದೂತನು ಅವನನ್ನು ಅಧೋಲೋಕಕ್ಕೆ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆ ಹಾಕಿದನು"(ಪ್ರಕಟನೆ 20:2,3)

"ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವುದಾದರೆ ನಾಶನಮಾರ್ಗದಲ್ಲಿರುವವರಿಗೇ ಮರೆಯಾಗಿರುವುದು. ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" (2 ಕೊರಿ. 4:3.4)

"ಆದರೆ ಫರಿಸಾಯರು ಅದನ್ನು ಕೇಳಿ – ಇವನು ದೆವ್ವಗಳ ಒಡೆಯನಾದ ಬೆಲ್ಜಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೇ ಹೊರತು ಬೇರೆ ರೀತಿಯಿಂದ ಬಿಡಿಸುವುದಿಲ್ಲ ಅಂದರು. ಆತನು ಅವರ ಆಲೋಚನೆಗಳನ್ನು ತಿಳಿದುಕೊಂಡು ಅವರಿಗೆ ಹೇಳಿದ್ದೇನೆಂದರೆ – ಯಾವ ರಾಜ್ಯವಾದರೂ ತನ್ನಲ್ಲಿ ಬೇಧ ಹುಟ್ಟಿದರೆ ಹಾಳಾಗುವುದು; ತನ್ನಲ್ಲಿ ಬೇಧ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. ಅದರಂತೆ ಸೈತಾನನು ಸೈತಾನನ್ನು ಹೊರಡಿಸಿದರೆ ತನ್ನಲ್ಲಿ ಬೇಧ ಹುಟ್ಟಿಸಿಕೊಂಡ ಹಾಗಾಯಿತು" ( ಮತ್ತಾಯ 12: 24–26)

"ಆಹಾ, ಉದಯನಕ್ಷತ್ರವೇ, ಬೆಳ್ಳಿಯೇ, ಆಕಾಶದಿಂದ ಹೇಗೆ ಬಿದ್ದೆ! ಜನಾಂಗಗಳನ್ನು ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯಲ್ಲಾ! . ಆದರೆ ನೀನು ಪಾತಾಳಕ್ಕೆ, ಅಧೋಲೋಕದ ಅಗಾಧ ಸ್ಥಳಗಳಿಗೆ ತಳ್ಳಲ್ಪಡುತ್ತಿದ್ದೀ" (ಯೆಶಾಯ 14: 12–14).

"ಸೈತಾನನು ತಾನೇ ಪ್ರಕಾಶ ರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ ಅವನ ಸೇವಕರೂ ಸಹ ನೀತಿಗೆ ಸೇವಕರಾಗಿ ಕಾಣಿಸಿಕೊಳ್ಳುವದಕ್ಕೆ ವೇಷ ಹಾಕಿಕೊಳ್ಳುವುದು ದೊಡ್ಡದಲ್ಲ " (2 ಕೊರಿ. 11:14)

"ಅಧರ್ಮಸ್ವರೂಪನ ಪ್ರಸನ್ನತೆಯು ಸೈತಾನನ ಮಾಟಕ್ಕನುಗುಣವಾಗಿರುವುದು. ಅದು ಮೋಸಗೊಳಿಸುವ ಸಕಲ ವಿಧವಾದ ಮಹತ್ಕಾರ್ಯ, ಸೂಚಕಕಾರ್ಯ, ಅದ್ಭುತಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗದಲ್ಲಿರುವವರಿ ಗೋಸ್ಕರ ಸಂಭವಿಸುವುದು. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ " ( 2 ಥೆಸ. 2 : 9,10)

"ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು; ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ" (2 ಕೊರಿ. 2:11)

ನಾವು ಹೋರಾಡುವುದು ಮನುಷ್ಯಮಾತ್ರದವ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" ( ಎಫೆಸ 6:12)

" ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು; ಕೆಡುಕನು ಅವನನ್ನು ಹಿಡಿಯುವುದಿಲ್ಲ. ನಾವು ದೇವರಿಂದ ಹುಟ್ಟಿದವರೆಂದೂ ಲೋಕವೆಲ್ಲವು ಕೆಡುಕನ ವಶದಲ್ಲಿ ಬಿದ್ದಿದೆ ಎಂದೂ ನಮಗೆ ಗೊತ್ತದೆ " (1 ಯೋಹಾನ 5: 18,19).

"ಒಂದಾನೊಂದು ದಿನ ದೇವದೂತರು ಕರ್ತನ ಸನ್ನಿಧಿಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಬರಲಾಗಿ ಸೈತಾನನು ಎಂಬ ಅಪಾದಕ ದೂತನು ಅವರ ಜೊತೆಯಲ್ಲಿ ಬಂದನು" (ಯೋಬ 1:06–12 ಮತ್ತು 2: 1–7 ಇವುಗಳನ್ನು ಓದಿರಿ).

**"ಸೈತಾನನು ಯೆಹೋಶುವನಿಗೆ ಪ್ರತಿಕಕ್ಷಿಯಾಗಿ ಅವನ ಬಲಗಡೆಯಲ್ಲಿ ನಿಂತಿದ್ದನು. ಆಗ ಕರ್ತನ ದೂತನು ಸೈತಾನನಿಗೆ – ಸೈತಾನನೇ, ಕರ್ತನು ನಿನ್ನನ್ನು ಖಂಡಿಸಲಿ, ಹೌದು ಯೆರೂಸಲೇಮನ್ನು ಆರಿಸಿಕೊಂಡಿರುವ ಕರ್ತನು ನಿನ್ನನ್ನು ಖಂಡಿಸಲಿ! ಅದು ಉರಿಯುವ ಕೊಳ್ಳಿಯಾಗಿದೆಯಲ್ಲಾ ಎಂದನು" (ಜೆಕರ್ಯ 3:1,2)**

**" ಸೈತಾನನು ಸಿಡಲಿನಂತೆ ಆಕಾಶದಿಂದ ಬೀಳುವುದನ್ನು ಕಂಡೆನು" (ಲೂಕ 10:18)**

**"ನಿನ್ನನ್ನು ನನ್ನ ಸೇವಕನನ್ನಾಗಿಯೂ ಸಾಕ್ಷಿಯನ್ನಾಗಿಯೂ ಆರಿಸಿಕೊಂಡಿದ್ದೇನೆ... ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು... ನಾನು ನಿನ್ನನ್ನು ಕಳುಹಿಸುತ್ತೇನೆ (ಅ.ಕೃ. 26: 16,18)**

**" ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು"( ರೋಮಾ. 16: 20)**

**"ಅಂಥವನ ಆತ್ಮವು ರಕ್ಷಣೆ ಹೊಂದುವುದಕ್ಕಾಗಿ ಅವನ ಶರೀರ ಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕು" ( 1 ಕೊರಿ. 5:5)**

**"ಇವರು ದೇವದೂಷಣೆ ಮಾಡಬಾರದೆಂಬುದನ್ನು ಕಲಿತುಕೊಳ್ಳುವಂತೆ ಇವರನ್ನು ಸೈತಾನನಿಗೆ ಒಪ್ಪಿಸಿಕೊಟ್ಟೆನು" (1 ತಿಮೋ.1:20)**

**"ಇಷ್ಟರೊಳಗೆ ಕೆಲವರು ದಾರಿಬಿಟ್ಟು ಸೈತಾನನ್ನು ಹಿಂಬಾಲಿಸಿದ್ದಾರೆ" (1ತಿಮೋಥೆ 5:15).**

**ನಮ್ಮ ಕರ್ತನು –"ಸೈತಾನನೇ ,(ವಿರೋಧಿಯೇ, ಅಂದರೆ ಆತ್ಮನಿಗೆ ವಿರೋಧವಾದವನೇ) ತೊಲಗಿಹೋಗು" (ಮತ್ತಾಯ 4:10) ಮತ್ತು ಪುನಃ ಪೇತ್ರನಿಗೆ – "ಸೈತಾನನೇ,(ವಿರೋಧಿಯೇ,) ನನ್ನ ಮುಂದೆ ನಿಲ್ಲ ಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೇ ಹೊರತು ದೇವರದಲ್ಲ" (ಮತ್ತಾಯ 16:23)ಎಂದು ಗದರಿಸಿದಾಗ ಆ ಮಾತುಗಳು ದೇವರ ವಿರುದ್ಧವಾದ ಅಭಿಪ್ರಾಯವನ್ನು ತಿಳಿಸುವುದಾಗಿದೆ. ದೇವರೊಂದಿಗಿನ ಸಾಮರಸ್ಯದಲ್ಲಿಯೂ ಇದೇ ಪರಿಸ್ಥಿತಿ ಕಂಡು ಬರುತ್ತದೆ. ಪೇತ್ರನು ಸೈತಾನನ ಬಗ್ಗೆ "ಸೈತಾನನು ಘರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1ಪೇತ್ರ 5:8) ಎಂದು ಪ್ರಕಟಿಸುವಾಗ, ಆತನು ನಮ್ಮ ವಿರೋಧಿ ಮಾತ್ರವಲ್ಲ, ಇಡೀ ಮಾನವ ಕುಲದ ವಿರೋಧಿ ಎಂದು ಬೋಧಿಸುವಂತೆ ಕಂಡುಬರುತ್ತದೆ ಈ ಬಗ್ಗೆ ನಮ್ಮ ಕರ್ತನು ನೇರವಾದ ಖಂಡಿತವಾದ ನುಡಿಗಳಲ್ಲಿ ಇದನ್ನು ವ್ಯಕ್ತಪಡಿಸಿದ್ದಾನೆ ( ಯೋಹಾನ 12:31, 14:30; 16:11 ಇವುಗಳನ್ನು ನೋಡಿರಿ).**

ಸೈತಾನನು ದೇವರ ಮಹಾ ವಿರೋಧಿಯು ಮಾತ್ರವಲ್ಲ, ಇಡೀ ಮಾನವ ಕುಲದ ಮಹಾ ವಿರೋಧಿಯೂ ಹೌದು ಎಂಬ ನಮ್ಮ ಕರ್ತನ ಪ್ರಕಟನೆಯು ಯಾವ ರೀತಿಯಲ್ಲಿಯೂ ಒಂದು ಕಲ್ಪನೆಯ ಅಥವಾ ತಮಾಷೆಯ ಮಾತುಗಳಲ್ಲ, ಆದರೆ ಅದೊಂದು ಸರಳ ಸತ್ಯ. ಆತನು ನಮ್ಮ ಶತ್ರು ಅಂದರೆ ಈ ಪ್ರಪಂಚ ಮತ್ತು ನಮ್ಮ ಸ್ವಂತ ದೇಹವು ನಮ್ಮ ವಿರೋಧಿಗಳಲ್ಲ. ನಮ್ಮ ಸ್ವಂತ ದೇಹವು ನೂತನ ಸೃಷ್ಟಿಯನ್ನು ಯಾವುದೇ ಕಹಿಯಾದ ದ್ವೇಷದಿಂದ ವಿರೋಧಿಸುವುದಿಲ್ಲ ಅಥವಾ ಅದರ ಲೌಕಿಕ ಅಥವಾ ನಿತ್ಯ ನಿರಂತರವಾದ ಅನಾನುಕೂಲತೆಯ ರಚನೆಗಾಗಿಯೂ ಅಲ್ಲ; ಆದರೆ ಬಿದ್ದುಹೋದ ದೇಹದ ಹಂಬಲಗಳು ನೂತನ ಸೃಷ್ಟಿಯ ಉತ್ತಮ ಹಿತದ ಮಾತು, ಆತ್ಮನನ್ನು ಪಡಕೊಂಡ ನಿರೀಕ್ಷೆಗಳ ವಿರುದ್ಧ ದಿಕ್ಕಿನಲ್ಲಿದೆ ಎಂಬ ಕೇವಲ ಕಾರಣಕ್ಕಾಗಿ. ಅದೇ ರೀತಿಯಲ್ಲಿ ಲೋಕದ ವಿರೋಧವು ದುರುದ್ದೇಶಪೂರ್ವಕವಾದುದಲ್ಲ, ಆದರೆ ಸಂಗತಿಗಳನ್ನು ವಿವಿಧ ಬೆಳಕಿನಡಿಯಲ್ಲಿ ನೋಡುವಾಗ, ಹಿತದ ಸ್ವಾರ್ಥಪೂರಿತವಾದ ಭಿನ್ನತೆಯ ಕಾರಣ ಅದು ಸ್ವಾರ್ಥ ಭರಿತವಾಗಿದೆ. ಸೈತಾನನು ಮಾತ್ರವೇ ಇಚ್ಛಾಭರಿತನಾದ, ಬುದ್ಧಿವಂತ ಪಿತೂರಿಗಾರನಾಗಿದ್ದಾನೆ ಮತ್ತು ಅತಿಮಾನುಷವಾದ ಬುದ್ಧಿವಂತಿಕೆಯನ್ನು ಉಪಯೋಗಿಸುವ ತಂತ್ರಗಾರನು ಮತ್ತು ಸಾಧ್ಯವಾದ ಮಟ್ಟಿಗೆ ಅತಿಮಾನುಷ ಶಕ್ತಿಯನ್ನು ಉಪಯೋಗಿಸಿ ನಮ್ಮ ಬಿದ್ದುಹೋದ ದೇಹಕ್ಕೆ ನೀತಿಭ್ರಷ್ಟವಾದ ಅಕಾಂಕ್ಷೆ ಮುಂತಾದವುಗಳನ್ನು ಹುಟ್ಟಿಸುವುದರ ಮೂಲಕ ಮರುಳುಗೊಳಿಸುತ್ತಾನೆ ಮತ್ತು ಪದೇ ಪದೇ ಈ ಲೋಕದವುಗಳನ್ನು ನೀತಿವಂತಿಕೆ ಮತ್ತು ಸತ್ಯ ಹಾಗೂ ಸತ್ಯ ಮಾರ್ಗದಲ್ಲಿ ನಡೆಯುವವರ ವಿರುದ್ಧ ತನ್ನ ಆಯುಧವನ್ನಾಗಿ ಮತ್ತು ಅರಿವಿಲ್ಲದ ಸಲಕರಣೆಗಳನ್ನಾಗಿ ಬಳಸುತ್ತಾನೆ.

## "ಆತನು ಆದಿಯಿಂದಲೂ ಸುಳ್ಳುಗಾರನೂ ಕೊಲೆಗಾರನೂ ಆಗಿದ್ದಾನೆ" (ಯೋಹಾನ 8 : 44)

### He Was a Liar and a Murderer from the Beginning -John 8:44

ಪ್ರೇರಣಾಪೂರ್ವಕವಾದ ದಾಖಲೆಗಳು ಸೈತಾನನು ಪಟ್ಟು ಹಿಡಿದವನಾಗಿ ಮತ್ತು ಏಕರೂಪವಾಗಿ ದೇವರ ನಿಯಮಕ್ಕೆ ವಿರೋಧವಾಗಿ ದಂಗೆ ಎದ್ದನು ಮತ್ತು ಅಧಿಕಾರಕ್ಕಾಗಿ ತನ್ನ ಸ್ವಂತ ಹಂಬಲದ ಮೂಲಕ ನಮ್ಮ ಆದಿ ತಂದೆತಾಯಿಗಳನ್ನು ಅವಿಧೇಯರಾಗುವಂತೆ ವಂಚಿಸಿದನು ಎಂಬುದನ್ನು ತಿಳಿಸುತ್ತವೆ. ಈ ರೀತಿಯಾದ ಮಾನವ ಪತನದ ನಿಮಿತ್ತವಾಗಿ ಇದೇ ವಿರೋಧಿಯು ದೇವರ, ನೀತಿವಂತಿಕೆಯ ಮತ್ತು ಸತ್ಯದ ನಿಷ್ಕರುಣನಾದ ವಿರೋಧಿಯಾಗಿದ್ದಾನೆ. ಆತನು ಮಾನವ ಜಾತಿಯನ್ನು ತನ್ನ ಪಾಶದಲ್ಲಿ ಬಂಧಿಸುವವನು ಮಾತ್ರವಲ್ಲ, ದೇವರು ಯೋಜಿಸಿದ ಮತ್ತು ಕ್ರಿಸ್ತನ ಮೂಲಕ ಸ್ಥಾಪಿಸಿದ ಪ್ರಾಯಶ್ಚಿತ ಬಲಿಯ ಮಹಾ ಯೋಜನೆಯನ್ನು ವಿರೋಧಿಸುವವನೂ ಆಗಿದ್ದಾನೆ. ಪರಿಶುದ್ಧ ಗ್ರಂಥಗಳಲ್ಲಿ ಹೇಳಿರುವಂತೆ, ಸೈತಾನನು ದೇವರನ್ನು ಬಿಟ್ಟುಹೋಗಿ ಈ ಲೋಕದಲ್ಲಿ ತನ್ನದೇ ಸಾಮ್ರಾಜ್ಯವನ್ನು ಸ್ಥಾಪಿಸಲು ಬಂದಾಗ ಆತನಿಗೆ ದೇವದೂತರುಗಳಲ್ಲಿ ಸಹಾನುಭೂತಿಗಳು ಅಥವಾ ಜೊತೆಪಿತೂರಿಗಾರರು ಯಾರೂ ಇದ್ದಿಲ್ಲ. ಹೀಗಾಗಿ ಆತನು ದೇವರ ಇತ್ತೀಚಿನ ಸೃಷ್ಟಿಗಳಾದ ಮಾನವರನ್ನು ತನ್ನ ಪ್ರಜೆಗಳನ್ನಾಗಿ ಮಾಡಿಕೊಂಡನು. ಸೈತಾನನು ಸಹಾ ದೇವರ ಸಾಮಾನ್ಯ ಸೃಷ್ಟಿಯಾಗಿದ್ದವನು ಎಂಬುದು ಖಚಿತವಾಗಿರುವಂತೆ ಆತನೂ ಸಹಾ ಪರಿಪೂರ್ಣನಾಗಿಯೇ ದೇವರ ಸ್ವರೂಪದಲ್ಲಿ

ಉಂಟುಮಾಡಲ್ಪಟ್ಟವನು ಎಂಬುದು ಖಚಿತ. ದೇವರ ಸಮಸ್ತ ಕಾರ್ಯಗಳೂ ಪರಿಪೂರ್ಣವಾದವುಗಳು (ಎಫೆಸ.3:9) "ನಮ್ಮ ಶರಣನಾದ ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ" (ಧರ್ಮೋಪದೇಶ. 32:4). ಆತನ ಬಳಿ ಒಂದೇ ಮಟ್ಟದ ಧರ್ಮಶೀಲತೆ, ನ್ಯಾಯ, ಪರಿಪೂರ್ಣತೆ ಇವುಗಳು ಉಂಟು ಮತ್ತು ಆತನು ಸಹಾ ಅದೇ ಮಟ್ಟದಲ್ಲಿದ್ದಾನೆ.

ಆದರೆ, ಪರಿಪೂರ್ಣವಾಗಿ ಸೃಷ್ಟಿಗೊಳ್ಳುವುದು, ಮತ್ತು ಪರಿಪೂರ್ಣವಾಗಿರುವುದು ಇವೆರಡೂ ಬೇರೆ ಬೇರೆ ಪ್ರಸ್ತಾಪಗಳು. ದೇವರು ತನ್ನ ಯಾವುದೇ ಒಂದು ಬುದ್ಧಿವಂತ ಸೃಷ್ಟಿಯನ್ನು ಉದ್ದೇಶ ಮತ್ತು ನಡತೆಯನ್ನು ಬದಲಾಯಿಸಿಕೊಳ್ಳಲಾಗದ ಕೇವಲ ಯಂತ್ರವನ್ನಾಗಿ ಸೃಷ್ಟಿಸಲು ಸಂತೋಷಪಡುವವನಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆತನು ತನ್ನ ಸೃಷ್ಟಿಯ ಎಲ್ಲಾ ನೈತಿಕ ಬುದ್ಧಿವಂತ ಜೀವಿಗಳನ್ನು ತನ್ನಂತೆಯೇ, ತನ್ನ ಸ್ವರೂಪಕ್ಕೆ ತಕ್ಕಂತೆ ಅಂದರೆ ಸರಿಯಾದ, ಸತ್ಯವಾದ, ಶುದ್ಧವಾದ, ಒಳ್ಳೆಯದಾದ ರೀತಿಯಲ್ಲಿ, ತನ್ನ ಮಾದರಿಗೆ ಮತ್ತು ಕಟ್ಟಳೆಗೆ ಅನುಗುಣವಾಗಿ ಅವನ್ನು ಪಾಲಿಸುವಂತೆ ಸೃಷ್ಟಿಸುವಲ್ಲಿ ಸಂತೋಷಿಸುತ್ತಾನೆ; ಆದರೆ ಈ ಕಟ್ಟಳೆಗಳ ಸಂಗತಿಗಳಲ್ಲಿ ತಮ್ಮ ನಡವಳಿಕೆಯನ್ನು ಅದಲು ಬದಲಿಸುವ, ಹಿಂದೆ ಮುಂದೆ ಮಾಡುವ, ಆತನ ನೈತಿಕ ನಿಯಮಗಳ ವಿರುದ್ಧ ದಂಗೆ ಏಳುವ ಅಧಿಕಾರವನ್ನೆಲ್ಲಾ ಅವರಿಗೇ ಬಿಟ್ಟುಕೊಟ್ಟಿರುತ್ತಾನೆ. ಆದಾಗ್ಯೂ, ದೇವರು ತನ್ನ ಕೈಯಲ್ಲಿ ನಿತ್ಯಜೀವದ ಅಧಿಕಾರವನ್ನು ಇಟ್ಟುಕೊಳ್ಳುವುದರ ಮೂಲಕ ಈ ಸಂಗತಿಗಳನ್ನು ಕಾಪಾಡುವವನಾಗಿದ್ದಾನೆ: ಈ ಕಾರಣ ಅವನ ಬಳಿಯಲ್ಲಿ ಪರಿಸ್ಥಿತಿಯ ಸಂಪೂರ್ಣ ನಿಯಂತ್ರಣವಿರುತ್ತದೆ ಮತ್ತು ತನ್ನ ನೈತಿಕ ಅಗತ್ಯತೆಗಳನ್ನು ನಿರಾಕರಿಸುವ ಮತ್ತು ಅವುಗಳಿಗೆ ಅವಿಧೇಯತೆ ತೋರುವ ತನ್ನ ಯಾವುದೇ ಸೃಷ್ಟಿಯನ್ನು ಆತನು ನಾಶಗೊಳಿಸಬಹುದು. ಅವರು ಎಂದೂ ಇಲ್ಲದಂತೆ ಆತನು ಅವರ ಇರುವಿಕೆಯನ್ನೇ ಅಳಿಸಿ ಬಿಡಬಹುದು ಮತ್ತು ಕೇವಲ ತನ್ನ ಗುಣಧರ್ಮಗಳೊಂದಿಗೆ ಹೃದಯಪೂರ್ವಕವಾದ ಸಾಮರಸ್ಯವುಳ್ಳವರನ್ನು ಮಾತ್ರವೇ ಜೀವಿಸುವಂತೆ ಅನುಮತಿಸುವ ಸೂಚನೆ ನೀಡುತ್ತಾನೆ.

ಉನ್ನತ ಮಟ್ಟದ ದೇವದೂತರುಗಳಲ್ಲಿ (ಸೈತಾನನೂ ಇವರಲ್ಲಿ ಒಬ್ಬನಾಗಿದ್ದನು) ಪ್ರಾರಂಭದಿಂದಲೂ ಮತ್ತು ಈಗಲೂ ಸಹಜವಾಗಿ ವಿವಿಧ ದರ್ಜೆಗಳೂ, ಶ್ರೇಣಿಗಳೂ ಅವೆ. ಆದರೂ ಎಲ್ಲರೂ ಪ್ರೀತಿಯ ನಿಯಮಕ್ಕೆ ಬದ್ಧರಾಗಿದ್ದಾರೆ ಮತ್ತು ಸೃಷ್ಟಿಕರ್ತನ ಚಿತ್ತಕ್ಕೆ ವಿಧೇಯರಾಗಿ ಅವರೆಲ್ಲರೂ ಸೇರಿಕೊಂಡು ಒಗ್ಗಟ್ಟಾಗಿ ಸಾಮರಸ್ಯದೊಂದಿಗೆ ಬಹುಶಃ ಯುಗಾಂತರಗಳಿಂದಲೂ ತಮ್ಮ ಕಾರ್ಯ ನಿರ್ವಹಿಸುವವರಾಗಿದ್ದಾರೆ. ಒಳ್ಳೆಯತನ, ಪ್ರೀತಿ, ಕರುಣೆ ಮತ್ತು ವಿಧೇಯತೆಗಳನ್ನು ತಮ್ಮ ಪರಲೋಕದ ತಂದೆಯ ಅಗತ್ಯತೆಗಳಿಗೆಗೆ ವ್ಯಕ್ತಪಡಿಸುವವರಾಗಿದ್ದಾರೆ. ಇದರ ಫಲವಾಗಿ ದೊರೆಯುವ ಸಂತೋಷವು ಬಹಳ ಸಮಯಗಳಿಂದ ಅವರ ಒಂದೇ ಅನುಭವವಾಗಿದೆ. ಆದರೆ, ಇದೇ ಸಮಯದಲ್ಲಿ ದೇವರ ಯೋಜನೆಯ ಮತ್ತೊಂದು ಲಕ್ಷಣವು ಬೆಳೆದು ಬಂತು. ಮಾನವರನ್ನು ದೇವದೂತರುಗಳಿಗಿಂತ ಭಿನ್ನವಾದ ರೀತಿಯಲ್ಲಿ ಅಂದರೆ ಸ್ವಲ್ಪ ಕೆಳಮಟ್ಟದ ಸ್ವಭಾವದಲ್ಲಿ, – ಮಾನವ ರೀತಿಯಲ್ಲಿ, ದೇವದೂತರುಗಳಂತಲ್ಲ, ಭೂಸಂಬಂಧವಾಗಿ, ಪರಲೋಕದವರಂತೆ ಅಲ್ಲ – ದೈಹಿಕವಾಗಿ, ಆತ್ಮಿಕವಾಗಿ ಮಾನವ ಕುಲಕ್ಕೆ ಪ್ರತ್ಯೇಕವಾದ ಮನೆಯಿದೆ ಅಲ್ಲದೆ ಕುಟುಂಬ ಸುವ್ಯವಸ್ಥೆಯಲ್ಲಿ, ಗಂಡು ಹೆಣ್ಣುಗಳನ್ನಾಗಿ ಜೊತೆ ಜೊತೆಯಾಗಿದ್ದು ತಮ್ಮ ಸ್ವಂತ ಸಂತಾನ ವೃದ್ಧಿಪಡಿಸುಕೊಳ್ಳುವ ಲೈಂಗಿಕ ಶಕ್ತಿಯೊಡನೆ ಮಾನವರನ್ನು ಸೃಷ್ಟಿಸಲಾಯಿತು. ಇವೆಲ್ಲವುಗಳಲ್ಲಿ ಅವರು ಲೈಂಗಿಕವಾಗಿ ಭಿನ್ನವಾಗಿರುವ, ಕುಟುಂಬ ವ್ಯವಸ್ಥೆ ಇಲ್ಲದ, ಮತ್ತು ತಮ್ಮ ಸ್ವಂತ ಸಂತಾನವನ್ನು ವೃದ್ಧಿಪಡಿಸದ ದೇವದೂತರುಗಳಿಗಿಂತ ಪ್ರತ್ಯೇಕವಾದವರು. ದೇವರ ಈ ಇತ್ತೀಚಿನ ಸೃಷ್ಟಿಯು ಅತಿಥೇಯರಾದ ದೇವದೂತರುಗಳಿಗೂ ಅದ್ಭುತವಾಗಿ ಕಂಡುಬಂತು ಮತ್ತು ಈ ಸಂಬಂಧದಲ್ಲಿ ಅವರ ವಿವೇಚನಾ ಸಾಮರ್ಥ್ಯಕ್ಕೆ ಕಾರ್ಯವೆಸಗುವಂತೆ ವಿಪುಲವಾದ ಅವಕಾಶಗಳು ದೊರೆತವು.

ಆಗ ಈ ಉತ್ತಮ ಶ್ರೇಣಿಯವರನ್ನು ಒಬ್ಬನು ತನ್ನ ಸ್ವಾರ್ಥ ಸಾಧನೆಗಾಗಿ ಮತ್ತು ಮಹತ್ವಾಕಾಂಕ್ಷೆಯ ಆಲೋಚನೆಯಿಂದ ಆತನು ಹೇಗಾದರೂ ನೂತನವಾಗಿ ಸೃಷ್ಟಿಸಲ್ಪಟ್ಟ ಮಾನವ ಜೋಡಿಯನ್ನು ವಶಪಡಿಸಿಕೊಳ್ಳಬಹುದಾದರೆ, ಮತ್ತು ಅವರನ್ನು ದೇವರಿಂದ ವಿಮುಖಗೊಳಿಸಿದಲ್ಲಿ ತಾನು ಅವರ ಮೂಲಕವಾಗಿ ತನ್ನದೇ ಆದ ವಿಶೇಷ ರಾಜ್ಯವೊಂದನ್ನು ಸ್ಥಾಪಿಸಬಹುದು, ಮತ್ತು ಈ ರಾಜ್ಯಕ್ಕೆ ತಾನೇ ಅಧಿಪತಿಯೂ, ದೇವರೂ ಆಗಬಹುದು, ಯೆಹೋವನು ಹೊಂದುತ್ತಿರುವ ಮಾನವರ, ಲೋಕದ ಗೌರವಗಳನ್ನು ತಾನು ಅಪಹರಿಸಬಹುದು ಎಂಬ ತೀರ್ಮಾನಕ್ಕೆ ಬಂದನು. ಆತನ ಈ ಅಪರಾಧಿ ಕ್ರಮವು ಆತನಿಗೆ ಪ್ರಸ್ತುತವಾದ "ಸೈತಾನ' – ಅಂದರೆ ದೇವರ ವಿರೋಧಿ ಎಂಬ ಹೆಸರನ್ನು ನೀಡಿತು. ಆತನು ದೇವದೂತರುಗಳಿದ್ದ ದೇವರ ರಾಜ್ಯವನ್ನು ಆತನಿಂದ ವಶಪಡಿಸಿಕೊಳ್ಳುವ ಯೋಚನೆಯನ್ನಾಗಲೀ, ಪ್ರಯತ್ನವನ್ನಾಗಲೀ ಮಾಡಲಿಲ್ಲ. ಅಂತಹ ಪ್ರಯತ್ನವು ಅಸಂಬದ್ಧವಾಗುತ್ತಿತ್ತು. ಯಾಕೆಂದರೆ, ಎಲ್ಲಾ ದೇವದೂತರುಗಳು ದೇವರೊಂದಿಗೆ ನಿಕಟವಾಗಿ ಹೊಂದಿಕೊಂಡಿದ್ದರು ಮತ್ತು ಸೈತಾನನು ತಮ್ಮಲ್ಲಿ ಒಬ್ಬಾತನು ಎಂದು ಚೆನ್ನಾಗಿ ಬಲ್ಲವರಾಗಿದ್ದರು. ಆದುದರಿಂದ ಅವರು ಆತನ ಸೇವಕರಾಗಲು, ಹಿಂಬಾಲಕರಾಗಲು ಒಪ್ಪುತ್ತಿದ್ದಿಲ್ಲ. ಅವರೆಲ್ಲರೂ ಸರ್ವಶಕ್ತನಾದ ಯೆಹೋವನ ರಾಜ್ಯಭಾರವನ್ನು ಬಹುವಾಗಿ ಇಷ್ಟಪಡುವವರಾಗಿದ್ದರು ಮತ್ತು ಅದರಲ್ಲಿಯೇ ಸಂಪೂರ್ಣವಾಗಿ ತೃಪ್ತರಾಗಿದ್ದರು ಮತ್ತು ತಾವು ಬಹಳವಾಗಿ ಪ್ರೀತಿಸುವ ಆ ವಿವೇಕಯುತವಾದ ರಾಜ್ಯದ ವಿರುದ್ಧ ದಂಗೆ ಏಳಲು ಯಾವುದೇ ಕಾರಣಕ್ಕೂ ಅವರು ಸಿದ್ಧರಿದ್ದಿಲ್ಲ.

ಸೈತಾನನ ಹೃದಯದಲ್ಲಿ ಅಂಥಹ ಸ್ವಾರ್ಥ ಹಂಬಲವು ಮನೆಮಾಡಿದ ತಕ್ಷಣದಲ್ಲಿ ಆತನು ದೇವರನ್ನು ತನ್ನ ಸ್ವಂತ ಹುಸಿಯಾದ ಮಟ್ಟದಲ್ಲಿ ಅಳೆಯತೊಡಗಿದನು ಮತ್ತು ಕರ್ತನಾದ ಯೆಹೋವನು ತನ್ನ ಎಲ್ಲಾ ಕಾರ್ಯಗಳಲ್ಲಿ ಕೇವಲ ತನ್ನ ಸ್ವಾರ್ಥ ಆಕಾಂಕ್ಷೆಯ ವಿನ್ಯಾಸಗಳನ್ನು ಹೊಂದಿದ್ದಾನೆಂದು ಊಹಿಸತೊಡಗಿದನು. ಈ ರೀತಿಯಲ್ಲಿ ಕೆಟ್ಟ ಹೃದಯವು ಇತರರಿಗೆ ಅವರು ಎಷ್ಟೋ ಪವಿತ್ರರೂ, ಗೌರವಾನ್ವಿತರೂ, ಪರೋಪಕಾರಿಗಳಾದಾಗ್ಯೂ ಅವರ ಮೇಲೆ ಕೆಡುಕನ್ನು ಆರೋಪಿಸಲು ಸದಾ ಸಿದ್ಧವಾಗುತ್ತದೆ. ಸೈತಾನನು ತನ್ನ

ಕ್ರಮವನ್ನು ಮೊದಲಿಗೆ ಕನಿಷ್ಟವಾಗಿ ತಪ್ಪು ವಿವೇಚನೆಯಿಂದ ಸಮರ್ಥಿಸಿಕೊಂಡನು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮಾನವಜಾತಿಯನ್ನು ಆತ್ಮೀಯ ಜೀವಿಗಳಾದ ದೇವದೂತರುಗಳಿಗಿಂತ ಕಡಿಮೆ ಮಟ್ಟದಲ್ಲಿ ಸೃಷ್ಟಿಸುವುದರ ಮೂಲಕ ದೇವರು ಅಮಂಗಳಕರವಾದ ಸ್ವಾರ್ಥ ಉದ್ದೇಶಗಳನ್ನು ಹೊಂದಿದ್ದಾನೆಂದು ಆತನು ಊಹಿಸಿದನು ಮತ್ತು ಅವರನ್ನು ಈ ಭೂಮಿಗೆ ಮಿತಿಗೊಳಿಸಿರುವುದು ಅವರನ್ನು ಪೂರ್ಣವಾಗಿ ಗುಲಾಮರನ್ನಾಗಿ ಮಾಡಿಕೊಳ್ಳುವೆನು ಎಂದು ಆತನು ಆಲೋಚಿಸಿದನು. ಒಮ್ಮೆ ಈ ರೀತಿಯ ಮತ್ಸರದ, ದಂಗೆ ಏಳುವ ಅಪವಿತ್ರವಾದ ಆಲೋಚನೆಗಳಿಗೆ ತನ್ನ ಹೃದಯದಲ್ಲಿ ಎಡೆಮಾಡಿಕೊಟ್ಟ ಮೇಲೆ ಈ ಕೆಟ್ಟತನವು ಮುಕ್ತವಾದ ಪಾಪವನ್ನು ಸಲಹೆ ಮಾಡಿ ಅದನ್ನು ದೇವರ ವ್ಯವಸ್ಥೆಗೆ ವಿರೋಧವಾಗಿ ಪ್ರಕಟಿಸಿಕೊಳ್ಳುವಂತೆ ಮತ್ತಷ್ಟು ವೃದ್ಧಿಗೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ.

ಸೈತಾನನು ಆದಿ ಮಾತೆಯಾದ ಹವ್ವಳನ್ನು ಸಂಪರ್ಕಿಸಿ ಆಕೆಗೆ ಏದೇನ್ ತೋಟದಲ್ಲಿನ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ನೀಡಿರುವ ಕಟ್ಟಪ್ಪಣೆಯು ಆಕೆಗೂ ಆಕೆಯ ಸಂಗಾತಿಯಾದ ಆದಾಮನಿಗೂ ತಮ್ಮ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಚಲಾಯಿಸದಂತೆ ಅವರನ್ನು ಅಂಕೆಯಲ್ಲಿಡಲು ಒಂದು ವಿಧವಾಗಿ ಅಯುಕ್ತವಾದ, ನಿರಂಕುಶವಾದ ಶಕ್ತಿಯಾಗಿದೆ ಎಂದು ಅವರಿಗೆ ಮನವರಿಕೆ ಮಾಡಲು ಪ್ರಯತ್ನಿಸುವುದರ ಮೂಲಕ ಆತನು ಬಹುಶಃ, ನಿಜವಾಗಿಯೂ ದಬ್ಬಾಳಿಕೆಗೊಳಗಾದವರಿಗೆ ನ್ಯಾಯವನ್ನು ದೊರಕಿಸಿದನೆಂದು ತಿಳಿಯುವುದು ತಪ್ಪು ಕಲ್ಪನೆಯಾಗಿದೆ. ಆತನು ತಾಯಿಯಾದ ಹವ್ವಳಿಗೆ ಮಾರ್ಗ ತಪ್ಪಿಸುವಂತೆ ಆ ಹಣ್ಣನ್ನು ತಿನ್ನುವುದರಿಂದ ಅವರು ನಾಶವಾಗುತ್ತಾರೆ, ಮರಣ ಹೊಂದುತ್ತಾರೆ ಎಂಬ ದೇವರ ತೀರ್ಪು ಸುಳ್ಳಾದುದೆಂದು ಬಹುಶಃ ತನ್ನ ಸತ್ಯವಾದ ಅಭಿಪ್ರಾಯವನ್ನು ತಿಳಿಸಿದನು. ದೇವರು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದ ಯಾವ ಮಾನವನ ಸಾವನ್ನೂ ಇದುವರೆಗೆ ಸೈತಾನನು ನೋಡಿದ್ದಿಲ್ಲ. ಆದುದರಿಂದ ಆತನ ವಕ್ರ ಮನೋವೃತ್ತಿಯ ಮನಸ್ಸಿನಲ್ಲಿ ಆತನಿಗೆ ಸೃಷ್ಟಿಯ ಸಂಬಂಧದಲ್ಲಿ ದೇವರಿಗೆ ಅಮಂಗಳಕಾರವಾದ ಉದ್ದೇಶಗಳಿತ್ತು ಮತ್ತು ಈಗ ಅವರನ್ನು ಅಜ್ಞಾನದಲ್ಲಿಡುವ ತನ್ನ ಯೋಜನೆಯನ್ನು ಕಾರ್ಯಗತಗೊಳಿಸುವಂತೆ ದೇವರು ಬೇಕೆಂತಲೇ ತನ್ನ ಸೃಷ್ಟಿಗಳಿಗೆ ಸುಳ್ಳುಹೇಳಿದ್ದಾನೆ ಎಂದು ಆರೋಪಿಸುತ್ತಾನೆ. ಸೈತಾನನು ಆ ಸಮಯದಲ್ಲಿ ದೇವರು ಒಬ್ಬ ನಿರ್ದಯಾತ್ಮಕ ನಿರಂಕುಶ ಅಧಿಕಾರಿ ಎಂದು ಸಂಶಯವಿಲ್ಲದೆ ತೀರ್ಮಾನಿಸಿದ್ದನು.

ಕೆಡುಕನ ಸಲಹೆಯು ತನ್ನ ಪರಿಣಾಮವನ್ನು ಬೀರಿತು. ಈ ವರೆಗೆ ದೇವರಿಗೆ ಕೃತಜ್ಞವಾಗಿದ್ದು ಆತನ ಎಲ್ಲಾ ಕೃಪೆ, ಕರುಣೆ ಮತ್ತು ಆಶೀರ್ವಾದಗಳನ್ನು ಮೆಚ್ಚಿಕೊಂಡಿದ್ದಂತಹ, ಆತನನ್ನು ಕೃಪೆಯ, ಸತ್ಯದ, ಪರೋಪಕಾರದ ಮತ್ತು ಪ್ರೀತಿಯ ಬುಗ್ಗೆಯೆಂದು ಗ್ರಹಿಸಿದ್ದ ತಾಯಿ ಹವ್ವಳ ಮನಸ್ಸಿಗೆ ವಿಷ ತುಂಬಿತು. ಈಗ ತನಗೆ ಮೋಸವಾಗಿದೆ, ತನ್ನ ಹಕ್ಕಾದ ಹೆಚ್ಚಿನ ಜ್ಞಾನವನ್ನು ಪಡಕೊಳ್ಳದಂತೆ ತನಗೆ ತಡೆಯೊಡ್ಡಲಾಗುತ್ತಿದೆ ಮತ್ತು ದೇವರು ತಮ್ಮನ್ನು ಅಜ್ಞಾನವೆಂಬ ಗುಲಾಮಗಿರಿಯಲ್ಲಿಡಲು ನಿರ್ಧರಿಸಿ ತಮಗೆ ಮರಣದ ಬೆದರಿಕೆ ಹಾಕಲಾಗಿದೆ ಎಂಬಿತ್ಯಾದಿ ತಪ್ಪು ಕಲ್ಪನೆಗಳು ಒಂದೊಂದಾಗಿ ಆಕೆಯಲ್ಲಿ ಹೊಕ್ಕ ತೊಡಗಿದವು. ಅವರ ನೆಮ್ಮದಿ ಮತ್ತು ಸ್ವಾತಂತ್ರ್ಯಗಳ ಬಗ್ಗೆ ಮತ್ಸರವುಳ್ಳ, ಹೊಸದಾಗಿ ಕಾಣಿಸಿಕೊಂಡ ಅವರ ಸ್ನೇಹಿತನಾದ ಸೈತಾನನು ಅವರನ್ನು ಉತ್ತಮವಾಗಿ ಪ್ರೀತಿಸುವವನಂತೆ ನಟಿಸಿ, ತಿನ್ನಬಾರದೆಂದು ಹೇಳಿರುವ ಹಣ್ಣನ್ನು ಅವರು ತಿಂದರೆ ಅವರಿಗೆ ಯಾವುದೇ ವಿಪತ್ತೂ ಸಂಭವಿಸದು, ಮರಣವಂತೂ ಬರುವುದೇ ಇಲ್ಲ, ಬದಲಾಗಿ ಅವರಿಗೆ ಹೆಚ್ಚಾದ ಜ್ಞಾನವುಂಟಾಗುತ್ತದೆ, ತಮ್ಮೆಲ್ಲಾ ಶಕ್ತಿಗಳನ್ನು ಉಪಯೋಗಿಸುವ ಸ್ವಾತಂತ್ರ್ಯ ಹೆಚ್ಚಾಗುತ್ತದೆ ಎಂಬ ತಪ್ಪು ಭರವಸೆಗಳನ್ನು ನೀಡುತ್ತಾನೆ. ಆತನು ಬಿತ್ತಿದ ಈ ವಿಷವು ತ್ವರಿತವಾಗಿ ತನ್ನ ಕಾರ್ಯವನ್ನು ಆರಂಭಿಸುತ್ತದೆ; ಸ್ವಾರ್ಥತೆ ಮತ್ತು ಸಂಕಲನಶೀಲತೆಯು ತಾಯಿಯಾದ ಹವ್ವಳ ಹೃದಯದಲ್ಲಿ ಹುಟ್ಟಿಕೊಂಡಿತು. ಈವರೆಗೆ ಆಕೆಯಲ್ಲಿ ಅಂತಹ ಮನೋಭಾವನೆಗಳು ಇದ್ದಿಲ್ಲ. ಯಾಕೆಂದರೆ, ಆಕೆಯ ಹಿಂದಿನ ಅನುಭವಗಳು ಆಕೆಗೆ ಅಂತಹ ಆಲೋಚನೆಯನ್ನಾಗಲೀ ಅಥವಾ ಚಿತ್ತ ವೃತ್ತಿಯನ್ನಾಗಲೀ ಉಂಟುಮಾಡಿರಲಿಲ್ಲ.

ಸೈತಾನನ ಸ್ಥಾನವು ಈ ವಿಷಯದ ಕಾರಣ ಯೆಹೋವ ದೇವರಿಂದ ನಿಜವಾಗಿಯೂ ಪ್ರತ್ಯೇಕಿಸಿಗೊಂಡಿತು. ನೂತನ ಮಾನವ ಜಾತಿಯನ್ನು ತನ್ನ ಗುಲಾಮರನ್ನಾಗಿ, ಬಹುಶಃ ಅವರನ್ನು ತನ್ನ ರಾಜ್ಯದ ಪ್ರಜೆಗಳನ್ನಾಗಿ ಮಾಡಿಕೊಳ್ಳಲು ಆತನು ತನ್ನೆಲ್ಲಾ ಸಾಮರ್ಥ್ಯವನ್ನು ಪಣವಾಗಿಟ್ಟನು. ಆತನು ನೂತನ ಮಾನವ ಕುಟುಂಬವನ್ನು ದೇವರ ನಿರಂಕುಶ ಪ್ರಭುತ್ವದಿಂದ ಮುಕ್ತಿಗೊಳಿಸಲು ತನ್ನೆಲ್ಲಾ ಪ್ರಯತ್ನಗಳನ್ನು ಮುಡುಪಾಗಿಟ್ಟನು. ಆತನು ತನ್ನ ಆಕ್ರಮಣದ ಪರಿಣಾಮವನ್ನು ಕಂಡಾಗ,– ಮಾನವ ಜೋಡಿಯನ್ನು ಏದೇನ್ ತೋಟದಿಂದ ಹೊರಹಾಕಿದಾಗ, ಜೀವದಾಯಕ ವೃಕ್ಷವು ಅವರ ಪಾಲಿಗೆ ಮುಚ್ಚಲ್ಪಟ್ಟಾಗ, ಅವರು ಕ್ರಮೇಣ ಸೊರಗಿ, ನಾಶಗೊಳ್ಳಲು ಪ್ರಾರಂಭಿಸಿದಾಗ, ಆತನಿಗೆ ನಿರಾಶೆಯಾಯಿತು ಎಂಬುದರಲ್ಲಿ ಸಂದೇಹವಿಲ್ಲ. ತಾಯಿ ಹವ್ವಳಿಗೂ ಹಾಗೆಯೇ ಆಯಿತು. ನಮಗೆ ತಿಳಿದುಬರುವಂತೆ ಆದಾಮನು ವಂಚನೆಗೆ ಒಳಗಾಗಲಿಲ್ಲ. ಅವಿಧೇಯತೆಯ ಫಲವಾಗಿ ಏನನ್ನು ನಿರೀಕ್ಷಿಸಬಹುದೆಂದು ಆತನಿಗೆ ತಿಳಿದಿತ್ತು. ಈ ವ್ಯವಹಾರದಲ್ಲಿ ಆತನ ಪಾಲು ಸ್ವಯಿಚ್ಛೆಯದಾಗಿತ್ತು. ಇದನ್ನು ಆತ್ಮಹತ್ಯೆ ಎಂದು ನಾವು ಕರೆಯುತ್ತೇವೆ. ತನ್ನ ಪತ್ನಿಯು ತಿನ್ನಬಾರದೆಂದು ಆಜ್ಞಾಪಿಸಿದ್ದ ಹಣ್ಣನ್ನು ತಿಂದ ಕಾರಣ ಸಾಯಬೇಕಾಗಿದೆ ಎಂಬ ಆಲೋಚನೆಯಿಂದ ಪ್ರೇರಿತನಾಗಿ, ತನ್ನೆಲ್ಲಾ ಸಂತೋಷಗಳೂ ಈ ರೀತಿಯಾಗಿ ನಾಶವಾಗುತ್ತದೆ ಎಂದು ತಿಳಿದು ಆತನು ಆಕೆಯೊಂದಿಗೆ ಸಾಯಲು ನಿರ್ಧರಿಸಿದನು. ಪ್ರಾಯಶ್ಚಿತ್ತ ಬಲಿಯಲ್ಲಿ ಪ್ರಕಟವಾದ ದೇವರ ಗುಣಲಕ್ಷಣಗಳನ್ನು ಆತನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆ, ಆತನು ನಿಸ್ಸಂದೇಹವಾಗಿ ಈ ಸಂಕಟದಿಂದ ಹೊರಬರುವಂತೆ ದೇವರನ್ನು ನಂಬಿ ಆತನ ಆಜ್ಞೆಗಳಿಗೆ ವಿಧೇಯನಾಗಲು ಯಾವ ಬೆಲೆ ತೆರಲೂ ಸಿದ್ಧನಾಗಿರುತ್ತಿದ್ದನು.

ಆದರೆ, ಸೈತಾನ ಬಗ್ಗೆ ಪುನಃ ಹಿಂದಿರುಗುವಾಗ, ಒಂದು ಕೆಡುಕಾದ ಮಾರ್ಗವನ್ನು ಆರಿಸಿಕೊಂಡು, ಅಂದಿನಿಂದ ಆತನ

ಪ್ರಯಾಣದ ಪ್ರತಿಯೊಂದು ಹೆಜ್ಜೆಯೂ ಆತನನ್ನು ನೀತಿಯ ತತ್ವದಿಂದ ಮತ್ತೂ ದೂರ ದೂರಕ್ಕೆ ಕೊಂಡೊಯ್ಯುವುದಾಗಿದೆ; ಅದರಂತೆ "ನೀವು ಹೇಗೂ ಸಾಯುವುದಿಲ್ಲ" (ಆದಿಕಾಂಡ 3:4) ಎಂಬ ಆತನ ಮೊದಲ ಸುಳ್ಳನ್ನು ಆತನು ಗಣನೀಯ ಸರಳತೆಯಿಂದ ಹೇಳಿದ್ದಿರಬಹುದು, ಹಾಗಿದ್ದರೂ ಅಂದಿನಿಂದ ಮತ್ತು ಇಂದು ಸಹಾ ಆತನ ಪ್ರತಿಯೊಂದು ಕಾಲ್ಪನಿಕ ರೀತಿಯಲ್ಲಿ ತನ್ನ ಸುಳ್ಳು ಹೇಳಿಕೆಯನ್ನು ಶಾಶ್ವತಗೊಳಿಸಲು ಮತ್ತು ಮಾನವ ಜಾತಿಗೆ ಮರಣವೆಂಬುದು ಇಲ್ಲವೇ ಇಲ್ಲ, ಅವರು ಸತ್ತ ಮೇಲೆ ಹಿಂದಿಗಿಂತ ಹೆಚ್ಚಾದ ರೀತಿಯಲ್ಲಿ ಇನ್ನು ಮುಂದೆ ಜೀವಿಸುವರು ಎಂದು ನಂಬುವಂತೆ ಮೋಸಗೊಳಿಸಲು ಪ್ರಯತ್ನಿಸುತ್ತಲೇ ಇದ್ದಾನೆ. ಅದೊಂದು "ನೀವು ಹೇಗೂ ಸಾಯುವುದಿಲ್ಲ" ಎಂಬುದು ಒಂದು ಹಳೆಯ ಸುಳ್ಳು. ಇದನ್ನು ಪ್ರಸ್ತುತ ಪರಿಸ್ಥಿತಿಗೆ ಪುನಃ ಸರಿಪಡಿಸಲಾಗಿದೆ. ಇಡೀ ಮಾನವಕುಲದ ಮೇಲೆ ಹಾಯ್ದು ಹೋಗಿರುವ ಮರಣದ ಬಗೆಗಿನ ಸತ್ಯವನ್ನು ಸೈತಾನನಿಗಿಂತ ಉತ್ತಮವಾಗಿ ತಿಳಿದವರು ಈಗ ಯಾರೂ ಇಲ್ಲ; ಮತ್ತು ಪಾಪದ ಸಂಗತಿಗಳ ಬಗ್ಗೆ, ಅದರ ದಂಡನೆಯ ಬಗ್ಗೆ, ಈಡು ಬಲಿಯ ಬಗ್ಗೆ ಮತ್ತು ಅದರ ಫಲವಾದ ಪುನರುತ್ಥಾನ ಹಾಗೂ ಸಮಸ್ತವನ್ನು ಸರಿಪಡಿಸುವ ಬಗ್ಗೆ, ಸತ್ಯದ ಪ್ರಭಾವವು ಅವರನ್ನು ನ್ಯಾಯವಂತನೂ ಕರುಣಾಮಯಿಯೂ ಆದ ಸೃಷ್ಟಿಕರ್ತನ ಬಳಿಗೆ ಕೊಂಡೊಯ್ಯುವುದು ಎಂಬಿವುಗಳನ್ನು ಮಾನವ ಜಾತಿಯು ಸ್ಪಷ್ಟವಾಗಿ ಮತ್ತು ವಿಶದವಾಗಿ ತಿಳಿಯದು ಎಂಬುದು ಸಹಾ ಸೈತಾನನಿಗಿಂತ ಉತ್ತಮವಾಗಿ ಬೇರೆ ಯಾರಿಗೂ ಗೊತ್ತಿರುವುದಿಲ್ಲ.

ಇದನ್ನೇ ಸೈತಾನನು ತಪ್ಪಿಸಲು ಬಯಸುತ್ತಾನೆ. ದೇವರ ಯೋಜನೆಯ ನಿಜವಾದ ಲಕ್ಷಣದ ಬಗ್ಗೆ ಮಾನವರ ಮನಸ್ಸನ್ನು ಕುರುಡಾಗಿಸಲು ಮತ್ತು ಅದನ್ನು ದೇವರ ಗುಣಲಕ್ಷಣ ಹಾಗೂ ಯೋಜನೆಗಳ ಬಗ್ಗೆ ಭಿನ್ನವಾದ ರೀತಿಯ ಸುಳ್ಳು ಮತ್ತು ದೇವದೂಷಣೆಗಳಿಂದ ಕೂಡಿದ ಆಲೋಚನೆಗಳಿಂದ ತುಂಬಿಸಲು ಆತನು ಪ್ರಯತ್ನಿಸುತ್ತಾನೆ. ಮಾನವರು ಆ ಮರಣವನ್ನು ಮತ್ತು ಅದಕ್ಕೆ ಸಂಬಂಧಿಸಿದ ಇತರ ಎಲ್ಲಾ ಸಂಗತಿಗಳನ್ನು ಅಂದರೆ ಅವಿಧೇಯತೆಯ ಮತ್ತು ಆತನ ಸುಳ್ಳಿನ ಫಲವಾದ ಮಾನಸಿಕ, ನೈತಿಕ ಮತ್ತು ದೈಹಿಕವಾದ ಕ್ಷಯಿಸುವಿಕೆಯನ್ನು, ಮತ್ತು ಕಾಯಿಲೆಗಳನ್ನು ನೋಡುವುದರ ಬದಲಾಗಿ ಆತನು ನ್ಯಾಯ ಮತ್ತು ಪ್ರೀತಿ ಭರಿತನೆಂದು ಹೇಳಿಕೊಳ್ಳುವ ಯೆಹೋವನು ಮಾನವ ಕುಟುಂಬವನ್ನು ಸೃಷ್ಟಿಸುವಲ್ಲಿ ಬಹಳ ಅನ್ಯಾಯವಾಗಿ ಮತ್ತು ಪ್ರೀತಿಯಿಲ್ಲದವನಾಗಿ ಹೆಚ್ಚಾದ ದುರ್ವಿಚಾರಗಳಿಂದ ಕೂಡಿದವನಾಗಿ ಸೃಷ್ಟಿಸಿದ್ದಾನೆ – ಕೋಟ್ಯಾಂತರ ಜನರು ನಿರಂತರವಾಗಿ ಹಿಂಸೆಯನ್ನನು ಭವಿಸಬೇಕು ಮತ್ತು ತಾನು ಮನಸ್ಸು ಮಾಡಿದರೆ ಕೇವಲ "ಚಿಕ್ಕ ಹಿಂಡಿನವರು' ಮಾತ್ರವೇ ಮಹಿಮೆಗೆ ಸೇರಿಸಲ್ಪಡಬೇಕು ಎಂಬುದನ್ನು ಆತನು ತನ್ನ ಹೃದಯದಲ್ಲಿ ಪೂರ್ವೋದ್ದೇಶವಾಗಿ ಮಾನವರ ಸೃಷ್ಟಿಯ ಒಂದು ಮೊದಲೇ ನಮೂನೆಯಾಗಿ ಹೊಂದಿದ್ದನು ಎಂದು ತಿಳಿದುಕೊಳ್ಳುವಂತೆ ಆತನು ಪ್ರಯತ್ನಿಸುತ್ತಿದ್ದಾನೆ ಇದನ್ನು ಅನೇಕರು ಈಗಾಗಲೇ ಮನವರಿಕೆ ಮಾಡಿಕೊಂಡಿರುತ್ತಾರೆ. ಈ ರೀತಿಯ ಕೆಲವೊಂದು ತಪ್ಪು ತಿಳುವಳಿಕೆಗಳ ಭ್ರಮೆಯ ಬಲೆಯಲ್ಲಿ ಬೀಳಿಸುತ್ತಾ ಈ ವಿರೋಧಿಯು ಕಳೆದ ಆರು ಸಹಸ್ರ ವರ್ಷಗಳಿಂದ ಮಾನವರ ತೀರ್ಮಾನಗಳನ್ನು ದಾರಿ ತಪ್ಪಿಸುತ್ತಿದ್ದಾನೆ ಮತ್ತು ಮಾನವರ ಹೃದಯಗಳನ್ನು ದೇವರಿಂದ ಮತ್ತು ಸತ್ಯ ಸಂದೇಶಗಳಿಂದ ಬೇರೆಡೆಗೆ ತಿರುಗಿಸುತ್ತಾ ಇದ್ದಾನೆ. ಅಪೋಸ್ತಲನು ಇದನ್ನು ದೃಢಪಡಿಸುತ್ತಾನೆ ಮತ್ತು ಈ ರೀತಿಯಾಗಿ ವಿವರಿಸುತ್ತಾನೆ – "ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯ ವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" (2ಕೊರಿ.4:4) ಆತನೇ ಅವರಿಗೆ ಜ್ಞಾನೋದಯವನ್ನು ಉಂಟು ಮಾಡಬೇಕು ಮತ್ತು ಅಜ್ಞಾನದ ಮತ್ತು ತಪ್ಪು ತಿಳುವಳಿಕೆಗಳ ಅಂಧಕಾರವನ್ನು ಹೊಡೆದೋಡಿಸಬೇಕು ಮತ್ತು ಅವರು ತಮ್ಮ ಪರಲೋಕದ ತಂದೆಯ ಕೃಪಾಪೂರ್ಣ ಯೋಜನೆಯ ನಿಜವಾದ ಲಕ್ಷಣಗಳನ್ನು ಕಂಡುಕೊಳ್ಳುವಂತೆ ಆತನೇ ಮಾಡಬೇಕು.

ದೇವರ ಪ್ರಕಟನೆಯ ಬೆಳಕು (ಸತ್ಯವೇದವು ಮಾತ್ರವಲ್ಲ, "ಸತ್ಯದ ಆತ್ಮನು" ಸಹಾ) ಎಲ್ಲಿಯವರೆಗೆ ಹರಡುತ್ತದೆಯೋ ಅವು ಸೈತಾನನ ಅಂಧಕಾರದ ನಿರೂಪಣೆಗಳಿಗೆ ಹೆಚ್ಚು ಕಡಿಮೆ ಗಂಡಾಂತಕಾರಿಯಾಗಿವೆ. ಸತ್ಯವು ಸೈತಾನನ ತಪ್ಪುಗಳಿಗಿಂತ ಸಾವಿರ ಪಾಲು ವಿವೇಚನಾಶೀಲವಾಗಿದೆ ಮತ್ತು ಅದು ಕ್ಷಿಪ್ರವಾಗಿ ಆತನ ವಿರುದ್ಧ ಮೇಲುಗೈ ಸಾಧಿಸುತ್ತದೆ. ಅದು ನಿರಂತರವಾಗಿ ದೃಶ್ಯಗಳನ್ನು ಬದಲಿಸುವ, ಮತ್ತು ಆತನ ಹಳೆಯ ಸುಳ್ಳನ್ನು ಎತ್ತಿಹಿಡಿಯುವ ಮತ್ತು ಸಾಧ್ಯವಾದರೆ ನೂತನವಾಗಿ ಆಯ್ಕೆ ಯಾದವರನ್ನು ಮೋಸಗೊಳಿಸುವ ಆತನ ನೂತನ ಕುತಂತ್ರ ಮತ್ತು ಕುಯುಕ್ತಿಯ ವ್ಯೂಹರಚನೆಯ ವಿರುದ್ಧವಾಗಿರಬಹುದು. ಮೊದಲನೆಯದರಲ್ಲಿ ಒಂದಾದ ಮತ್ತು ದೈತ್ಯಾಕಾರದಲ್ಲಿ ಒಂದಾದ ಸತ್ಯವನ್ನು ನಿರಾಕರಿಸುವ ಮತ್ತು ತಪ್ಪನ್ನು ತೋರಿಕೆಗೆ ಸರಿಯೆಂದು ತೋರಿಸುವ ಆತನ ಯಶಸ್ವಿ ಪ್ರಯತ್ನದಲ್ಲಿ ಕ್ರಿಸ್ತವಿರೋಧಿ ಮತ್ತು ಪೋಪನ ಅಧಿಕಾರವೂ ಒಂದಾಗಿದೆ. ಇದರ ಮೂಲಕವಾಗಿ ಆತನ ಪ್ರಪಂಚದಾದ್ಯಂತ ಪ್ರಬಲವಾದ ಪ್ರಭಾವವನ್ನು ಹರಡಿದ್ದಾನೆ. ಇಂದಿನ ಬೆಳಕಿನಲ್ಲಿ ಮತ್ತು ಆ ಕರಾಳ ಸ್ವರೂಪದ ಸ್ವಾತಂತ್ರ್ಯದ ಅಳತೆಯಲ್ಲಿ ಮಾನವಕುಲವು ಈ ಸಾಮ್ರಾಜ್ಯದ ಅವಧಿಯ ಬಗ್ಗೆ ಹಿಂತಿರುಗಿ ನೋಡುತ್ತದೆ ಮತ್ತು ಅದನ್ನು "ಕರಾಳಯುಗ' (ಕತ್ತಲೆಯುಗ) ಎಂಬುದಾಗಿ ಕರೆಯುತ್ತದೆ. ಅನ್ಯಾಯದಿಂದ ತುಂಬಿದ, ತಪ್ಪು ಮತ್ತು ಮೂಢನಂಬಿಕೆಗಳಿಂದ ಕೂಡಿದ, ತಮ್ಮ ಮನಸ್ಸಾಕ್ಷಿಗೆ ಅನುಸಾರವಾಗಿ ದೇವರನ್ನು ಆರಾಧಿಸ ಬಯಸುವವರಿಗೆ ಹಿಂಸೆ ಮತ್ತು ನಿಷ್ಠುರವನ್ನೊಳಗೊಂಡ "ಕತ್ತಲೆಯುಗ" ವಾಗಿದ್ದು ನಿಜವಾದ ಬೆಳಕನ್ನು ಪಡೆದು ಅದನ್ನು ಪ್ರಾಮಾಣಿಕವಾಗಿ ಜನರ ಮುಂದೆ ಎತ್ತಿಹಿಡಿದವರ ವಿರುದ್ಧ ಅದಕ್ಕೆ ಅನುಪಾತವಾಗಿ ಇದು ಭಯಂಕರವಾಗಿದೆ. ಈ ಮಹಾ ಸಂಸ್ಥೆಯು ಅದರ ಪದ್ಧತಿ ಮತ್ತು ಪ್ರಭಾವಗಳಲ್ಲಿ ಅತಿ ಘೋರವಾಗಿದ್ದು ಸೈತಾನನ ಕುತಂತ್ರಗಳನ್ನು, ಅಭಿಲಾಷೆಗಳನ್ನು ಮತ್ತು ಕೃತ್ರಿಮತೆಗಳನ್ನು ಸಮಗ್ರವಾಗಿ ಪ್ರತಿನಿಧಿಸುತ್ತದೆ ಮತ್ತು ಸೈತಾನನೇ ಎಂಬಂತೆ ಕರ್ತನಿಂದ ಸಾಂಕೇತಿಕವಾಗಿ ವಿವರಿಸಲ್ಪಟ್ಟಿದೆ. ವಾಕ್ಯದ ಮಹತ್ತರವಾದ ಅರ್ಥದಲ್ಲಿ ಆತನ ಪ್ರತಿನಿಧಿಯು ದೇವರ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಾನೆ.

ಪ್ರವಾದನೆಗಳಲ್ಲೆಲ್ಲಾ ನಾವು ಸೈತಾನನ ಮತ್ತು ಜ್ಞಾನೋದಯ ಹೊಂದಿದವರಲ್ಲಿ ಆತನ ಅತಿ ಪ್ರಮುಖ ಪ್ರತಿನಿಧಿಯ ನಡುವಣ ವಿವರಣೆಯ ಮತ್ತು ನಿಂದನೆಗಳ ಮಿಶ್ರಣವನ್ನು ಕಾಣುತ್ತೇವೆ. ಉದಾಹರಣೆಗೆ ಬಾಬೇಲಿನ ಶಕ್ತಿಯ ಒಡೆಯುವಿಕೆಯನ್ನು ವಿವರಿಸಿದ ನಂತರ – ಈ ವಿವರಣೆಯು ಅಕ್ಷರಶಃ ಬಾಬೇಲಿಗೆ ಮತ್ತು ಸ್ವಾಭಾವಿಕ ಇಸ್ರಾಯೇಲಿನ ದಾಸತ್ವಕ್ಕೆ ಭಾಗವಾಗಿ ಅನ್ವಯಿಸುತ್ತದೆ ಮತ್ತು ಆತ್ಮಿಕ ಇಸ್ರಾಯೇಲ್ಯರ ಮೇಲೆ ಆಧ್ಯಾತ್ಮಿಕ ರೂಪಾರ್ಥವುಳ್ಳ ಬಾಬೇಲಿನವರ ದಾಸತ್ವಕ್ಕೆ ಹೆಚ್ಚು ವಿಶಿಷ್ಟವಾಗಿ ಅನ್ವಯಿಸುತ್ತದೆ.– ಪ್ರವಾದಿಯು ಸೈತಾನನ ಸ್ವಂತ ಕ್ರಮಕ್ಕೆ ಹೊಂದುವ ವಿವರಣೆಯನ್ನು ಮುಂದುವರಿಸುತ್ತಾನೆ. ಇದು ಎರಡನೆಯ ಅರ್ಥದಲ್ಲಿ ಪ್ರಾಕೃತಿಕ ಬಾಬೇಲಿನ ಏಳು ಬೀಳುಗಳಿಗೆ ಅನ್ವಯಿಸುತ್ತದೆ ಮತ್ತು ಇನ್ನೂ ಆಳವಾದ ಅರ್ಥದಲ್ಲಿ ಆಧ್ಯಾತ್ಮಿಕ ರೂಪಾರ್ಥವುಳ್ಳ ಬಾಬೇಲಿಗೆ ಅನ್ವಯಿಸುವುದಾಗಿದ್ದು ಈ ರೀತಿಯಾಗಿ ಹೇಳಲ್ಪಟ್ಟಿದೆ :

"ಆಹಾ, ಉದಯ ನಕ್ಷತ್ರವೇ, ಬೆಳ್ಳಿಯೇ, ಆಕಾಶದಿಂದ ಹೇಗೆ ಬಿದ್ದೆ! ಜನಾಂಗಗಳನ್ನು ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯಲ್ಲಾ! ನೀನು ನಿನ್ನ ಮನಸ್ಸಿನಲ್ಲಿ – ನಾನು ಆಕಾಶಕ್ಕೆ ಹತ್ತಿ ಉತ್ತರ ದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿ ಆಸೀನನಾಗುವೆನು; ಉನ್ನತ ಮೇಘ ಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದುಕೊಂಡಿದ್ದೆಯಲ್ಲಾ! ಆದರೆ ನೀನು ಪಾತಾಳಕ್ಕೆ ಅಧೋಲೋಕದ ಅಗಾಧ ಸ್ಥಳಗಳಿಗೆ ತಳ್ಳಲ್ಪಡುತ್ತಿದ್ದೀ. ನಿನ್ನನ್ನು ಕಂಡವರು ದಿಟ್ಟಿಸಿ ನೋಡಿ ಯೋಚಿಸುತ್ತಾ – ಭೂಮಿಯನ್ನು ನಡುಗಿಸಿ ರಾಜ್ಯಗಳನ್ನು ಕದಲಿಸಿ ಪಟ್ಟಣಗಳನ್ನು ಕೆಡವಿ ಲೋಕವನ್ನು ಕಾಡನ್ನಾಗಿ ಮಾಡಿ ಸೆರೆಹಿಡಿದವರನ್ನು ಮನೆಗೆ ಬಿಡದೆ ಇದ್ದವನು ಇವನೋ? ಅಂದುಕೊಳ್ಳುವರು. (ಯೆಶಾಯ 14: 12–17)

ಬಾಬೇಲ್ ಲೋಕದ ಇತರ ರಾಜ್ಯಗಳಿಗಿಂತ ಹೆಚ್ಚಾಗಿ ತನ್ನನ್ನು ಏರಿಸಿಕೊಂಡದ್ದು ನಿಜವಾಗಿದೆ. ಅದರಂತೆ ಕ್ರಿಸ್ತ ವಿರೋಧಿಯಾದ ಪೋಪನ ಆಡಳಿತವು ಈ ಲೋಕದ ಎಲ್ಲಾ ರಾಜ್ಯಗಳಿಗಿಂತ ಉನ್ನತವಾಗಿ ತನ್ನನ್ನು ಮೇಲೇರಿಸಿ ಕೊಂಡಿರುವುದೂ, ಮತ್ತು ಕಬ್ಬಿಣದ ದಂಡದಿಂದ ಅದನ್ನು ಆಳಲು ಪ್ರಯತ್ನಿಸುತ್ತಿರುವುದೂ, ಕ್ರಿಸ್ತನ ಹೆಸರಿನಲ್ಲಿ ತನ್ನ ಅಧಿಕಾರವನ್ನು ಹಕ್ಕಿನಿಂದ ಕೇಳುತ್ತಿರುವುದೂ ಸತ್ಯವಾಗಿದೆ. ಅದರಂತೆ ಒಂದು ಸಾರಿ ಬಾಬೇಲು ನಾಶವಾದಂತೆ, ಮಹಾ ಬಾಬೇಲಿನ ಅಂತಿಮ ನಾಶನವು ಕಾಯುತ್ತಿದೆ. ಇದು ವೇಶ್ಯಯರ ತಾಯಿಯಂತಿದ್ದು, ಎಂದೆಂದೂ ಮೇಲೆ ಎತ್ತಲಾಗದಂತೆ ಸಮುದ್ರಕ್ಕೆ ಎಸೆಯಲ್ಪಟ್ಟ ದೊಡ್ಡ ಯಂತ್ರಶಾಲೆಯ ಕಲ್ಲಿನಂತೆ ಅದೆ. ಆದರೆ ಇತರರ ಮೇಲೆ ರಾಜ್ಯಾಧಿಕಾರ ಮಾಡುವ ಇವರ ಮಹತ್ವಾಕಾಂಕ್ಷೆಯು ಹೆಚ್ಚಾಗಿದ್ದರೆ, ದೇವರ ಪರಲೋಕ ರಾಜ್ಯಕ್ಕೆ ವಿರುದ್ಧವಾದ ತನ್ನದೇ ಆದ ರಾಜ್ಯವೊಂದನ್ನು ಸ್ಥಾಪಿಸಬೇಕೆಂಬ, ಅದರಲ್ಲಿ ತನ್ನದೇ ಆದ ಪ್ರಜೆಗಳನ್ನು ಹೊಂದಿರಬೇಕೆಂಬ ಸೈತಾನನ ಮಹತ್ವಾಕಾಂಕ್ಷೆಯು ಎಲ್ಲಾ ದೇವಸೃಷ್ಟಿಗಳಿಗಿಂತಲೂ ಹೆಚ್ಚಾಗಿದೆ. ಹೇಗೂ ಇದೂ ಸಹಾ ವಿಫಲಗೊಳ್ಳುತ್ತದೆ. ವಿಮೋಚಕನ ಸಹಸ್ರ ವರ್ಷದ ಆಳ್ವಿಕೆಯಲ್ಲಿ ಸೈತಾನನ್ನು ಬಂಧಿಸಲಾಗುವುದು, ಈ ಪ್ರಪಂಚದ ಶಾಪ ಹೊಂದಿದವರನ್ನೂ, ಆಶೀರ್ವಾದ ಹೊಂದಿದವರನ್ನೂ ಎತ್ತಲಾಗುವುದು. ಆದರೆ ಕಾಲಕ್ರಮದಲ್ಲಿ, ಸತ್ಯವೇದವು ಸ್ಪಷ್ಟವಾಗಿ ಹೇಳುವಂತೆ ಆತನನ್ನು ಆತನ ಎಲ್ಲಾ ದೂತರುಗಳೊಂದಿಗೆ, ಆತನ ಕ್ರಮವನ್ನು ಅನುಸರಿಸುವ ಆತನ ಸಂದೇಶ ವಾಹಕರೊಡನೆ ನಾಶಪಡಿಸಲಾಗುವುದು (ಮತ್ತಾಯ 25:41; ಇಬ್ರಿಯ 2:14, ಪ್ರಕಟನೆ 20:10 )

## ಕೆಡುಕಿನಲ್ಲಿ ಸೈತಾನನ ಸಹಚರರು – ಪಿಶಾಚಿಗಳ ದಂಡು

## Satan's Associates in Evil- Legions of Demons

ಈಗಾಗಲೇ ನಾವು ಕಂಡುಕೊಂಡಿರುವಂತೆ, ದೈವೋಕ್ತಿಗಳ ಹೇಳಿಕೆಗಳ ಪ್ರಕಾರ, ಸೈತಾನನ ಪಿತೂರಿ ಮತ್ತು ದಂಗೆಗಳ ಪ್ರಾರಂಭದಲ್ಲಿ ಯಾವ ದೇವದೂತನೂ ಆತನ ಸಂಗಡಿಗನಾಗಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಾವು ಅರ್ಥಮಾಡಿಕೊಳ್ಳಬಹುದಾದುದೆಂದರೆ ಎಲ್ಲಾ ಪರಿಶುದ್ಧ ದೂತರುಗಳು ದೇವರ ರಾಜ್ಯದ ಬಗ್ಗೆ ಸರ್ವ ಸಂಪೂರ್ಣವಾದ ಸಹಾನುಭೂತಿಯುಳ್ಳವ ರಾಗಿದ್ದರು. ಅವರಲ್ಲಿ ಕೆಲವರನ್ನು ಪತನಗೊಂಡ ಜನರನ್ನು ಆಳುವಂತೆ ಮತ್ತು ಅವರಿಗೆ ಸಹಾಯಮಾಡಿ ಸಾಧ್ಯವಾದರೆ ಅವರನ್ನು ಪುನಃ ದೇವರ ಸಾಮರಸ್ಯಕ್ಕೆ ಹಿಂತಿರುಗುವಂತೆ ಹಾಗೂ ಅವರನ್ನು ಇನ್ನೂ ಕೆಡದಿರುವಂತೆ ನಿಯಂತ್ರಿಸಲು ನಿಯುಕ್ತಿ ಗೊಳಿಸಲಾಗಿತ್ತು. ಇದು ನೋಹನ ಕಾಲದಲ್ಲಿ ನಡೆದ ಜಲಪ್ರಳಯಕ್ಕೆ ಮುಂಚೆ ದೇವದೂತರುಗಳಿಗೆ ದೇವರೊಡನೆ ನಿಷ್ಠೆಯಿಲ್ಲದಿರುವುದು, ಪಾಪ ಮತ್ತು ನೀತಿಭ್ರಷ್ಟತೆ ಇವುಗಳ ಮೊಟ್ಟಮೊದಲ ಅನುಭವವಾಗಿತ್ತು. ಅದು ಅವರಿಗೆ ಒಂದು ರೀತಿಯ ಪರೀಕ್ಷೆಯಂತಾಯಿತು. ಯಾಕೆಂದರೆ ಅದು ದೇವರ ಚಿತ್ತಕ್ಕೆ ವಿರೋಧವಾದ ಕೆಡುಕಿನ ಕ್ರಮಗಳ ಸಾಧ್ಯತೆಗಳನ್ನು ಅವರಿಗೆ ತಿಳಿಸಿಕೊಟ್ಟಿತು. ಅಂಥಹ ಕ್ರಮಗಳಿಂದ ದೊರೆಯುವ ಸಂತೋಷ ಮತ್ತು ಅನುಕೂಲತೆಗಳನ್ನು ಸಹಾ ಅದು ತಿಳಿಸಿತು. ಈ ರೀತಿಯಲ್ಲಿ ಅದು ಯೆಹೋವ ದೇವರ ಬಗ್ಗೆ ಅವರ ನಿಷ್ಠೆ ಮತ್ತು ವಿಧೇಯತೆಗಳಿಗೆ ಒಂದು ರೀತಿಯ ಪರೀಕ್ಷೆಯಾಯಿತು. ಈ ಪರೀಕ್ಷೆಯಲ್ಲಿ ಈ ಹಿಂದೆ ಪವಿತ್ರರೂ, ವಿಧೇಯರೂ ಆಗಿದ್ದ ಕೆಲವು ದೇವದೂತರುಗಳು ದ್ರೋಹಿಗಳಾದರೆಂದೂ, ಪತನಹೊಂದಿ ಭ್ರಷ್ಟರಾದರೆಂದು ಪರಿಶುದ್ಧ ಗ್ರಂಥಗಳು ನಮಗೆ ಸ್ಪಷ್ಟವಾಗಿ ತಿಳಿಸುತ್ತವೆ. ಪೇತ್ರ ಮತ್ತು ಯೂದರು ತಮ್ಮ ಪತ್ರಿಕೆಗಳಲ್ಲಿ' ಆ ದೇವದೂತರುಗಳು ತಮ್ಮ ಮೊದಲಿನ ವಾಸಸ್ಥಳವನ್ನು ಉಳಿಸಿಕೊಳ್ಳಲಿಲ್ಲ" ಮತ್ತು ಇದರ ಪರಿಣಾಮವಾಗಿ ದೇವರು ಅವರ ಸ್ವಾತಂತ್ರ್ಯವನ್ನು ಕಸಿದುಕೊಂಡು, ನಿತ್ಯವಾದ ಬೇಡಿಗಳನ್ನು ಹಾಕಿ ಮಹಾ ದಿನದಲ್ಲಿ ಆಗುವ ದಂಡನೆಯ ತೀರ್ಪಿಗಾಗಿ ಅವರನ್ನು ಕತ್ತಲೆ ಗುಂಡಿಗಳಿಗೆ ಒಪ್ಪಿಸಿದನು ಎಂದು ಬರೆಯುತ್ತಾರೆ (2 ಪೇತ್ರ 2:4 ಮತ್ತು ಯೂದ : 06 ನೋಡಿರಿ)

ಪರಿಶುದ್ಧ ದೇವದೂತರುಗಳಿಂದ ಪ್ರತ್ಯೇಕಿಸಲ್ಪಟ್ಟವರಾಗಿ, ಅಂದಿನಿಂದ ಈ ಬಿದ್ದುಹೋದ ದೇವದೂತರುಗಳು

"ಪಿಶಾಚಿಗಳು' ಅಥವಾ "ರಾಕ್ಷಸ'ರುಗಳೆಂದು (ದೆವ್ವ) ಕರೆಯಲ್ಪಟ್ಟರು ಮತ್ತು ಅವರ ನಾಯಕನಾದ ಸೈತಾನನು ಈ ಪಿಶಾಚಿಗಳ ರಾಜನೆನಿಸಿಕೊಂಡನು. ಅವರು ಆತನೊಂದಿಗೆ ಜನರ ಮಧ್ಯೆ ಚೇಷ್ಟೆಗಳನ್ನು ನಡೆಸುವವರಾದರು. ಒಳ್ಳೆಯ ಕಾರ್ಯಗಳಲ್ಲಿ ಅವರಿಗೆ ಯಾವುದೇ ಅವಕಾಶವಿಲ್ಲ. ಆದುದರಿಂದ ಅವರು ಕೆಡುಕಿಗೆ ಒಪ್ಪಿಸಿಕೊಟ್ಟಿರುವ ಕಾರಣ ಅವರಲ್ಲಿ ಕೆಡುಕೆಂಬುದು ಗರಿಷ್ಟ ಪ್ರಮಾಣದಲ್ಲಿರುವುದು ಮತ್ತು "ನೀವು ಹೇಗೂ ಸಾಯುವುದಿಲ್ಲ" (ಆದಿಕಾಂಡ 3:4) ಎಂಬ ಸೈತಾನನ ಮೂಲ ಸುಳ್ಳನ್ನು ಉಪದೇಶಿಸುವಲ್ಲಿ ಅವರುಗಳು ಆತನ ನಿಷ್ಠಾವಂತ ಜೊತೆಗಾರರಾಗಿರುವುದು ನಮಗೆ ಯಾವ ಆಶ್ಚರ್ಯವನ್ನೂ ಉಂಟುಮಾಡುವುದಿಲ್ಲ. ಸಹಜವಾಗಿ, ಜಲಪ್ರಳಯವಾದ ಶೀಘ್ರ ನಂತರದಲ್ಲಿ ಈ ಬಿದ್ದುಹೋದ ದೇವದೂತರುಗಳು, ಪಿಶಾಚಿಗಳು ಮಾನವ ಜಾತಿಯನ್ನು ಧರ್ಮದ ಸೋಗಿನಲ್ಲಿ ಭ್ರಷ್ಟಗೊಳಿಸತೊಡಗಿದರು. ಅವರು ಬೇಡಿ ಹಾಕಲ್ಪಟ್ಟು ಸೆರೆಮನೆಯಲ್ಲಿರುವಾಗ ಅಂದರೆ ಮಾಂಸ ಶರೀರಧಾರಿಗಳಾಗಿ ಜನರೊಡನೆ ಬೆರೆಯಲಾಗದಿರುವಾಗ, ಅವರು ನೀತಿಭ್ರಷ್ಟ ಜನಾಂಗದಲ್ಲಿ ತಮ್ಮ ಪ್ರತಿನಿಧಿಗಳಾಗಲು, ಮಧ್ಯವರ್ತಿಗಳಾಗಲು ಸಿದ್ಧವಿರುವ ಜನರನ್ನು ಬಹುಬೇಗ ಗುರುತಿಸಿ ತಮ್ಮ ಶರೀರಗಳ ಮೂಲಕ ಕಾರ್ಯಸಾಧಿಸದೆ ಇವರುಗಳ ಶರೀರದಲ್ಲಿ ಹೊಕ್ಕಿ ತಮ್ಮ ಕಾರ್ಯಸಾಧನೆಗೆ ತೊಡಗಿದರು. ಇಂತಹ ಮಧ್ಯಸ್ಥರು ಅಥವಾ ಮಾನವ ಜಾತಿಗೂ ಪಿಶಾಚಿಗಳಿಗೂ ಸಂಪರ್ಕ ಸಾಧನವಾಗಿರುವವರನ್ನು ಹಿಂದಿನ ಕಾಲದಲ್ಲಿ 'Fetishes', "wizards" (ಮಾಟಗಾರರು) "witches'(ಮಂತ್ರವಾದಿಗಳು)Necromancers'(ಇಂದ್ರಜಾಲ ಕರು) medicinemen (ಮದ್ದುಮಾಡುವವರು) Priests of false religions" ಸುಳ್ಳುಧರ್ಮಗಳ ಪೂಜಾರಿಗಳು' ಎಂಬಿತ್ಯಾದಿಯಾಗಿ ಕರೆಯಲಾಗುತ್ತಿತ್ತು. ದೇವರು ಈ ಭೂಲೋಕದಲ್ಲಿ ತನ್ನ ಪ್ರತಿನಿಧಿಗಳನ್ನಾಗಿ ಆಯ್ಕೆಮಾಡಿಕೊಂಡಿದ್ದ ಇಸ್ರಾಯೇಲ್ಯರ ಮೇಲೆ ಹಿಡಿತ ಸಾಧಿಸಲು ಅವರುಗಳು ಪಟ್ಟ ಎಲ್ಲಾ ಪ್ರಯತ್ನಗಳ ವಿವರವನ್ನು ನಾವು ಸತ್ಯವೇದದಲ್ಲಿ ಸ್ಪಷ್ಟವಾಗಿ ನೋಡಬಹುದು. ಪಿಶಾಚಿಗಳು ಮತ್ತು ಇಸ್ರಾಯೇಲ್ಯರ ಸಂಪರ್ಕ ಸಾಧಿಸಲು ಯತ್ನಿಸುವ ಇಂತಹ ವ್ಯಕ್ತಿಗಳ ಬಗ್ಗೆ ಜನರಿಗೆ ಕಠಿಣವಾದ ಎಚ್ಚರಿಕೆಗಳನ್ನು ನೀಡಲಾಗಿತ್ತು. ಅನೇಕ ನಿಯಮಗಳನ್ನು ವಿಧಿಸಲಾಗಿತ್ತು ಮತ್ತು ಅವುಗಳನ್ನು ಗಣನೀಯವಾಗಿ ಜಾರಿಗೆ ತರಲಾಗಿತ್ತು ಮತ್ತು ಈ ಅಪರಾಧಗಳ ವಿರುದ್ಧ ಮರಣದಂಡನೆಯನ್ನು ಸಹಾ ವಿಧಿಸಲಾಗುತ್ತಿತ್ತು.

ಮನುಷ್ಯನು ವಿಧಿವತ್ತಾಗಿ ದೇವರ ಸ್ವರೂಪನಾಗಿದ್ದಾನೆ. ಆದಕಾರಣ ಆತನು ಮುಕ್ತನಾದ ಸ್ವತಂತ್ರ ವ್ಯಕ್ತಿಯಾಗಿದ್ದಾನೆ, ಈ ಸ್ವಾತಂತ್ರ್ಯವು ಆತನ ನೈತಿಕ ಪಾರುಪತ್ಯಕ್ಕೆ ವಿಸ್ತಾರಗೊಳ್ಳುತ್ತದೆ; ಆದುದರಿಂದ ಮಾನವನು ಮುಕ್ತವಾದ ನೈತಿಕ ಪಾರುಪತ್ಯಗಾರ ನಾಗಿದ್ದಾನೆ ಎಂಬ ಹೇಳಿಕೆ ಇದೆ. ಹೇಗೂ, ಆತನು ಎಷ್ಟು ಹೆಚ್ಚಿಗೆ ತನ್ನ ವೈಯುಕ್ತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡರೂ ಅಥವಾ ಬೇರೆ ವ್ಯಕ್ತಿಗಳಿಗೆ ಅಥವಾ ತನ್ನ ಸ್ವಂತ ಅಭಿಲಾಷೆಗಳಿಗೆ ದಾಸನಾದರೂ ಆತನ ನೈತಿಕ ಪಾರುಪತ್ಯವು ಮುಕ್ತವಾಗಿಯೇ ಇರುತ್ತದೆ – ಆತನು ಇಷ್ಟಪಡಲು, ತನಗೆ ಸಂತೋಷವಾಗುವ ರೀತಿಯಲ್ಲಿ ತನ್ನ ಮನಸ್ಸನ್ನು ಆತನು ಅನುಮತಿಸಲು ಮುಕ್ತನಾಗಿಯೇ ಇರುತ್ತಾನೆ. ಆತನು ತನ್ನ ಚಿತ್ತವನ್ನು ದೇವರ ಚಿತ್ತಕ್ಕೆ ವಶಮಾಡಿಕೊಳ್ಳ ಬಯಸಿದಲ್ಲಿ ಆತನು ಹಾಗೆಯೇ ಮಾಡಬಹುದು; ಆತನು ಅದನ್ನು ಯಾವುದೇ ಕೇಡಿನ ಪ್ರಭಾವಕ್ಕೆ ಒಳಪಡಿಸ ಬಯಸಿದಲ್ಲಿ ಹಾಗೆಯೂ ಮಾಡಬಹುದು; ಆತನು ದೇವರಿಂದ ಹಾಗೂ ಸೈತಾನನ ಪ್ರಭಾವಗಳಿಂದ ಮುಕ್ತನಾಗಿರಬೇಕೆನಿಸಿದರೆ ಆತನ ಶಾರೀರಿಕ ಶಕ್ತಿ ಮತ್ತು ಮಾನಸಿಕ ನಿರ್ಣಯಗಳು ಅನುಮತಿಸುವ ಮಟ್ಟಿಗೆ ಹಾಗೆಯೇ ಮಾಡಬಹುದು. ಆದರೆ ಬೀಳುವಿಕೆಯಿಂದ ದುರ್ಬಲಗೊಂಡಾಗ ಮತ್ತು ಅದರ ಬಾಧ್ಯತೆಯಾದ ಬಲಹೀನತೆಗಳು, ಆತನ ನಿರ್ಣಯಗಳು ಮತ್ತು ಆತನ ಜ್ಞಾನವು ಹಾಗೂ ವಿವೇಚನೆ ಮಾಡುವ ಸಾಮರ್ಥ್ಯ ಇವುಗಳೆಲ್ಲವೂ ಹೆಚ್ಚಾಗಿ ಕ್ಷೀಣಿಸುತ್ತವೆ. ಹಾಗೂ ಆತನ ನೈತಿಕ ಸ್ವಾತಂತ್ರ್ಯವು ಭ್ರಷ್ಟಗೊಳಿಸುವ ಸ್ಫೂರ್ತಿ ಮತ್ತು ಸಿದ್ಧಾಂತಗಳ ದಾಳಿಗೆ ಸಿಲುಕಿ ಕೊಳ್ಳುವಾಗ ಅವು ಸಹಾ ಅದೇ ಪ್ರಮಾಣದಲ್ಲಿ ಗಂಡಾಂತರಕ್ಕೊಳಗಾಗುತ್ತವೆ.– " ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ" (1ತಿಮೋ. 4:1) ಎಂದು ದೇವರ ವಾಕ್ಯವು ಸಹಾ ಪ್ರಕಟಿಸುತ್ತದೆ. ಈ ಪತನಹೊಂದಿದ ದೂತರು, ಪಿಶಾಚಿಗಳು ಪ್ರತಿಯೊಂದು ದೇಶದಲ್ಲಿಯೂ, ಪ್ರತಿಯೊಂದು ಸಮಯದಲ್ಲಿಯೂ ಬಹಳಷ್ಟು ಮಧ್ಯಸ್ಥರನ್ನು ಕಂಡುಕೊಂಡರೆ ನಾವು ಆಶ್ಚರ್ಯಪಡಬೇಕಾದದ್ದಿಲ್ಲ. ಅವರ ಮಧ್ಯಸ್ಥರು ಯಾರಾಗಬೇಕೆಂದು ಅವರೇ ಆಯ್ಕೆಮಾಡಿಕೊಳ್ಳುತ್ತಾರೆ. ತಮ್ಮ ಸಹಜ ಸ್ವಾಭಾವಿಕ ಗುಣಲಕ್ಷಣಗಳಿಂದ ಜನಸಮೂಹಗಳೊಡನೆ ಸಾಮಾನ್ಯವಾಗಿ ಸಹಕರಿಸಿಕೊಂಡು ಅವರನ್ನು ನಿಯಂತ್ರಿಸಬಲ್ಲ ಬುದ್ಧಿ ಸಾಮರ್ಥ್ಯವಿರುವವರನ್ನೇ ಹುಡುಕುತ್ತಾರೆ. ಇದರ ಪರಿಣಾಮವಾಗಿ ಅನ್ಯರ ದೇಶಗಳಲ್ಲಿ ಮತ್ತು ಭಾರತೀಯರಲ್ಲಿ ಈ ಮಧ್ಯಸ್ಥಿಕರು, ಪೂಜಾರಿಗಳು, ಮಾಂತ್ರಿಕರು, ಮಾಟಗಾರರುಗಳು, ಇಂದ್ರಜಾಲಕರುಗಳು, ಜ್ಯೋತಿಷಿಗಳು ಮತ್ತು ಕಣಿಹೇಳುವವರು ಇವರುಗಳು ಅತ್ಯಂತ ಬುದ್ಧಿವಂತರೂ, ಸಾಮರ್ಥ್ಯಶಾಲಿಗಳೂ ಆಗಿದ್ದಾರೆ. ಆಧುನಿಕ ಯುಗದಲ್ಲಿ, ಕ್ರೈಸ್ತಪ್ರಪಂಚದಲ್ಲಿಯೂ ಈ ರೀತಿಯ ಪಿಶಾಚಿಯ ಮಧ್ಯಸ್ಥರು "ಸ್ಪಿರಿಚ್ಯುಯಲಿಸ್ಟ್ಸ್' (ಆಧ್ಯಾತ್ಮಿಕ) ಎಂಬ ಹೆಸರಿನಲ್ಲಿ ಕಾಣಿಸಿಕೊಳ್ಳತೊಡಗಿದ್ದಾರೆ. ಇದು ಅವರಿಗೆ ಅನ್ವಯುವಾಗುವ ಸೂಕ್ತವಾದ ನಾಮಧೇಯವಾಗಿದೆ. ಅವರು ಸರಳವಾಗಿ ಮತ್ತು ಕಟ್ಟುನಿಟ್ಟಾಗಿ ತಮ್ಮನ್ನು ಕೆಡುಕನ ಪ್ರಭಾವಕ್ಕೆ ಒಪ್ಪಿಸಿಕೊಟ್ಟಿದ್ದಾರೆ ಮತ್ತು ಅದರ ಸಂಪರ್ಕ ಸಾಧನವಾಗಿದ್ದಾರೆ. ಇವರ ಮೂಲಕ ದುರಾತ್ಮಗಳು ಕೇವಲ ಮಾತುಗಳಿಂದ ತಟ್ಟುವುದರ ಮೂಲಕ, ಬರಹ ಅಥವಾ ಬೇರೆ ಯಾವುದರ ಮೂಲಕವಾದರೂ ಸಂಪರ್ಕ ಸಾಧಿಸುತ್ತವೆ.

ಎಲ್ಲಾ ಸಮಯಗಳಲ್ಲಿ ಮತ್ತು ಎಲ್ಲಾ ದೇಶಗಳಲ್ಲಿ ಅಂತಹ ಮಧ್ಯವರ್ತಿಗಳ ಮೂಲಕ ಈ ಪಿಶಾಚಿಗಳ ಸಾಮಾನ್ಯ ಪದ್ಧತಿಗಳು ಮತ್ತು ಸಾಮಾನ್ಯ ಬೋಧನೆಗಳು ವ್ಯಾವಹಾರಿಕವಾಗಿ ಒಂದೇ ತೆರನಾಗಿರುತ್ತವೆ. ಅವರು ತಮ್ಮನ್ನು ತಪ್ಪಾಗಿ ಪ್ರತಿನಿಧಿಸಿಕೊಳ್ಳುತ್ತಾರೆ, ಸತ್ತವರ ಸ್ಥಾನದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ಅಂದರೆ ಅವರೇ ನಾವೆಂದು ಹೇಳಿಕೊಳ್ಳುತ್ತಾರೆ. ಕೆಲವು ಸಂಧರ್ಭಗಳಲ್ಲಿ ಚೈನಾದವರು

ತಾವು ಪಿಶಾಚಿಗಳೆಂದು ಧೈರ್ಯದಿಂದ ಒಪ್ಪಿಕೊಳ್ಳುತ್ತಾರೆ, (1ಕೊರಿಂಥ 10:20). ತಮ್ಮನ್ನು ಈ ಹಿಂದೆ ಸತ್ತ ವ್ಯಕ್ತಿಗಳೆಂದು ಹೇಳಿಕೊಳ್ಳುವುದರಿಂದ ಅವರು ನಾನಾ ವಿಧವಾದ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುತ್ತಾರೆ :

(1) ಸೈತಾನನು ಏದೇನ್ ತೋಟದಲ್ಲಿ ಹೇಳಿದ "ನೀವು ಹೇಗೂ ಸಾಯುವುದಿಲ್ಲ" ಎಂಬ ಮೂಲ ಸುಳ್ಳನ್ನೇ ಇವರು ಬೆಂಬಲಿಸುತ್ತಾರೆ.

(2) ಈ ಅಸತ್ಯದ ಮೂಲಕವಾಗಿ ಅವರು ಸುವಾರ್ತೆಯ ಮತ್ತು ಅದರೆಲ್ಲಾ ನಿಯಮಗಳ ವಿರುದ್ಧವಾಗಿ ಮಾನವಜಾತಿಯಲ್ಲಿ ದುರಭಿಪ್ರಾಯಗಳನ್ನು ಹುಟ್ಟಿಸುತ್ತಾರೆ.

(3) ಈ ರೀತಿಯಾಗಿ ಅವರು ಮಾನವರ ವಿಮೋಚನೆ ಮತ್ತು ಪಾಪದಿಂದ ಮತ್ತು ಅದರ ಫಲವಾದ ಮರಣದಿಂದ ಬಿಡುಗಡೆ ಮುಂತಾದ ದೈವಿಕ ಮುನ್ನೇರ್ಪಾಡುಗಳನ್ನು ಅಸಮಂಜಸ ಮತ್ತು ಉಚಿತವಲ್ಲವುಗಳನ್ನಾಗಿ, ಅರ್ಥಹೀನವನ್ನಾಗಿ ಮಾಡಿಬಿಡುತ್ತಾರೆ. "ಪಾಪದ ಸಂಬಳ ಮರಣ' ಎಂಬುದನ್ನು ನಿರಾಕರಿಸಿ, ಪಾಪದ ಸಂಬಳವು ನಿರಂತರವಾದ ಯಾತನೆ ಮಾತ್ರ ಎಂಬುದಾಗಿ ವಾದಿಸುವ ಅವರ ಸಿದ್ಧಾಂತಗಳು ಅನ್ಯಾಯ ಹಾಗೂ ಕ್ರೂರತ್ವಗಳನ್ನು ವ್ಯಕ್ತೀಕರಿಸುವ ಮೂಲಕ ದೇವರ ಗುಣಲಕ್ಷಣಗಳನ್ನು ದೂಷಣೆ ಮಾಡುವುದು ಮಾತ್ರವಲ್ಲ ಅದು ಪರಿಶುದ್ಧ ಗ್ರಂಥಗಳಲ್ಲಿನ ಈಡುಬಲಿಯ ಸಿದ್ಧಾಂತವನ್ನು ನೆಗೆಪಾಟಲು ಮಾಡುತ್ತದೆ. ಬೀಳುವಿಕೆಯ ಕಾರಣವು ಸಹಾ ಕಲ್ವಾರಿಯಲ್ಲಿ ಜರುಗಿದ ನಮ್ಮ ಕರ್ತನ ಮರಣವು ಮಾನವಕುಲವನ್ನು ನಿತ್ಯಯಾತನೆಯಿಂದ ಪಾರುಮಾಡಲು ಸಾಧ್ಯವಿಲ್ಲ ಮತ್ತು ಈ ದಂಡನೆಗೂ, ಈಡುಬಲಿಯ ಬೆಲೆಗೂ ಯಾವುದೇ ಹೊಂದಿಕೆ ಇಲ್ಲ ಎಂಬ ಗ್ರಹಿಕೆಯನ್ನು ಉಂಟು ಮಾಡುತ್ತದೆ.

(4) ಪುನರುತ್ಥಾನ ಸಿದ್ಧಾಂತವನ್ನು ಇದು ನಿಷ್ಪ್ರಯೋಜಕ 'ವಾಗಿಯೂ, ಅಸಮಂಜಸವಾಗಿಯೂ ಕಂಡುಬರುವಂತೆ ಮಾಡುತ್ತದೆ. ಯಾಕೆಂದರೆ ಸತ್ತವರು ಯಾರೂ ಇಲ್ಲದಿರುವಾಗ, ಸತ್ತವರ ಪುನರುತ್ಥಾನವಾದರೂ ಎಲ್ಲಿಂದ? ಸಾಯುವ ವರೆಲ್ಲರೂ, ಹಿಂದಿಗಿಂತ ಹೆಚ್ಚಾದ ರೀತಿಯಲ್ಲಿ ಈಗ ಜೀವಿಸುವುದಾದರೆ, ಹಿಂದಿಗಿಂತ ಉತ್ತಮ ಸ್ಥಿತಿಯಲ್ಲಿರುವ ುದಾದರೆ, ಪುನರುತ್ಥಾನದಿಂದ ಆಗುವ ಒಳ್ಳೆಯದಾದರೂ ಏನು? ಯಾಕೆ ಇದನ್ನು ನಿರೀಕ್ಷಿಸಬೇಕು, ಮತ್ತು ಸುವಾರ್ತೆಗಳಲ್ಲಿ ಇದೊಂದೇ ನಿರೀಕ್ಷೆ ಎಂಬಂತೆ ನಮ್ಮ ಮುಂದೆ ಎತ್ತಿಹಿಡಿದಿರುವುದಾದರೂ ಏಕೆ?

(5) ತಪ್ಪುಗಳಿಗೆ ಗುಲಾಮರಾಗುವಂತೆ ಇದು ಮಾರ್ಗವನ್ನು ಸಿದ್ಧಮಾಡುತ್ತದೆ. ಅನ್ಯಜನರಲ್ಲಿ ಇದು ಗಣನೀಯವಾಗಿ ಕಂಡುಬಂದು ತಂದೆತಾಯಿಗಳನ್ನು ಪೂಜಿಸುವ ರೂಪ ಪಡಕೊಳ್ಳುತ್ತದೆ. ಆತ್ಮಗಳ ಪರಕಾಯಪ್ರವೇಶದ ಬಗ್ಗೆ ನಂಬಿಕೆಯನ್ನು ಹುಟ್ಟಿಸುತ್ತದೆ. ಮನುಷ್ಯರಾಗಿ ಸಾಯುವವರು ಕೆಲಸಮಯ ಅಶರೀರ ಸ್ಥಿತಿಯಲ್ಲಿದ್ದುಕೊಂಡು ಪುನಃ ನಾಯಿಗಳಾಗಿ, ಬೆಕ್ಕುಗಳಾಗಿ, ಕುದುರೆ ಅಥವಾ ದನಗಳಾಗಿ ಇಲ್ಲವೆ ಇಲಿಗಳಾಗಿ ಪುನಃಜನ್ಮಪಡೆದು ಈ ಮೂಕಪ್ರಾಣಿಗಳ ಅನುಭವ ಪಡೆದುಕೊಳ್ಳುತ್ತಾರೆ ಇಲ್ಲವೆ ಅರ್ಹರಾದಲ್ಲಿ ಉತ್ತಮ ಸ್ಥಿತಿಗಳಲ್ಲಿ ಇರುತ್ತಾರೆ.

(6) ಕ್ರೈಸ್ತ ರಾಜ್ಯದಲ್ಲಿ, ಈ ಕೇಡು ಇನ್ನೂ ಹೆಚ್ಚಿನ ಸೈತಾನಿಕ ರೂಪವನ್ನು ತಾಳಿದೆ ಮತ್ತು ತಪ್ಪು ಸಿದ್ಧಾಂತಗಳು ಕ್ರೈಸ್ತತ್ವವು ತೃಪ್ತಿಪಡುತ್ತಿರುವ ಎಲ್ಲಾ ಮೂಲ ದೋಷಗಳಿಗೆ ಮತ್ತು ಮೂಢನಂಬಿಕೆಗಳಿಗೆ ಆಧಾರವಾಗಿವೆ. ಸತ್ತವರು ಜೀವಿಸುತ್ತಿದ್ದಾರೆ ಮತ್ತು ಸಂಕಟಗಳನ್ನು ಎದುರಿಸಲು ಸಮರ್ಥರಿದ್ದಾರೆ ಎಂಬ ಪಿಶಾಚಿಗಳ ಸಿದ್ಧಾಂತಗಳ ಮೇಲೆ ಕಟ್ಟಲ್ಪಟ್ಟದ್ದೇ ಹೊರತಾಗಿ ಯಾವುದೇ ನಿತ್ಯಯಾತನೆಯ ಸೂತ್ರವೆಂಬುದು ಇರುತ್ತಿದ್ದಿಲ್ಲ. ಇದೇ ಬೋಧನೆಯ ಹೊರತಾಗಿ ಉತ್ತರಿಸುವ ಸ್ಥಳ (Purgatory) ಎಂಬ ಸೂತ್ರವಾಗಲೀ, ಸಿದ್ಧಾಂತವಾಗಲೀ ಇರುತ್ತಿದ್ದಿಲ್ಲ; ಇದರ ಪರಿಣಾಮವಾಗಿ, ಸತ್ತವರಿಗಾಗಿ ಪ್ರಾರ್ಥಿಸುವದಾಗಲೀ ಅಥವಾ ಅವರಿಗಾಗಿ ಮಾಸ್ ಪ್ರಾರ್ಥನೆ ಮಾಡಲು ಹಣ ಪಾವತಿಸುವುದೂ ಇರುವುದಿಲ್ಲ. ದೈವಿಕ ಗುಣಲಕ್ಷಣ ಮತ್ತು ಯೋಜನೆಗಳ ಬಗ್ಗೆ ಮಾನವ ಜಾತಿಯನ್ನು ತಮ್ಮ ಇಂಥಾಃ ಸುಳ್ಳುಬೋಧನೆಗಳಿಂದ ಮತ್ತು ತಪ್ಪು ನಿರೂಪಣೆಗಳ ಮೂಲಕ ದಾಸರುಗಳನ್ನಾಗಿ ಮಾಡಿಕೊಳ್ಳಲು ಯಾವುದೇ ಇಂಥಹ ಅಸತ್ಯಗಳಿಂದ ತುಂಬಿಹೋಗಿರುವ ಮಹಾ ಪೌರೋಹಿತ ಸಂಸ್ಥೆಗಳು ಬೆಳೆಯುತ್ತಿದ್ದಿಲ್ಲ.

(7) ಹದಿನಾರನೆಯ ಶತಮಾನದಲ್ಲಿ ನಡೆದ ಮಹಾ ಸುಧಾರಣಾ ಚಳುವಳಿಯಲ್ಲಿ ಪೋಪರ ಅಧಿಕಾರವನ್ನು ಮುರಿದು ಹಾಕಲಾಯಿತಾದರೂ, ಮೂಲದೋಷಗಳು, ಪಿಶಾಚಿಗಳ ಆಲೋಚನೆಗಳು, ಹಲವು ದೇಶಗಳ ವಿವಿಧ ರುಜುವಾತುಗಳೊಂದಿಗೆ, ನಿರೂಪಣೆ ಮತ್ತು ಪ್ರದರ್ಶನಗಳೊಂದಿಗೆ ನೀಡಿದ ಬೆಂಬಲವನ್ನು ಜೋಪಾನವಾಗಿ ಕಾಪಾಡಿಕೊಳ್ಳಲಾಗಿದೆ; ಮತ್ತು ಸುಧಾರಕರುಗಳು ಮುಂದಕ್ಕೆ ಹೆಜ್ಜೆಯಿಟ್ಟವರಾಗಿ, ಸುಳ್ಳಿನ ತಂದೆಯಿಂದ ಕಲಿಸಲ್ಪಟ್ಟವರಾಗಿ, ಮತ್ತು ಆತನ ದುರಾತ್ಮಗಳ ದಳದಿಂದ ಬೆಂಬಲ ಹೊಂದಿದವರಾಗಿ ಇನ್ನೂ ಮೂಲ ಅಸತ್ಯದಿಂದ ಬಂಧಿಸಲ್ಪಟ್ಟವರಾಗಿದ್ದಾರೆ. ಹೀಗಾಗಿ ಇಂದು ಪ್ರೋಟೆಸ್ಟಂಟ್ ಕ್ರೈಸ್ತ ಸಭೆಯು ಸಹಾ ಎಲ್ಲಾ ಕಷ್ಟಗಳೂ ಮತ್ತು ದೋಷಗಳ ನೆಲೆಯಾಗಿದ್ದು ಇದರಿಂದ ವಿವಿಧ ಪಂಗಡಗಳು ತಿಕ್ಕಾಡುತ್ತಿವೆ. ಬಹಳ ಮಟ್ಟಿಗೆ ಇದು ಅವರನ್ನು ದೈವಿಕ ವಾಕ್ಯದ ಬೆಳಕಿಗೆ ಅಂಧರನ್ನಾಗಿ ಮಾಡಿದ್ದು ಅವರು "ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ, ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲು ಪೂರ್ಣಶಕ್ತರಾಗಲು"(ಎಫೆಸ3:18) ಆಗದಂತೆ ಅವರನ್ನು ಅಡ್ಡಿ ಪಡಿಸುವುದಾಗಿದೆ.

(8) ನೂತನ ಪರಿಸ್ಥಿತಿಗಳಿಗೆ ತಮ್ಮನ್ನು ಹೊಂದಿಸಿಕೊಂಡು ಕಳೆದ ಐವತ್ತು ವರ್ಷಗಳಲ್ಲಿ ಇದು ಸಭೆಗೆ ಬೆಳಕನ್ನು ಹಿಡಿಯುವ ಪಾತ್ರ ವಹಿಸಿ ಸತ್ಯವನ್ನು ಬಯಸುವವರೆಲ್ಲರ ನಾಯಕತ್ವ ವಹಿಸಿದೆ. ಈ ರೀತಿಯಲ್ಲಿ ಇದು –"ಸೈತಾನನು ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ ಆತನ ಸೇವಕರೂ ಸಹ ನೀತಿಗೆ ಸೇವಕರಾಗಿ ಕಾಣಿಸಿಕೊಳ್ಳುವುದಕ್ಕೆ ವೇಷಹಾಕಿಕೊಳ್ಳುವುದು ದೊಡ್ಡದಲ್ಲ"

(2ಕೊರಿ.11:14–15) ಎಂಬ ಸ್ಫೂರ್ತಿಧಾಯಕವಾದ ದೇವರ ಮಾತುಗಳಿಗೆ ಸರಿಯಾಗಿದೆ.

(9) ಆತ್ಮಿಕವಾದವು (ಸ್ಪಿರಿಟಿಸಂ) ಹೆಚ್ಚಾದ ಕ್ರೈಸ್ತರನ್ನು ಸೆರೆಹಿಡಿಯುವುದರಲ್ಲಿ ವಿಫಲವಾಗಿದೆ. ಅವರ ಸತ್ತುಹೋದ ಸ್ನೇಹಿತರು ಇನ್ನೂ ಜೀವಂತವಾಗಿದ್ದಾರೆ ಎಂಬ ಸುಳ್ಳು ಸೂತ್ರದಿಂದ ಪ್ರತಿಬಂಧಿಸಲ್ಪಟ್ಟವರಾಗಿ ಕ್ರೈಸ್ತರು ಸಾಮಾನ್ಯವಾಗಿ ಈ ಮಧ್ಯಸ್ಥಿಕರುಗಳು (ಸೈತಾನನು ಹೊಂದಿರುವವರಲ್ಲಿ ಉತ್ತಮರಾದವರು) ದೇವರು ತನ್ನ ಸಂದೇಶವನ್ನು ತಿಳಿಸಲು ಮತ್ತು ಅವರಿಗೂ, ಅವರು ಇನ್ನೂ ಜೀವಿಸುತ್ತಿದ್ದಾರೆಂದು ತಪ್ಪಾಗಿ ತಿಳುಕೊಂಡಿರುವ ಅವರ ಸ್ನೇಹಿತರಿಗೂ ಸಂಪರ್ಕ ಸಾಧನವಾಗುವಂತೆ ನೇಮಿಸಿದ ಮಧ್ಯಸ್ಥಿಕರಲ್ಲ ಎಂದು ತಮ್ಮ ಸಹಜಪ್ರವೃತ್ತಿಯಿಂದ ಗ್ರಹಿಸಿಕೊಳ್ಳುತ್ತಾರೆ. ಮತ್ತು ಅವರನ್ನು ಕಾಣಲಾಗದಿದ್ದರೂ ಆಗಾಗ್ಗೆ ಅವರನ್ನು ಸಮೀಪಿಸುತ್ತಾ ಇರುತ್ತಾರೆ. ಇದರ ಪರಿಣಾಮವಾಗಿ ಮಹಾ ವಿರೋಧಿಯು ಅವರನ್ನು ಒಟ್ಟುಗೂಡಿಸಿ, ಹಿಡಿದು, ಸಾಧ್ಯವಾದ ಮಟ್ಟಿಗೆ ಅವರನ್ನು ಕೆಡುಕಿಗೆ ಎಳೆಯುವಂತೆ ಆತ್ಮಿಕವಾದವನ್ನು (ಸ್ಪಿರಿಟಿಸಂ) ಅನುಮತಿಸುವುದರೊಂದಿಗೆ, ಇನ್ನೂ ಹೆಚ್ಚಿನ ಮಾರ್ಮಿಕವಾದ ಪ್ರಲೋಭನೆಗಳಿಗೆ, ನಿಜವಾದ ಕ್ರೈಸ್ತತ್ವಕ್ಕೆ ಇನ್ನೂ ಹೆಚ್ಚಿನ ಮಿತಿಯಿರುವಂತಹ ಈ ಕೆಳಗಿನ ಹೆಸರಿಗೆ ಸೆಳೆಯುತ್ತಾನೆ.

## ಕ್ರೈಸ್ತ ವಿಜ್ಞಾನ ಮತ್ತು ದೈವಜ್ಞಾನ
## Christian Science and Theosophy

ಈ ಪದ್ಧತಿಗಳು ದೇವರ ವಾಕ್ಯಕ್ಕೆ ಪೂಜ್ಯ ಭಾವನೆಯನ್ನುಂಟುಮಾಡುತ್ತವೆ ಎಂದು ಸೋಗುಹಾಕಿದರೂ, ಮತ್ತು ಕ್ರಿಸ್ತನನ್ನು ವಿಮೋಚಕನೆಂದು ನಂಬದೆ ಆತನ ಹೆಸರನ್ನು ವ್ಯರ್ಥವಾಗಿ ಬಳಸಿಕೊಂಡರೂ ಇವುಗಳು ಪ್ರಸ್ತುತ ಸಮಯದಲ್ಲಿ ಇದುವರೆಗೆ ಮಾನವ ಸಂಪ್ರದಾಯವಾಗಿ ಹೊಟ್ಟಿನಂತೆ ಉಣಿಸಲ್ಪಡುತ್ತಿದ್ದ ಸಂಗತಿಗಳಿಂದ ಎಚ್ಚೆತ್ತು ಭಿನ್ನವಾದುದಕ್ಕೆ ಹಂಬಲಿಸುತ್ತಿರುವ ಕ್ರೈಸ್ತರನ್ನು ಮರಳು ಮಾಡುವಂತೆ ಉಪಯೋಗಿಸಲ್ಪಡುತ್ತಿವೆ. ಸತ್ಯವನ್ನು, ವಿಜ್ಞಾನವನ್ನು ಪ್ರತಿಯೊಂದು ಅರ್ಥದಲ್ಲಿ ನಿರ್ಲಕ್ಷಿಸುತ್ತಾ ಇವರುಗಳು ತಮ್ಮ ಅನುಯಾಯಿಗಳನ್ನು ವೈಜ್ಞಾನಿಕವಾಗಿ ಉಣಬಡಿಸುತ್ತೇವೆಂದು ಪ್ರಕಟಿಸಿಕೊಳ್ಳುತ್ತಾರೆ.

(10) ಪ್ರಾಯಶ್ಚಿತ್ತ ಸಂಧಾನವು ಸಮಸ್ತವನ್ನೂ ಸರಿಪಡಿಸುವ ದೇವರ ಯೋಜನೆಯಾಗಿದೆ ಎಂದು ಕಂಡುಕೊಂಡ ವಿರೋಧಿಯು, ಕ್ರೈಸ್ತ ವಿಜ್ಞಾನಿಗಳು, ಮನಸ್ಸನ್ನು ಗುಣಪಡಿಸುವವರು, ದೈವ ಜ್ಞಾನಿಗಳು, ಅತೀಂದ್ರೀಯ ದೃಷ್ಟಿಯುಳ್ಳವರುಗಳ ಮೂಲಕ ದೇವರ ಯೋಜನೆಯಿಂದ ಮಾನವರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದಾನೆ. ಸತ್ಯದ ಕೃತ್ರಿಮವಾದ ಖೋಟಾ ಸಂಗತಿಗಳು ದೇವರ ವಾಕ್ಯದ ಮುಖ್ಯ ತಳಹದಿಯಾದ ಈಡುಬಲಿಯನ್ನೇ ಅಲ್ಲಗಳೆಯುವುದರೊಂದಿಗೆ ಕ್ರೈಸ್ತ ಪ್ರಪಂಚವನ್ನು ತಪ್ಪುದಾರಿಗೆಳೆಯುವ ಸೈತಾನನ ಶಕ್ತಿಯು ಕ್ಷೀಣಿಸುತ್ತಿದೆ ಮತ್ತು ವಿವೇಕಿ ಜನರ ವಿಷಯದಲ್ಲಿ ಆತನ ಮನೆಯು ಬೀಳುವಂತೆ ಅಲಗಾಡುತ್ತಿದೆಯೆಂದು ನಮಗೆ ವೇದ್ಯವಾಗುತ್ತದೆ. ಸಾವಿರವರ್ಷ ಆಳ್ವಿಕೆಯ ಕಾಲದ ಪ್ರಕಾಶವು ಮಾನವ ಜಾತಿಯ ಪ್ರಪಂಚದ ಮೇಲೆ ಮೂಡುತ್ತಿದೆ ಮತ್ತು ತಪ್ಪಿನ ಮಹಾ ರಕ್ಷಕನು ತನ್ನ ದುಃಸ್ಥಿತಿಯಲ್ಲಿದ್ದಾನೆ. ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆಯ ಕಾಲದಲ್ಲಿ ಆತನು ಬಂಧಿಸಲ್ಪಡುತ್ತಾನೆ ಮತ್ತು ಪ್ರಪಂಚವನ್ನು ಮೋಸಗೊಳಿಸುವುದರಿಂದ ತಡೆಯಲ್ಪಡುತ್ತಾನಾದ ಕಾರಣ ದೇವರಿಗೆ ಸ್ತೋತ್ರವಾಗಲಿ. ಈ ಕಾಲದಲ್ಲಿ ಸಮುದ್ರದಲ್ಲಿ ನೀರು ಹೇಗೋ ಹಾಗೆ ಯೆಹೋವನ ಜ್ಞಾನವು ಭೂಮಿಯಲ್ಲಿ ತುಂಬಿರುವದು!

ನಾವು ಅನ್ಯರ ಪ್ರಪಂಚವನ್ನು ನೋಡುವುದಾದರೆ ಈ ಪಿಶಾಚಿಗಳ ಭೀಷಣವಾದ ಕೀಳುಕಾರ್ಯಗಳನ್ನು ಸ್ಪಷ್ಟವಾಗಿ ನೋಡಬಹುದು. ಅವರುಗಳು ತಮ್ಮ ಅಲೌಕಿಕ ಶಕ್ತಿಯನ್ನು ಬಳಸಿ, ಮತ್ತು ತಮ್ಮ ಮಾನವ ಪಾರುಪತ್ಯಗಾರರ ಮೂಲಕ ಯಾವ ರೀತಿಯಲ್ಲಿ ಜನರ ಮೇಲೆ ತಮ್ಮ ಬಂಧನವನ್ನು ಭದ್ರ ಪಡಿಸಿಕೊಂಡಿದ್ದಾರೆ ಎಂದು ಕಾಣಬಹುದು. ಉದಾಹರಣೆಗೆ ಭಾರತ ದೇಶದ ಇಂದಿನ ಫಕೀರರುಗಳು, ಮತ್ತು ಈ ಹಿಂದೆ ಪ್ರಪಂಚದ ಕರಾಳ ದಿನಗಳಲ್ಲಿ ಸಾಮಾನ್ಯವಾಗಿ ಚಾಲನೆಯಲ್ಲಿದ್ದ 'ವಾಮಾಚಾರ'. ದೆವ್ವಗಳ ಈ ಕಾರ್ಯದ ಬಗ್ಗೆ ಸುವಾರ್ತೆಗಳ ಪರಿಣಾಮವನ್ನು ನಾವು ಸತ್ಯವೇದದಲ್ಲಿ ಕಂಡುಕೊಳ್ಳಬಹುದು ಮತ್ತು ದೈವಿಕ ಸತ್ಯದ ಪ್ರಕಾಶವು "ಈ ಪ್ರಪಂಚದ ಬೆಳಕಾಗಿದೆ" ಮತ್ತು ಇದು ಮಾತ್ರವೇ ವಿರೋಧಿಯ ಕತ್ತಲನ್ನು ಹೋಗಲಾಡಿಸುವುದಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಅಪೋಸ್ತಲನಾದ ಪೌಲನು ಏಷಿಯಾ ಮತ್ತು ಯೂರೋಪ್ ದೇಶಗಳ ಪ್ರಯಾಣದ ಸಮಯದಲ್ಲಿ ಸತ್ಯದ ಬೆಳಕನ್ನು ಎತ್ತಿ ಹಿಡಿಯುವಾಗ ತನ್ನ ಅನುಭವದಲ್ಲಿ ಕಂಡುಕೊಂಡ ಈ ಬೆಳಕು ಮತ್ತು ಕತ್ತಲಿನ ನಡುವಣ ತಿಕ್ಕಾಟವನ್ನು ಗಮನಿಸಿರಿ – "ಆತನನ್ನು ನಂಬಿದವರಲ್ಲಿ ಅನೇಕರು ಬಂದು ತಮ್ಮ ಕೃತ್ಯಗಳನ್ನು ಒಪ್ಪಿಕೊಂಡು ತಿಳಿಸಿದರು. ಇದಲ್ಲದೆ ಮಾಟ ಮಂತ್ರಗಳನ್ನು ನಡಿಸಿದವರಲ್ಲಿ ಅನೇಕರು ತಮ್ಮ ಪುಸ್ತಕಗಳನ್ನು ಕೂಡಿಸಿ ಎಲ್ಲರ ಮುಂದೆ ಸುಟ್ಟುಬಿಟ್ಟರು. ಅವುಗಳ ಕ್ರಯವನ್ನು ಲೆಕ್ಕವನ್ನು ಮಾಡಿ ಐವತ್ತು ಸಾವಿರ ಬೆಳ್ಳಿನಾಣ್ಯ ಆಯಿತೆಂದು ತಿಳಿದುಕೊಂಡರು. ಈ ರೀತಿಯಾಗಿ ಕರ್ತನ ವಾಕ್ಯವು ಬಹಳವಾಗಿ ಹೆಚ್ಚುತ್ತಾ ಪ್ರಬಲವಾಯಿತು" (ಅಪೋಸ್ತಲರ ಕೃತ್ಯಗಳು 19: 18–20).

ಅಪೋಸ್ತಲರುಗಳು ಕೆಲವೊಮ್ಮೆ ಅವರ ಸುವಾರ್ತಾ ಸೇವೆಯನ್ನು ವಿರೋಧಿಸುತ್ತಿದ್ದ ಈ ದುರಾತ್ಮಗಳೊಂದಿಗೆ ನಿರಂತರವಾದ ಹೋರಾಟದಲ್ಲಿದ್ದರು. ಆದರೆ, ಅಪೋಸ್ತಲರ ಮೂಲಕ ಕಾರ್ಯಸಾಧಿಸುತ್ತಿದ್ದ ಉನ್ನತ ಮಟ್ಟದ ಆತ್ಮೀಕ ಶಕ್ತಿಗಳ ಮುಂದೆ ಅವುಗಳು ಸಂಪೂರ್ಣವಾಗಿ ಹೋರಾಡಲು ಸಾಧ್ಯವಿಲ್ಲವೆಂದು ಸಾಮಾನ್ಯವಾಗಿ ಗ್ರಹಿಸಿದರು. ಒಂದು ಸಂಧರ್ಭದಲ್ಲಿ ದುರಾತ್ಮವು ಸುವಾರ್ತೆಯೊಡನೆ ಸಂಯೋಜನೆಮಾಡ ಬಯಸಿ, ಮಧ್ಯಸ್ಥಿಕರನ್ನು ಹುರಿ ದುಂಬಿಸುವಂತೆ "ಈ ಮನುಷ್ಯರು ಪರಾತ್ಪರನಾದ ದೇವರ ದಾಸರು; ನಿಮಗೆ ರಕ್ಷಣೆಯ ಮಾರ್ಗವನ್ನು ಸಾರುತ್ತಾರೆ" (ಅ. ಕೃ. 16:17) ಎಂದು ಕೂಗಿ ಹೇಳಿದ ಬಗ್ಗೆ ಓದುತ್ತೇವೆ. ಇದು ಸುವಾರ್ತೆಯನ್ನು ಪೈಶಾಚಿಕತೆಗೆ ಅಥವ ಮಧ್ಯಸ್ಥಿಗಾರಿಕೆಗೆ ಹೊಂದಿಸುವ ಪ್ರಯತ್ನ ಇದಾಗಿತ್ತೋ ಅಥವಾ ಪಿಶಾಚಿಗಳು ಇದನ್ನು ಅನುಸರಿಸುವ ಮನುಷ್ಯರೊಳಗಣ ಗಲಿಬಿಲಿ ಮತ್ತು

ಅಪೋಸ್ತಲರೊಂದಿಗೆ ವಿರೋಧಗಳನ್ನು ಉಂಟುಮಾಡುವ ಚಾಣಾಕ್ಷವಾದ ಕುತಂತ್ರವೋ ಎಂಬುದನ್ನು ನಾವು ನಿರ್ಣಯಿಸಲಾರೆವು. ಆದರೆ ಅಪೋಸ್ತಲರು ಈ ಮಧ್ಯಸ್ಥಗಾರರನ್ನು ಸತ್ತವರ ಮಧ್ಯಸ್ಥಗಾರರೆಂದು ಗ್ರಹಿಸದೆ ಬಿದ್ದುಹೋದ ದೇವದೂತರುಗಳ ಅಥವಾ ಪಿಶಾಚಿಗಳ ಪ್ರತಿನಿಧಿಗಳು (Demons) ಎಂದು ಗ್ರಹಿಸಿದರು ಎಂಬ ಒಂದು ಅಂಶವು ಈ ಎಲ್ಲಾ ಘಟನೆಗಳಲ್ಲಿಯೂ ನಮ್ಮ ಮುಂದೆ ಸ್ಪಷ್ಟವಾಗಿ ಬಂದು ನಿಲ್ಲುತ್ತದೆ. ಅಪೋಸ್ತಲರೊಂದಿಗೆ ನಡೆಸಿದ ಸಮಾಲೋಚನೆಯಲ್ಲಿ ಈ ಪಿಶಾಚಿಗಳು ತಮ್ಮ ಸ್ವಂತ ಅನ್ಯೋನ್ಯತೆಯನ್ನು ಎಂದಿಗೂ ಅಲ್ಲಗಳೆಯಲಿಲ್ಲ ( ಅಪೋಸ್ತಲರ ಕೃತ್ಯಗಳು 16: 16–19, 19:15 ಮತ್ತು ಯಾಕೋಬ 2:19).

ಅದರಂತೆ ನಮ್ಮ ಕರ್ತನ ಸೇವಾ ಕಾರ್ಯದ ಸಮಯದಲ್ಲಿಯೂ ಈ ದುರಾತ್ಮಗಳು ತಮ್ಮನ್ನು ಅಂಗೀಕರಿಸ ಬಯಸುವ ಅನೇಕ ಯೆಹೂದ್ಯರುಗಳನ್ನು ಕಂಡುಕೊಂಡವು. ಅಂತವರನ್ನು "ದೆವ್ವ ಹಿಡಿದವರು" ಎಂದು ತಿಳಿಯಲಾಗಿತ್ತು. ಇಂತಹ ಅನೇಕ ದೆವ್ವಗಳು ಅವರನ್ನು ಹಿಡಿಯುವ ಹಲವು ಸಂಧರ್ಭಗಳಲ್ಲಿ ಪೀಡಿತರಾದವನಿಗೆ ತನ್ನ ಮೇಲೆ ಯಾವ ನಿಯಂತ್ರಣವೂ ಇರುತ್ತಿದ್ದಿಲ್ಲ. ಆತನ ಮಾತುಗಳು, ಆತನ ಆಲೋಚನೆಗಳು ಮತ್ತು ಕ್ರಿಯೆಗಳು ಅನೇಕ ಪಿಶಾಚಿಗಳಿಂದ ನಿಯಂತ್ರಣ ವಾಗುತ್ತಿದ್ದವು ಮತ್ತು ಆತನ ನಡತೆಯು ಹುಚ್ಚನಂತಿರುತ್ತಿತ್ತು. ಇಂಥಹ ಅನೇಕ ದೆವ್ವ ಪೀಡಿತರು ನಮ್ಮ ಕರ್ತನ ಸೇವಾವಧಿಯಲ್ಲಿ ಆತನಿಂದಲೂ, ಆತನು ತನ್ನ ಆತ್ಮ, ಶಕ್ತಿ ಮತ್ತು ಪ್ರಭಾವದೊಡನೆ ತಾನು ಮತ್ತು ಆತನು ಕಳುಹಿಸಿಕೊಟ್ಟವರ ಮೂಲಕವೂ ಗುಣಮಾಡಲ್ಪಟ್ಟರು. ಲೂಕ 4:34–37 ಮತ್ತು ಮತ್ತಾಯ 8: 28–33ರಲ್ಲಿ ಇಂತಹ ಕುತೂಹಲಕಾರಿಯಾದ ಘಟನೆಗಳನ್ನು ನೋಡಬಹುದು. ಇಲ್ಲಿ ದೆವ್ವಗಳು ಕರ್ತನೊಡನೆ ಸಂಭಾಷಿಸುವಾಗ ತಮ್ಮ ಸ್ವಂತ ವ್ಯಕ್ತಿತ್ವವನ್ನು ನಿರಾಕರಿಸದೆ ಆತನ ಒಡೆತನವನ್ನು ಮತ್ತು ತಮ್ಮ ಮೇಲಿರುವ ಆತನ ಅಧಿಕಾರವನ್ನು ಒಪ್ಪಿಕೊಳ್ಳುವುದನ್ನು ಮತ್ತು ಭವಿಷ್ಯದಲ್ಲಿ ತಮ್ಮ ನಿಗ್ರಹ ಮತ್ತು ಸೆರೆವಾಸದಿಂದ ವಿಮೋಚನೆ ಹೊಂದಿಕೊಳ್ಳುವ ನಿರೀಕ್ಷೆಯನ್ನು ವ್ಯಕ್ತಪಡಿಸುವುದನ್ನು ಕಾಣಬಹುದು. ಇದು ಒಂದು ಪರಕಾಷ್ಠತೆ ಅಥವಾ ದೈವನಿರ್ಣಯದ ಅಂತ್ಯ *

## "ನಾವು ಹೋರಾಡುವುದು ಕೇವಲ ರಕ್ತಮಾಂಸ ಶರೀರದೊಂದಿಗೆ ಅಲ್ಲ"

### "We Wrestle not (merely) with Flesh and Blood"

ಸ್ವತಃ ಸೈತಾನನು, ಕೆಡುಕಿನಲ್ಲಿ ಆತನ ಸಂಗಡಿಗರಾದ ಪಿಶಾಚಿಗಳು, ಮಾನವ ಜೀವಿಗಳಲ್ಲಿ, ಅವರ ಮೇಲೆ ಮತ್ತು ಅವರ ಮೂಲಕವಾಗಿ, ದೇವರಿಗೆ ವಿರುದ್ಧವಾಗಿ, ಮತ್ತು ಆತನು ವಿನ್ಯಾಸಗೊಳಿಸಿ ನಮ್ಮ ಕರ್ತನ ಮೊದಲ ಆಗಮನ ಮತ್ತು ಈಡುಬಲಿಯ ಬೆಲೆಯಾಗಿ ಶಿಲುಬೆಯಲ್ಲಿ ಆತನು ಅನುಭವಿಸಿದ ಮರಣದ ಮೂಲಕ ಕಾರ್ಯಗತಗೊಳಿಸಿರುವ ಪಾಪ ನಿವೃತ್ತಿಯ ಯೋಜನೆಯ ವಿರುದ್ಧವಾಗಿ ಕಾರ್ಯವೆಸಗುವ ಪ್ರಬಲವಾದ ಶಕ್ತಿಗಳಾಗಿದ್ದಾರೆಂಬುದು ನಮಗೆ ಮುಂದಿನವುಗಳಿಂದ ಕಂಡುಬರುತ್ತದೆ. ಈ ದೃಷ್ಟಿಕೋನದಿಂದಲೇ "ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ, ಅಧಿಕಾರಗಳ ಮೇಲೆಯೂ, ಈ ಅಂಧಕಾರದ ಲೋಕದ ಲೋಕಾಧಿಪತಿಗಳ ಮೇಲೆಯೂ, ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" (ಎಫೆಸ 6:12) ಎಂಬ ಅಪೋಸ್ತಲನ ಮಾತುಗಳ ಮಹತ್ವವನ್ನು ಗ್ರಹಿಸಿಕೊಳ್ಳಬಹುದು. ಈ ಮಾಯಾವಿ ಸೈತಾನನ ವಿರುದ್ಧವಾಗಿ, ಪತನಗೊಂಡ ಮಾನವನು ತನ್ನನ್ನು ಕಾಪಾಡಿಕೊಳ್ಳಲು ಶಕ್ತನಲ್ಲ ಎಂಬುದನ್ನು ಕಂಡುಕೊಂಡು, ಕರ್ತನ ಜನರು ಆತನ ಕುಯುಕ್ತಿಗಳಿಂದ ತಮ್ಮನ್ನು ಪಾರುಮಾಡಿಕೊಳ್ಳಬೇಕಾದರೆ, ಅವರು ತಮ್ಮ ಕರ್ತನಿಗೆ ತಮ್ಮ ಹೃದಯಗಳನ್ನು ಸಂಪೂರ್ಣವಾಗಿ ನಿಷ್ಠೆಗೊಳಿಸುವ ಮತ್ತು ಆತನ ಮಾತುಗಳಿಗೆ ಬದ್ಧರಾಗಿರುವುದರ ಅನುಪಾತದ ಮೇಲೆ ಮಾತ್ರವೇ ಆಧಾರವಾಗಿದೆ. ಅಂಥವರಿಗೆ ಆತನು ವಿಶೇಷ ಸಹಾಯ ದಯಪಾಲಿಸುತ್ತಾನೆ ಮತ್ತು ಅವರನ್ನು ಕೇಡುಗಳಿಂದ ಪಾರುಮಾಡುತ್ತಾನೆ, ಆದರೆ ಈ ಸಹಾಯವಿಲ್ಲದೇ ಹೋದಲ್ಲಿ ಸೈತಾನನು ಈ ಆಯ್ದುಕೊಂಡವರನ್ನೇ ಮೋಸಪಡಿಸುತ್ತಾನೆ ಎಂದು ನೋಡುವಾಗ ನಾವು "ದೇವರು ಯಾಕೆ ಈ ಮಹಾ ವಿರೋಧಿಗೆ ತನ್ನ ಜಾರಿಕೊಳ್ಳುವ ತಪ್ಪುಗಳಿಂದ, ತಪ್ಪುಸಿದ್ಧಾಂತಗಳಿಂದ ಮತ್ತು ಕೆಲವೊಮ್ಮೆ ಇದನ್ನು ಬೆಂಬಲಿಸುವಂತಹ ಅದ್ಭುತ ಕಾರ್ಯಗಳಿಂದ ಮಾನವರನ್ನು ಮೋಸಗೊಳಿಸಲು ಯಾಕೆ ಅನುಮತಿಸುತ್ತಾನೆ? ಎಂಬ ವಿಚಾರಣೆಗೆ ತೊಡಗುತ್ತೇವೆ.

ಈ ಪ್ರಶ್ನೆಗೆ ನಾವು ಕಂಡುಕೊಳ್ಳಬಹುದಾದ ತೃಪ್ತಿದಾಯಕ ಉತ್ತರವೆಂದರೆ, ದೇವರು ಪ್ರಸ್ತುತ ಕಾಲದಲ್ಲಿ ಇಡೀ ಲೋಕದ ಸಮಾಧಾನವನ್ನು ಬಯಸುತ್ತಿಲ್ಲ, ಲೋಕದ ಎಲ್ಲಾ ಮಾನವರನ್ನು ತನ್ನ ಸಾಮರಸ್ಯಕ್ಕೆ ಒಳಪಡಿಸಲು ಪ್ರಯತ್ನಿಸುತ್ತಿಲ್ಲ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ಆತನು ವಿಮೋಚನೆಗೊಂಡ ಸಂತಾನದವರಲ್ಲಿ ಮೊದಲೇ ಗೊತ್ತುಪಡಿಸಿದ ಚಿಕ್ಕ ಹಿಂಡಾದ ನೂತನ ಸೃಷ್ಟಿಗಳನ್ನು ಮಾತ್ರವೇ ಆಯ್ದುಕೊಳ್ಳುತ್ತಾನೆ. ಅವರು ದೇವಾನುಗ್ರಹದಿಂದ ತಮ್ಮ ಈ ಆಯ್ಕೆಯನ್ನು ಖಚಿತಪಡಿಸಿಕೊಂಡು ತಮ್ಮ ಹೃದಯಗಳಲ್ಲಿ ಕರ್ತನ, ದೇವರ ಪ್ರಿಯ ಕುಮಾರನ, ವಿಮೋಚಕನ ಮತ್ತು ತಮ್ಮ ಮದಲಿಂಗನ ಪ್ರತಿರೂಪಿಗಳಾಗುತ್ತಾರೆ. ವಿರೋಧಿಯ ಈ ಭ್ರಮೆಯ ಅಡಿಯಲ್ಲಿ ಪ್ರಪಂಚದ ಅನುಭವವು ಧರ್ಮಯುಗದ ಕಾಲದಲ್ಲಿ ಸ್ಪಷ್ಟವಾಗಿ ಬಯಲಿಗೆ ಬರುತ್ತದೆ. ನಂತರ ಎಲ್ಲರೂ ಬೇರೆ ಕ್ರಮಗಳ ಭ್ರಾಂತಿಕಾರಕ ಮತ್ತು ಕೀಳುಂಟುಮಾಡುವ ಅನುಭವಗಳನ್ನು ನೈತಿಕತೆಯ ಕ್ರಮಗಳಿಗಿಂತ ಹೆಚ್ಚಾಗಿ ನೋಡಿ ಇವುಗಳನ್ನು ಬೇರೆಲ್ಲಾ ಧರ್ಮಶೀಲತೆ ದೇವರಾತ್ಮನ ಮತ್ತು ಸತ್ಯದ ಆತ್ಮನ ಕ್ರಮಗಳಿಗಿಂತ ಹೆಚ್ಚಾಗಿ ಮತ್ತು ಪೂರ್ಣವಾಗಿ ಮೆಚ್ಚಿಕೊಳ್ಳುತ್ತಾರೆ. ಈ ರೀತಿಯಾಗಿ ಅವರು ಎಷ್ಟು ಸಮಗ್ರವಾಗಿ ಭ್ರಮೆಗೊಂಡಿದ್ದಾರೆ ಮತ್ತು "ಸೈತಾನನ ಉರ್ಲಿಗೆ"ಬಿದ್ದವರಾಗಿದ್ದಾರೆ (2ತಿಮೋಥೆ 2:26) ಎಂದು ಎಲ್ಲರೂ ಕಂಡುಕೊಳ್ಳುತ್ತಾರೆ. ತಾವು ಯಾವರೀತಿಯಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ

---

* ಆತ್ಮೀಕವಾದ – ಭೂತವಿದ್ಯೆಯ (Spiritism- Demonism) ಬಗ್ಗೆ ಹೆಚ್ಚಿನ ವಿವರಗಳಿಗೆ ಸಂಪಾದಕರಿಗೆ ಬರೆದು ಪಡೆದುಕೊಳ್ಳಿರಿ

ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಮ್ಮನ್ನು ಮಂಕುಮಾಡಿದ್ದಾನೆ (2ಕೊರಿಂಥ.4:4) ಎಂಬುದನ್ನೂ ಕಂಡುಕೊಳ್ಳುತ್ತಾರೆ. ಅವರು ನೀತಿಪಾಠವನ್ನು ಅನೇಕ ಭಾಗವಾಗಿ ಕಲಿತುಕೊಳ್ಳುತ್ತಾರೆ:

(1) ದೇವರು ತನ್ನೆಲ್ಲಾ ಸೃಷ್ಟಿ ಜೀವಿಗಳ ನಿಜವಾದ ಸ್ನೇಹಿತನಾಗಿದ್ದಾನೆ ಮತ್ತು ಆತನ ಕಟ್ಟಳೆಗಳೆಲ್ಲವೂ ಅವರ ಹಿತಕ್ಕಾಗಿ ಮತ್ತು ಒಳಿತಿಗಾಗಿಯೇ ಅವೆ ಎಂಬುದನ್ನು ಕಲಿತುಕೊಳ್ಳುತ್ತಾರೆ.

(2) ಅವರು ಸೈತಾನನಲ್ಲಿ, ಬಿದ್ದುಹೋದ ದೇವದೂತರುಗಳಲ್ಲಿ ಮತ್ತು ತಮ್ಮ ಸ್ವಂತ ಅನುಭವದಲ್ಲಿ ತೋರಿಬರುವ ವಿಶ್ವಾಸದ್ರೋಹ ಗುಣದ ಬಗ್ಗೆ ಅರಿತುಕೊಳ್ಳುತ್ತಾರೆ.

(3) ಅವರು ಸ್ವಲ್ಪವೂ ಸಂಶಯಪಡದೆ ತಮ್ಮ ಸ್ವಂತ ನಿರ್ಣಯಗಳನ್ನು ನಂಬದಂತೆ, ಅಂಥಹ ಪರಿಸ್ಥಿತಿಗಳಲ್ಲಿ ಮನುಷ್ಯರ ಮಿತಿಯುಳ್ಳ ಜ್ಞಾನದ ದೆಸೆಯಿಂದ ಬೆಳಕು ಕತ್ತಲಾಗಿಯೂ, ಕತ್ತಲು ಬೆಳಕಾಗಿಯೂ, ಒಳ್ಳೆಯದು ಕೆಟ್ಟದ್ದಾಗಿಯೂ, ಕೆಟ್ಟದ್ದು ಒಳ್ಳೆಯವುಗಳಾಗಿಯೂ ಕಾಣುವ ಸಾಧ್ಯತೆಗಳಿವೆ ಎಂಬುದನ್ನು ತಿಳಿಯುತ್ತಾರೆ. ಇವುಗಳು ಸದಾಕಾಲ ಉಳಿಯುವ ಅಮೂಲ್ಯ ಪಾಠಗಳಾಗಿವೆ ಮತ್ತು ಈ ಮೂಲಕ ಇಡೀ ಮಾನವ ಜನಾಂಗವು ದೇವರ ಜ್ಞಾನವನ್ನು ಮಾತ್ರವಲ್ಲದೆ ಆತನ ಒಳ್ಳೆಯತನ ಮತ್ತು ಶಕ್ತಿಯನ್ನು ಸಂಶಯಾತೀತವಾಗಿ ನಂಬಬಹುದು.

## ಕೆಡುಕನ ಸೇವೆ ಅಥವಾ ಪೌರೋಹಿತ್ಯ
## The Ministry of Evil

ಇದೇ ಸಮಯದಲ್ಲಿ ಜನರು ತಮ್ಮ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಲು ಸಾಧ್ಯವಿಲ್ಲದಿರುವಾಗ ಅವರಲ್ಲಿನ ಈ ತಪ್ಪುದೋಷಗಳು ಮತ್ತು ಅಂಧಶ್ರದ್ಧೆಗಳು ಅವರನ್ನು ದಾಸತ್ವದ ಬಂಧನದಲ್ಲಿಡುವಂತೆ ಸೇವೆ ಮಾಡುತ್ತವೆ. ಯಾಕೆಂದರೆ, ಪರಿಪೂರ್ಣ ವ್ಯಕ್ತಿಗಳು ಮಾತ್ರವೇ, ದೇವರ ಸಂಪೂರ್ಣ ಸ್ವಾರೂಪ್ಯವನ್ನು ಹೊಂದಿರುವವರು ಮತ್ತು ಆತನಿಂದ ಮಾರ್ಗದರ್ಶನ ಹೊಂದಿದವರು ಮಾತ್ರವೇ ತಮಗೆ ಜಯ ಲಭಿಸುವಂತೆ ಸ್ವಯಂ ನಿಯಂತ್ರಣಕ್ಕೆ ಸರಿಯಾದ ರೀತಿಯಲ್ಲಿ ತಮ್ಮನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ಸೈತಾನನ ಈ ವಿರೋಧಿಗಳು ಮತ್ತು ಆತನ ಕೇಡಿನ ಸಂಗಾತಿಗಳು ಹಾಗೂ ಲೋಕದ ವಿರೋಧ ಅದರ ತಪ್ಪು ದೋಷಗಳು ಹಾಗೂ ಭ್ರಮೆಗಳ ಮೂಲಕ ಸತ್ಯದ ವಿರುದ್ಧ, ಅದರ ಸೇವಕರುಗಳಾಗಿರುವವರ ವಿರುದ್ಧ, ಸತ್ಯಕ್ಕೆ ನಿಷ್ಠೆಯಾಗಿಯೂ ಮತ್ತು ಅದರ ಚೈತನ್ಯಪೂರಿತ ಸೇವೆಯಲ್ಲಿ ನಿರತರಾಗಿರುವವರ ಅನುಪಾತದ ಮೇರೆಗೆ ಅವುಗಳು ಗುರಿಯನ್ನಿಟ್ಟಿವೆ. ಜೀವಸ್ವರೂಪನಾದ ದೇವರ ನಿಷ್ಠಾವಂತ ಸೇವಕನಾದ ನಮ್ಮ ಸ್ವಾಮಿಭಕ್ತ ಪ್ರಭುವು, ತನ್ನ ಹೆಜ್ಜೆಜಾಡಿನಲ್ಲಿ ಹಿಂಬಾಲಿಸುವವರಿಗೆ "ಲೋಕವು ನಿಮ್ಮ ಮೇಲೆ ದ್ವೇಷ ಮಾಡುವುದಾದರೆ ಅದು ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳಿದುಕೊಳ್ಳಿರಿ. ನೀವು ಈ ಲೊಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು. ಆದರೆ ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ" (ಯೋಹಾನ 15: 18–19). ಇದರ ಪರಿಣಾಮವಾಗಿ, ಸ್ವಭಾವಿಕ ಕಾನೂನನ್ನು ಕಾರ್ಯೋನ್ಮುಖವಾಗಿರುವುದರಿಂದ ನಾವು "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು" (2ತಿಮೋ.3:12) ಎಂದು ಹೇಳಬಹುದು. ಈ ಲೋಕದಿಂದ, ಮನುಷ್ಯ ಮತ್ತು ಪಿಶಾಚನಿಂದ ಉಂಟಾಗುವ ಈ ಹಿಂಸೆಗಳು ಮತ್ತು ವಿರೋಧಗಳು, ನಮ್ಮ ಮೇಲೆ ಸುತ್ತಿಗೆ (ಉಳಿ) ಮುಂತಾದ ಕರ್ತನ ಹೊಳಪುನೀಡುವ ಸಾಧನಗಳಾಗಿದ್ದು ಆತನು ಇದನ್ನು ನೂತನ ಸೃಷ್ಟಿಗಳ ಅಭಿವೃದ್ಧಿಗಾಗಿ ಉಪಯೋಗಿಸುತಿದ್ದಾನೆ.

ಕ್ರೋಧ ಮತ್ತು ವಿರೋಧಗಳನ್ನುಂಟುಮಾಡಲು ವಿರೋಧಿಯು ತಾನೇ ಒದಗಿಸುವ ಮಾನವ ಮತ್ತು ದೆವ್ವಗಳ ಈ ಸಾಧನಗಳನ್ನು ದೇವರು ತನ್ನ ಸ್ತುತಿಸ್ತೋತ್ರಕ್ಕಾಗಿ ಉಪಯೋಗಿಸುತ್ತಾನೆ, ಅದರಲ್ಲಿ ಆತನ ಆಯ್ಕೆಯಾದ ಸಭೆಯ ಈ ಅನುಭವಗಳು ಮತ್ತು ಸಂಕಟಗಳು ನಮಗಾಗಿ ಕಾರ್ಯವೆಸಗುತ್ತವೆ– "ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ" (2ಕೊರಿಂಥ 4:17) ಈ ಸಲಕರಣೆಗಳಿಂದ ದೇವರ ಮಂದಿರದ ಜೀವವುಳ್ಳ ಕಲ್ಲುಗಳು ರೂಪಗೂಂಡು ಅಲಂಕೃತಗೊಳ್ಳುತ್ತವೆ ಮತ್ತು ಮಹಾ ವಾಸ್ತುಶಿಲ್ಪಿಯ ವಿನ್ಯಾಸದ ಸಾಮರಸ್ಯಕ್ಕೆ ತಕ್ಕಂತೆ ಸಿದ್ಧಗೊಳ್ಳುತ್ತವೆ. ಈ ಜೀವವುಳ್ಳ ದೇವ ಮಂದಿರದಲ್ಲಿ ಮತ್ತು ಅದರ ಮೂಲಕವಾಗಿ ಅಲ್ಪಾವಧಿಯಲ್ಲಿ ಭೂಲೋಕದ ಎಲ್ಲಾ ಕುಟುಂಬಗಳೂ ಆಶೀರ್ವಾದ ಹೊಂದಿಕೊಳ್ಳುವವು ಮತ್ತು ಅನೇಕರು ಒಗ್ಗೂಡಿ ಕರ್ತನ ಸಂಧಾನಕ್ಕೆ ಬರುವರು. ಈ ರೀತಿಯಾಗಿ ಅವರು ಮಾನವರ ವಿರೋಧಕ್ಕೆ ಅವರ ಪತನ ಪರಿಸ್ಥಿತಿ ಹಾಗೂ ದ್ರೋಹದ ದೆಸೆಯಿಂದ ಅವರ ಮೇಲೆ ಎರಗಿ ಬಂದಿರುವದು; ದೇವರ ಮತ್ತು ನೈತಿಕತೆಯ ಮಹಾ ವಿರೋಧಿಯ ತಪ್ಪು ದೋಷಗಳು ಮತ್ತು ಕುರುಡುತನಗಳೇ ಕಾರಣವೆಂದು ಅವರು ಗ್ರಹಿಸಿದಾಗ. ಕರ್ತನ ಜನರಿಗೆ ಲೋಕದ ಬಗ್ಗೆ ಮಾತ್ರವಲ್ಲ ಅವರ ವಿರೋಧಿಗಳು ಮತ್ತು ಅವರನ್ನು ಹಿಂಸಿಸುವವರ ಬಗ್ಗೆಯೂ ಬಹಳಷ್ಟು ಅನುಕಂಪ ಹುಟ್ಟುತ್ತದೆ. ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ಈ ವರೆಗೆ ಆಲೋಚಿಸುತ್ತಿದ್ದವರು ಈಗ ಅವರನ್ನು ಯಥಾರ್ಥವಾಗಿ ಪ್ರೀತಿಸತೊಡಗುತ್ತಾರೆ. ಅದೇ ಸಮಯದಲ್ಲಿ– "ಅವರು ಏನುಮಾಡುತ್ತಾರೆಂಬುದನ್ನು ಅರಿಯರು" (ಲೂಕ 23:34) ಎಂಬ ಕರ್ತನ ಮಾತುಗಳ ಪೂರ್ಣವಾದ ಮತ್ತು ನಿಜವಾದ ಅರ್ಥವನ್ನು ಗ್ರಹಿಸಿಕೊಳ್ಳುತ್ತಾರೆ.

ಪ್ರಾಯಶ್ಚಿತ್ತ ಸಂಧಾನದ ವಿರೋಧಿಗಳಲ್ಲಿ ಅನೇಕರು ತಮ್ಮ ವಿವಿಧ ಮಾರ್ಗಗಳಿಂದ ಮತ್ತು ವಿವಿಧ ಉದ್ದೇಶಗಳಿಂದ ದೇವರ ವಿರುದ್ಧವಾಗಿ ಮತ್ತು ಪ್ರಾಯಶ್ಚಿತ್ತ ಸಂಧಾನದ ಕಾರ್ಯಗಳ ವಿರುದ್ಧವಾಗಿ ಮಹಾ ವಿರೋಧಿಯೊಂದಿಗೆ ಸಹಕರಿಸುವುದನ್ನು ನಾವು ನೋಡುತ್ತೇವೆ. ಇವರಲ್ಲಿ ಮೊದಲಿಗರ ಬಗ್ಗೆ ನಾವು ಹೇಳುವುದಾದರೆ, ವೇಶ್ಯಾಗೃಹ, ನೃತ್ಯಗೃಹ, ಜೂಜಿನ ಅಡ್ಡೆ

ಮುಂತಾದವುಗಳನ್ನು ನಡೆಸುವವರು, ವಿಗ್ರಹಾರಾಧಕರು, ಮಧ್ಯಸ್ಥಿಕರು, ಮಂತ್ರವಾದಿಗಳು ಮತ್ತು ಪೂಜಾರಿಗಳು ಇವರುಗಳೇ ಹೆಚ್ಚಿನವರೆಂದು ಹೇಳಬಹುದು. ಆದರೆ ನಾವು ತೆಗೆದುಕೊಳ್ಳಲು ಪ್ರಯಾಸಪಡುತ್ತಿರುವ ದೇವರ ದೃಷ್ಟಿಕೋನದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಕಂಡುಬರುತ್ತದೆ–ನಾಗರೀಕ ದೇಶಗಳಲ್ಲಿ ವಿಚಾರವಂತ ನಾಯಕರುಗಳು ಎನಿಸಿಕೊಳ್ಳುವವರು ಮತ್ತು ಸತ್ಯ ಪ್ರಕಾಶದ ಹೆಸರಿಗೆ ಮಾತ್ರದ ಸೇವಕರಾಗಿದ್ದು ನಿಜವಾಗಿ ಅದನ್ನು ವಿರೋಧಿಸುವವರು ದೇವರ ದೃಷ್ಟಿಯಲ್ಲಿ ದೊಡ್ಡ ಜವಾಬ್ದಾರಿ ಹೊಂದಿದ್ದು ತಮಗೆ ತಿಳಿಯದಂತೆ ಸೈತಾನನ ಈ ಲೋಕದ ಸಾಧನವಾಗಿದ್ದಾರೆ –"ನೀವು ಈ ಕಾರ್ಯವನ್ನು ತಿಳಿಯದೆ ಮಾಡಿದರೆಂದು ಬಲ್ಲೆನು; ನಿಮ್ಮ ಅಧಿಕಾರಿಗಳೂ ತಿಳಿಯದೇ ಮಾಡಿದರು" (ಅಪೋಸ್ತಲರ ಕೃತ್ಯಗಳು 3:17).

ಸುವಾರ್ತಾಯುಗದ ಕಾಲವೆಲ್ಲಾ ಸತ್ಯ ಪ್ರಕಾಶದ ಸಂಪರ್ಕದಲ್ಲಿದ್ದ ಮತ್ತು ಈ ಯುಗಾಂತ್ಯಕಾಲದಲ್ಲಿರುವ ಅನೇಕರ ಬಗ್ಗೆ ನಮ್ಮ ನಿರೀಕ್ಷೆಯೇನೆಂದರೆ, ಅದಕ್ಕೆ ಅವರ ವಿರೋಧವು, ಕ್ರಿಸ್ತನನ್ನು ಶಿಲುಬೆ ಹಾಕಿದವರ ಬಗ್ಗೆ ಅಪೋಸ್ತಲನು ಪ್ರಕಟಿಸಿ ಹೇಳುವಂತೆ–"ನೀವು ಈ ಕಾರ್ಯವನ್ನು ತಿಳಿಯದೆ ಮಾಡಿದರೆಂದು ಬಲ್ಲೆನು; ನಿಮ್ಮ ಅಧಿಕಾರಿಗಳೂ ತಿಳಿಯದೇ ಮಾಡಿದರು" (ಅ.ಕೃ.3:17) ಎಂಬ ಮಾತುಗಳಿಗೆ ಅನುಸಾರವಾಗಿ ಕಡೇ ಪಕ್ಷ ಭಾಗಶಃ ಕುರುಡುತನದ್ದಾಗಿದೆ. ಈ ದೃಷ್ಟಿಕೋನದಿಂದ ನಾವು ಸತ್ಯದ ಉಗ್ರ ವಿರೋಧಿಗಳಲ್ಲಿ ಕೆಲವರ ಬಗ್ಗೆ–ಅಂದರೆ Evolutionists, Theosophists, Spirutalists, Christian Scientists, Romanists and Protestants ಇವರುಗಳ ಬಗ್ಗೆ ಸ್ವಲ್ಪ ಮಟ್ಟಿನ ನಿರೀಕ್ಷೆಯನ್ನು ಇಡಬಹುದಾಗಿದೆ. ಪ್ರಸ್ತುತವಾದ ಈ ಸತ್ಯದಿಂದ ಜ್ಞಾನೋದಯಗೊಂಡಿದ್ದರೂ ತಾವು ಏನೋ ಆಗಬೇಕೆಂಬ ಆಕಾಂಕ್ಷೆ, ಆದರೆ ತಮ್ಮ ಈ ಅಭಿಲಾಷೆಯಲ್ಲಿ ತೋರಿಬರುವ ಮತ್ಸರ ಮತ್ತು ಹೆಮ್ಮೆಯ ಕಾರಣ ದೇವರ ಕಾರ್ಯಗಳಿಗೆ ವಿರೋಧಿಯಾಗಿರುವವರ ಭವಿಷ್ಯದ ಬಗ್ಗೆ ನಮ್ಮ ನಿರೀಕ್ಷೆಯು ಅಗತ್ಯವಾಗಿ ಬಹಳ ಕಡಿಮೆಯದಾಗಿರುತ್ತದೆ. ಅಂಥವರು 'ಏಕತ್ವತಾವಾದ'(Universalism)ಎಂಬ ತಪ್ಪಿಗೆ ಸಾಮಾನ್ಯವಾಗಿ ಬಿದ್ದುಹೋಗುತ್ತಾರೆ ಮತ್ತು ಕರ್ತನ ಪ್ರಸನ್ನತೆಯ ಬಗ್ಗೆ, ಆತನ ಈಡುಬಲಿಯ ಬಗ್ಗೆಯೂ ಅಂಧರಾಗಿ ಬಿಡುತ್ತಾರೆ. ಇವರ ಬಗ್ಗೆ ತೀರ್ಪುನೀಡುವುದು ನಮ್ಮ ಕೆಲಸವಲ್ಲ, ಆದಾಗ್ಯೂ ಅವರ ಪರವಾಗಿ ಅಂಜಿಕೊಂಡು, ಅವರ ಪ್ರಕರಣದಲ್ಲಿ – "ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವವನ್ನು ಹೊಂದಿ, ಪವಿತ್ರಾತ್ಮನ ವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರುಗಿ ಮಾನಸಾಂತರವನ್ನು ಹುಟ್ಟಿಸುವುದು ಅಸಾಧ್ಯ. ಯಾಕೆಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ ಆತನನ್ನು ಎಲ್ಲರ ಮುಂದೆ ಅವಮಾನ ಪಡಿಸುವವರೂ ಆಗಿದ್ದಾರೆ", (ಇಬ್ರಿಯ 6:4–6) ಅವರಿಗೆ ಅನ್ವಯಿಸುವಂತಹ ಈ ದೇವರ ವಾಕ್ಯವನ್ನು ಗಮನಿಸಬೇಕು. ಈ ವಾಕ್ಯಗಳನ್ನು ನೆರವೇರಿಸುವುದು ಮತ್ತು ಅಂಥಹ ಫಲವಿಲ್ಲದ ಅಂಧಕಾರದ ಕಾರ್ಯಗಳೊಡನೆ ಕೈಜೋಡಿಸದಿರುವುದು ಬದಲಾಗಿ ಅದನ್ನು ಆಕ್ಷೇಪಿಸುವುದು ಮತ್ತು ಅಪೋಸ್ತಲನ ಬೋಧನೆಗಳಿಗೆ ಅನುಸಾರವಾಗಿ ನಡೆಯದವರಿಂದ, ಸಂತರುಗಳಿಗೆ ಒಮ್ಮೆ ದೊರೆತ ನಂಬಿಕೆಯನ್ನು ಅಥವಾ ಅದರ ಉತ್ಸಾಹವನ್ನಾದರೂ ಕಾಪಾಡಿಕೊಳ್ಳಲಾಗದವರಿಂದ ದೂರ ಸರಿಯುವದೇ ನಮ್ಮ ಕೆಲಸವಾಗಿದೆ. ಯಾಕೆಂದರೆ ಅಂಥವರೆಲ್ಲರೂ ಸೈತಾನನ ಕಡೆಯವರಾಗಿದ್ದಾರೆ ಮತ್ತು ಅವರು ದೇವರ ಮತ್ತು ಆತನ ಪ್ರಾಯಶ್ಚಿತ್ತ ಸಂಧಾನ ಮತ್ತು ಈಡುಬಲಿ ಇವುಗಳು ಕೇಂದ್ರ ಬಿಂದುವಾಗಿರುವ ಆತನ ಯೋಜನೆಗಳಿಗೆ ವಿರುದ್ಧವಾಗಿದ್ದಾರೆ (2 ಪೇತ್ರ 2:21, 2 ಥೆಸ. 3:6 ಮತ್ತು ಯೂದ : 3 )

ಎಲ್ಲಾ ಕಡೆಯಿಂದ ಸುತ್ತಿಕೊಳ್ಳುವ ಪಾಪದ ಬಗ್ಗೆ ಈ ಪ್ರಸ್ತಾಪವನ್ನು ಪರಿಗಣಿಸುವಾಗ, ಅಡವಿಯಲ್ಲಿ ನಮ್ಮ ಕರ್ತನಿಗುಂಟಾದ ಶೋಧನೆಗಳು* (Vol. 5, page 110) ನಮಗೆ ನೂತನ ಸೃಷ್ಟಿಗಳು ಒಳಗಾಗಬಹುದಾದ ಎಲ್ಲಾ ಶೋಧನೆಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

## ವಿರೋಧಿಯ ಆಕ್ರಮಣಗಳು

### Besetments of the Adversary

ದೇಹದ ಹಂಬಲಗಳೊಂದಿಗೆ ಏಕರೂಪತೆ ತಾಳುವಂತೆ ಕಂಡುಬರುವ ವಿರೋಧಿಯ ಒಂದು ಆಕ್ರಮಣವೆಂದರೆ, ನೂತನ ಸೃಷ್ಟಿಗಳ ಎಲ್ಲಾ ಲೌಕಿಕ ಹಿತಾಸಕ್ತಿಗಳು ಕೈಗೂಡುವಂತೆ ಅವುಗಳು ದೈವರಕ್ಷಣೆಯ ಅಡಿಯಲ್ಲಿ ಇರತಕ್ಕದ್ದು ಎಂಬುವ ವಾದ. ಹೇಗೂ ಇದು ಸ್ವಾಭಾವಿಕ ಮಾನವನ ತರ್ಕವಾಗಿದ್ದು ಇದಕ್ಕೆ ನೂತನ ಸೃಷ್ಟಿಯ ತೀರ್ಮಾನಕ್ಕೆ ಮಾರ್ಗದರ್ಶಿಯಾಗ ಬಹುದಾದ ಯಾವುದೇ ದೇವರ ವಾಕ್ಯದ ಬೆಂಬಲವೂ ತೋರಿಬರುವುದಿಲ್ಲ. ಪ್ರಾಕೃತ ಮನುಷ್ಯನ "ಅಂಗೀಕಾರ"ದ ನಿಕಟಸಂಬಂಧ ಮತ್ತು ಜೊತೆ– ಬಾಧ್ಯಸ್ಥಿಕೆಯೆಂಬ ಭವಿಷ್ಯದಲ್ಲಿನ ವಾಗ್ದಾನವು ಲೌಕಿಕ ಸಂಗತಿಗಳ ಬಗ್ಗೆ ಇರುವ ಎಲ್ಲಾ ಆಶೀರ್ವಾದಗಳನ್ನು, ರಕ್ಷಣೆ ಮತ್ತು ಕೃಪೆ ಇವುಗಳನ್ನು ಸಹ ತನ್ನೊಂದಿಗೆ ಹೊತ್ತು ಸಾಗಬೇಕೆಂದು ಆಗ್ರಹಪಡಿಸುತ್ತಾನೆ. ಮುಖ್ಯವಾದ ವಾದವಿರುವುದು ಆರೋಗ್ಯದ ಬಗ್ಗೆ. ಪ್ರತಿಷ್ಠೆಗೊಂಡ ನಮ್ಮ ಮರ್ತ್ಯಶರೀರವು ಯಾಕೆ ಕಾಯಿಲೆಗೊಳಗಾಗಬೇಕು ಅಥವಾ ನೋವನ್ನು ಏಕೆ ಅನುಭವಿಸಬೇಕು? ದೇವರು ಖಂಡಿತವಾಗಿಯೂ ಯಾವುದೇ ಬಾಧೆ ಅಥವಾ ನೋವನ್ನು ಕಳುಹಿಸಿಕೊಡುವುದಿಲ್ಲ; ಅದುದರಿಂದ ಅದು ಪಿಶಾಚನ ಕಾರ್ಯವೇ ಇರಬೇಕು. ಇವುಗಳಲ್ಲಿ ಇರುವ ವಾದಗಳು ವಿರೋಧಿಯದಾಗಿದ್ದರೆ, ಇವುಗಳಿಗೆ ಲಕ್ಷ್ಯನೀಡುವುದು ಮತ್ತು ಅವುಗಳಿಂದ ಬಿಡುಗಡೆ ಹೊಂದಿಕೊಳ್ಳುವಂತೆ ಪ್ರಾರ್ಥಿಸುವುದು ದೈವಿಕ ಅನಾದರಣೆಯಾಗುವುದಿಲ್ಲವೆ?

ತನ್ನ ವಿವಿಧ ವಾಹಿನಿಗಳ ಮೂಲಕ ವಿರೋಧಿಯು ಇಂಥಹ ಪ್ರಶ್ನೆಗಳನ್ನು ಈ ದಿನಗಳಲ್ಲಿ ಹೆಚ್ಚಿನ ಛಲದೊಂದಿಗೆ ಸಲಹೆ ಮಾಡುವವನಾಗಿದ್ದಾನೆ; ಮತ್ತು ಇದು ಆತನ ಚಿತಾವಣೆ ಎಂದು ಅನೇಕರಿಗೆ ತಿಳಿಯದ ಹಾಗೆ ಕೆಲವೊಂದು ದೃಢ ಸೂಚಕವಾದ ಉತ್ತರಗಳನ್ನು ಸಲಹೆ ಮಾಡುತ್ತಾನೆ.–ದೇವಜನರ ದೇಹದಲ್ಲಿ ಕಂಡುಬರುವ ಕಾಯಿಲೆಗಳು ದೇವರಅವಕೃಪೆಯ ಗುರುತಾಗಿದೆ; ಇದಕ್ಕೆ ಪರಿಹಾರವನ್ನು ಕಂಡುಕೊಳ್ಳದಿರುವುದು

ನಂಬಿಕೆಯ ಕೊರತೆ ಎನಿಸುತ್ತದೆ; ಬದಲಾಗಿ ವಿಶ್ವಾಸದ ಪ್ರಾರ್ಥನೆಯ ಮೇಲೆ ಆತುಕೊಳ್ಳಬೇಕು; ಸ್ವಾಭಾವಿಕ ಇಸ್ರಾಯೇಲ್ಯರು ಸಹಾ ಇಂತಹ ಸೌಕರ್ಯಗಳನ್ನು ಹೊಂದಿದ್ದರು ಮತ್ತು ಅದನ್ನು ಕಾರ್ಯಗತಗೊಳಿಸಿದರು. ಇದಕ್ಕಿಂತ ಹೆಚ್ಚಾಗಿ ಆತ್ಮಿಕ ಇಸ್ರಾಯೇಲ್ಯರು ದೇವರ ಮೇಲೆ ಆತನೇ ನಮ್ಮನ್ನು ಗುಣಪಡಿಸುವಾತನು ಎಂದು ಆತುಕೊಳ್ಳಬೇಕು. ಮಾರ್ಮನ್ಸ್(Mormons)ಎಂಬ ಧಾರ್ಮಿಕಪಂಗಡದವರು, ಕ್ರೈಸ್ತವಿಜ್ಞಾನಿಗಳು, ಕ್ರೈಸ್ತ ಮತಾವಲಂಬಿಗಳು (alliancists), ಮತ್ತು Dowieties ಗಳು ಇಂದಿಗೂ ಹೆಚ್ಚಾಗಿ ಹೇಳುವ ರೀತಿಯಲ್ಲಿ "ಸಾಧ್ಯವಾದರೆ, ಆಯ್ದುಕೊಂಡವರನ್ನು" ತಪ್ಪು ಹಾದಿಗೆ ಎಳೆದು ಅವರ ಗಮನವನ್ನು ಸತ್ಯದಿಂದ ದೂರ ಸೆಳೆಯುವ ಪ್ರಯತ್ನದಲ್ಲಿ ಇಂತಹ ವಾದಗಳನ್ನು ಮಾಡುತ್ತಾ ಇರುತ್ತಾರೆ. *Vol V p 120

ನೂತನ ಸೃಷ್ಟಿಗಳ ನಿಜವಾದ ಆಸಕ್ತಿಗಳು ಮತ್ತು ಅವರ ದೈಹಿಕ ಪರಿಸ್ಥಿತಿ ಮತ್ತು ಹಿತಾಸಕ್ತಿಗಳು ಪರಸ್ಪರ ವಿರೋಧವಾಗಿರುವುದು ಸತ್ಯ. ಪ್ರವಾದಿಯಾದ ದಾವೀದನು ಈ ಬಗ್ಗೆ ಮಾತನಾಡುತ್ತಾ – "ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿಹೋಗುತ್ತಿದ್ದೆನು" (ಕೀರ್ತನೆ 119:67) ಎಂದಿದ್ದಾನೆ. ನೂತನ ಸೃಷ್ಟಿಗಳು – ಅವರ ಮರ್ತ್ಯ ಶರೀರಗಳಲ್ಲ – ದೇವರು ಪಡಕೊಂಡ ಮಕ್ಕಳಾಗಿದ್ದಾರೆ–ನಿಜವಾಗಿಯೂ, ನಾವೀಗಾಗಲೇ ಕಂಡುಕೊಂಡಿರುವಂತೆ ದೇವರು ನಮ್ಮ ಪಡೆದುಕೊಳ್ಳುವಿಕೆಯ ಪೂರ್ವ ನಿದರ್ಶನದ ಶರತ್ತಿನಂತೆ ತನ್ನ ಶರೀರ ಯಜ್ಞವನ್ನು (ಅದು ನೀತಿನಿರ್ಣಯಿಸಲ್ಪಟ್ಟ ಮೇಲೂ) ಮಾಡಿದನು. ಶಾರೀರಿಕ ಇಸ್ರಾಯೇಲ್ಯರ ಬಗ್ಗೆ ಹಾಗಾಗಲಿಲ್ಲ. ಅವರ ಭೌತಿಕ ಕೃಪೆ ಮತ್ತು ಲೌಕಿಕ ಆಶೀರ್ವಾದ ಮುಂತಾದವುಗಳು ಸಹಸ್ರವರ್ಷಗಳ (ಮಿಲೇನಿಯಂ) ಯುಗದ ಕಾಲದಲ್ಲಿ ಜಾರಿಯಲ್ಲಿರುವ ಶರತ್ತು ಮತ್ತು ನಿಭಂಧನೆಗಳಿಗೆ ಪ್ರತಿರೂಪವಾಗಿವೆ. ಆಗ ಪ್ರತಿರೂಪವಾದ ರಾಜನಿಂದ ಮತ್ತು ರಾಜ್ಯವು ನಿಯಂತ್ರಿಸಲ್ಪಡುತ್ತದೆ. (ವಿಮೋ. 15:26, ಯಾಜಕ 26:3–15, ಧರ್ಮೋ. 28:1–14)

ಇದಕ್ಕೆ ವ್ಯತಿರಿಕ್ತವಾಗಿ, ನೂತನ ಸೃಷ್ಟಿಗಳ ಪರೀಕ್ಷೆಯ ಅಂಶದ ಮುಖ್ಯ ಭಾಗವಾಗಿ, ಲೌಕಿಕ ವಿಷಯಗಳಲ್ಲಿ ಅವರು "ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯಬೇಕು". ಹೌದು, ಇದಕ್ಕಿಂತಲೂ ಹೆಚ್ಚಾಗಿ – ಹಿಂಸೆಯನ್ನು ಅನುಭವಿಸಬೇಕು, ಸ್ವಾರ್ಥ ತ್ಯಾಗವನ್ನು ಅಭ್ಯಾಸಿಸಬೇಕು, ಮೋಸಗಾರರೆನಿಸಿಕೊಂಡರೂ ಸತ್ಯವಂತರೂ; ಏನೂ ಇಲ್ಲದವರಾಗಿದ್ದರೂ ಎಲ್ಲಾ ಇದ್ದವರಾಗಿದ್ದೇವೆ. ದೇವರ ಬಗ್ಗೆ ಬುದ್ಧಿವಂತರಾಗಿದ್ದರೂ, ಬುದ್ಧಿಯಿಲ್ಲದವರಂತೆ ಇರಬೇಕು. ಸಾಧ್ಯವಾದ ಮಟ್ಟಿಗೆ ಒಡೆಯನ ಪ್ರವಾದನಾ ವಿವರಣೆಗಳಿಗೆ ತಕ್ಕಂತೆ ಆತನ ಹೆಜ್ಜೆಜಾಡಿನಲ್ಲಿ ನಿಕಟವಾಗಿ ನಡೆಯುವವರೆಲ್ಲರಿಗೆ ಹೆಚ್ಚಿನ ರೀತಿಯಲ್ಲಿ ಅನ್ವಯಿಸಬೇಕು –"ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು" (ಯೆಶಾಯ 53:4). ಪ್ರವಾದಿಯು ಪ್ರಕಟಿಸುವುದೇನೆಂದರೆ – "ನಮಗೆ ಸುಶಾಂತಿಯನ್ನೀಯುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು' (ಯೆಶಾಯ 53:5). ನಮ್ಮ ಗುಣಹೊಂದಿಕೊಳ್ಳುವಿಕೆ ಅಥವಾ ನೀತಿನಿರ್ಣಯ ಇವುಗಳು ನಾವು ಕ್ರಿಸ್ತನ ದೇಹದ – ನೂತನ ಸೃಷ್ಟಿಯ ಅಂಗಗಳೆಂದು ಅಂಗೀಕಾರವನ್ನು ಹಿಂಬಾಲಿಸಿದ ನಂತರವೇ ಬರುವುದು ಎಂಬುದನ್ನು ನಾವು ಮರೆಯಬಾರದು. ಆತನ ಮಕ್ಕಳಾಗುವ ಮತ್ತು ಆತನೊಂದಿಗೆ ಜೊತೆ ಬಾಧ್ಯಸ್ಥರಾಗುವ ಈ ಮಹಾ ಪದವಿಗೆ ಅಂಗೀಕಾರವಾಗುವುದು ಇವುಗಳು ಒಂದು ವಿಶೇಷವಾದ ಶರತ್ತಿನ ಮೇಲೆ ಅಂದರೆ "ನಾವು ಆತನೊಂದಿಗೆ ಬಾಧೆಗಳನ್ನನುಭವಿಸುವೆವು" ಎಂಬುದರ ಮೇಲೆ ಆತು ಕೊಂಡಿದೆ. – "ಮಕ್ಕಳಾಗಿದ್ದರೆ ಭಾಧ್ಯರಾಗಿದ್ದೇವೆ, ದೇವರಿಗೆ ಭಾಧ್ಯರು, ಕ್ರಿಸ್ತನೊಂದಿಗೆ ಭಾಧ್ಯರು. ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" (ರೋಮಾ. 8:17, ಯೆಶಾಯ 53:4 ಮತ್ತು ಕೊಲೊಸ್ಸೆ 1:24).

ನಿಜವಾಗಿಯೂ, ನಮ್ಮ ಕರ್ತನಿಗೆ ತನ್ನದೇ ಆದ ಯಾವ ಕಾಯಿಲೆಗಳೂ ಇದ್ದಿಲ್ಲ, ಯಾಕೆಂದರೆ ಆತನು ಪರಿಪೂರ್ಣನು. ಪರಂತು, "ನಮ್ಮ ಬೇನೆಗಳನ್ನು ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು" (ಮತ್ತಾಯ 8:17) ಹಾಗೂ ನಮ್ಮ ಬಲಹೀನತೆ ಆತನಲ್ಲಿ ಪ್ರವೇಶಿಸುತಿತ್ತು "ಮತ್ತು ಆತನಿಂದ ಶಕ್ತಿ ಹೊರಟು ಎಲ್ಲರನ್ನು ವಾಸಿಮಾಡುತ್ತಿದ್ದದರಿಂದ ಆ ಗುಂಪಿನ ಜನರೆಲ್ಲಾ ಆತನನ್ನು ಮುಟ್ಟುವುದಕ್ಕೆ ಪ್ರಯತ್ನ ಮಾಡಿದರು" (ಲೂಕ 6:19) ಎಂದು ಬರೆದದೆ. (ಇಬ್ರಿಯ 4:15)

ಕೆಳವರ್ಗದ ಯಾಜಕರುಗಳಾದ ನಾವು ಸಹಾ "ಮನಕರಗು'ವವರಾಗಿದ್ದು ಪ್ರಪಂಚದೊಡನೆ ಸಹಾನುಭೂತಿ ಗೊಳ್ಳಬೇಕು. ಯಾಕೆಂದರೆ, ನಾವು ಸಧ್ಯದಲ್ಲಿಯೇ ಈ ಲೋಕದ ರಾಜರುಗಳು, ಯಾಜಕರುಗಳು ಮತ್ತು ನ್ಯಾಯಾಧಿಪತಿಗಳು ಆಗಲಿದ್ದೇವೆ. ಆದರೆ, ನಮಗೆ ನಮ್ಮ ದೈಹಿಕ ಶಕ್ತಿಯನ್ನು ಹೆಚ್ಚಿನ ಮಟ್ಟಿಗೆ ನೀಡಲು, ಅವರ ಬಲಹೀನತೆಗಳನ್ನು, ರೋಗಗಳನ್ನು ನಮ್ಮ ಮೇಲೆ ತೆಗೆದುಕೊಳ್ಳಲು ಸಾಧ್ಯವಾಗದು – ಬೀಳುವಿಕೆಯಲ್ಲಿ ನಾವು ಪಾಲುತೆಗೆದುಕೊಂಡಿರುವ ಕಾರಣ ಹೇಗೂ ನಮ್ಮಲ್ಲಿ ಪ್ರತಿಯೊಬ್ಬರಿಗೆ ಈ ರೀತಿಯ ಅನುಭವ ಆಗಲಿದೆ; ನಮ್ಮ ದೇಹದ ಪ್ರಕಾರ ನಾವೂ ಇತರರಂತೆ ಪಾಪಾತ್ಮರಾಗಿದ್ದೇವೆ ಮತ್ತು ವೇದನೆಗಳಲ್ಲಿ ನರಳುವ ಇತರ ಸೃಷ್ಟಿಯೊಂದಿಗೆ ನಾವೂ ಸಹ ಭಾಗಿಗಳಾಗಿದ್ದೇವೆ. ನಮ್ಮ ಕರ್ತನು ತನ್ನ ಪ್ರಾಣಶಕ್ತಿಯನ್ನು ವ್ಯಯಮಾಡಿದ್ದು ಸಭೆಯ ಪರವಾಗಿ ಅಲ್ಲ; ಯಾಕೆಂದರೆ, ಆತನ ತ್ಯಾಗವು ಪೂರ್ಣವಾಗಿ ಅದನ್ನು ತನ್ನ ತಂದೆಗೆ ಆತನು ಅರ್ಪಿಸದ ಮತ್ತು ತಂದೆಯು ಅದನ್ನು ನಮ್ಮ ಪರವಾಗಿ ಅಂಗೀಕಾರವಾಡದ ಹೊರತು – ಪಂಚಾಶತ್ತಮದವರೆಗೆ ಸಭೆಯನ್ನು ಪರಿಗಣಿಸಿದ್ದಿಲ್ಲ. ಆತನ ಅನುಯಾಯಿಗಳ ಮೇಲೆ ಪವಿತ್ರಾತ್ಮನು ಇಳಿದು ಬರುವವರೆಗೆ, ಅವರಿಗೆ ಪರಲೋಕದ ಸಂಗತಿಗಳ ಬಗ್ಗೆ ಸಾರಿ ಹೇಳುವುದು ವ್ಯರ್ಥವಾಗಿತ್ತು (ಯೋಹಾನ 3:12, 16:13, 1 ಕೊರಿ. 2:10–12). ಈ ಕಾರಣದಿಂದ ಸಾಮ್ಯಗಳನ್ನು ಹೇಳುವುದರಲ್ಲಿಯೂ ಮತ್ತು ಪವಿತ್ರಾತ್ಮನ ಸಹಾಯದಿಂದ ನಂತರದಲ್ಲಿ ಅರ್ಥಮಾಡಿಕೊಳ್ಳಬಹುದಾದ ಗೂಢವಾದ ಹೇಳಿಕೆಗಳಲ್ಲಿಯೂ ನಮ್ಮ ಕರ್ತನ ಚೈತನ್ಯವು ವ್ಯಯವಾಯಿತು. ಆದರೆ ಮುಖ್ಯವಾಗಿ ದೈಹಿಕ ಕೊರತೆಗಳ ಗುಣಪಡಿಸುವಿಕೆಯಲ್ಲಿ ನಾವು ಈಗಲೂ, ಮುಂದೆ ಆತನ ರಾಜ್ಯದಲ್ಲಿಯೂ ಭಾಗವಹಿಸಲಿರುವ ಇನ್ನೂ

ಹೆಚ್ಚಾದ ಕಾರ್ಯಗಳ ಮತ್ತು ಭವ್ಯವಾದ ಗುಣಪಡಿಸುವಿಕೆಯ ಚಿತ್ರರೂಪವನ್ನು ನಮಗೆ ತೋರಿಸಿ ನಮ್ಮ ತಿಳುವಳಿಕೆಯ ಕಣ್ಣುಗಳನ್ನು ತೆರೆಯಮಾಡಿದನು; ಮತ್ತು ನೈತಿಕವಾಗಿ ಮರಣಹೊಂದಿದವರು ಕರ್ತನ ಮಾತುಗಳನ್ನು ಕೇಳುವಂತೆಯೂ ಮತ್ತು ಈಗಲೂ ನೂತನ ಜೀವಿತದಲ್ಲಿ ಜೀವಿಸಲು ಸಾಧ್ಯವಾಗುವಂತೆ ಮಾಡಿದನು. ಈ ರೀತಿಯಲ್ಲಿ ಅಪೋಸ್ತಲನು **"ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ"** "ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರುತ್ತೇನೆ." (1 ಯೋಹಾನ 3:16 – ಕೊಲೊಸ್ಸೆ 1:24 ) ಎಂದಿದ್ದಾನೆ.

ನಮ್ಮ ಸಹೋದರರಿಗಾಗಿ ಪ್ರಾಣ ಅರ್ಪಿಸುವುದರಿಂದ ನಮ್ಮ ದೈಹಿಕ ಚೈತನ್ಯವನ್ನು ತ್ಯಾಗ ಮಾಡಿದಂತಾಗುವುದಿಲ್ಲ ಎಂಬ ಈ ವಾಕ್ಯಗಳ ನೈಜವಾದ ಅರ್ಥವಲ್ಲ. ಕ್ರಿಸ್ತನ ವೇದನೆಗಳು ಯಾವುದೇ ದೈಹಿಕ ನೋವನ್ನುಂಟುಮಾಡುವುದಿಲ್ಲ ಎಂದು ಹೇಳಿಕೊಂಡು ಮೇಲಿನ ಮಾತುಗಳ ನಿಜವಾದ ಅರ್ಥವನ್ನು ಕಸಿದುಕೊಳ್ಳಲಾಗದು. ನಮ್ಮ ಕರ್ತನ ಶ್ರಮ ಮತ್ತು ಆತನ ಸದ್ಗುಣಗಳಿಂದ ಕೂಡಿದ ಪ್ರಾಣ ಶಕ್ತಿಯ ನಷ್ಟವು ಮತ್ತು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ ಎಂಬ ಆಲೋಚನೆಗಳಿಗೆ ವಿರುದ್ಧವಾಗಿದೆ. ಅದುದರಿಂದ ನಾವು ನಮ್ಮ ಐಹಿಕ ಹಿತಾಸಕ್ತಿಗಳಲ್ಲಿ ಈ ಲೋಕದವರಿಗಿಂತ ಉತ್ತಮವಾಗಿದ್ದೇವೆ ಎಂದು ನಿರೀಕ್ಷಿಸದೆ ಅದರಿಂದಾಗುವ ನಷ್ಟವನ್ನು "ಆತನ ಶ್ರಮೆ"ಗಳಲ್ಲಿ ಅನುಭವಿಸುತ್ತೇವೆ, ಎಂದು ನಿರೀಕ್ಷಿಸಬೇಕು. ಅಂಥಹ ನಷ್ಟಗಳು ಜನರಲ್ಲಿ ಗೌರವ ತೋರುವಲ್ಲಿ ಮತ್ತು ಆರ್ಥಿಕ ಏಳಿಗೆಯಲ್ಲಿ ಮುಕ್ತವಾಗಿ ಅಂಗೀಕರಿಸಲ್ಪಡುತ್ತವೆ– ನಮ್ಮ ಕರ್ತನು ಈ ಪ್ರಖ್ಯಾತಿಯನ್ನು ಬಯಸದೆ, ಇತರರನ್ನು ಶ್ರೀಮಂತರಾಗಿಸಲು ತಾನು ಇಚ್ಛಾಪೂರ್ವಕಾಗಿ ಬಡವನಾದನು. ಅಪೋಸ್ತಲರುಗಳಿಗೂ ಇದೇ ಅನುಭವಾವಾಗಿ ಅವರು ನಮಗೂ ಇದನ್ನೇ ಮಾದರಿಯಾಗಿಟ್ಟಿದ್ದಾರೆ. ಹಾಗಾದರೆ, ಯಾಕೆ ಎಲ್ಲರೂ ತಿಮೋಥೆಯನ ಹಲವಾರು "ದೌರ್ಬಲ್ಯಗಳನ್ನು", ಪೌಲನ ಶರೀರದಲ್ಲಿ ನಾಟಿರುವ ಶೂಲ, "Epaphroditus' ನ ಇವೇ ಮುಂತಾದ "ಕಾಯಿಲೆಗಳೆಲ್ಲವೂ" ಕರ್ತನಲ್ಲಿ ನಿಷ್ಠೆಯುಳ್ಳವರಿಗೆ ಅನುಮತಿಸಿರುವದಾಗಿ ಪರಿಗಣಿಸುವುದಿಲ್ಲ? ನಿಜವಾಗಿಯೂ, ಪಾಪವು ಸೈತಾನನಿಂದ ಪ್ರಾರಂಭವಾಗಿದ್ದು ಈ ಕಾಯಿಲೆಗಳು ಅದರ ಫಲವಾಗಿದೆ ಎಂಬ ಅರ್ಥದಲ್ಲಿ ಇವುಗಳೆಲ್ಲವೂ ಪಿಶಾಚನವು. ಆದರೆ ಅವರುಗಳ ಸೆರೆ, ಬಾಸುಂಡೆಗಳು, ಹಡಗುನಷ್ಟ ಮತ್ತು ಮರಣ ಇವುಗಳು ಸೈತಾನನಿಂದಲ್ಲ.

ಮಾನವರಿಗೆ ಸರ್ವೆಸಾಮಾನ್ಯವಾದ ಈ ಎಲ್ಲಾ ಶಾರೀರಿಕ ಆಪತ್ತುಗಳಿಗೆ ಸೈತಾನನು ಪ್ರತ್ಯಕ್ಷವಾಗಿ ಅಲ್ಲದೆ ಪರೋಕ್ಷವಾಗಿ ಚಿತಾವಣೆಗಾರನಾಗಿದ್ದಾನೆ. ಆದಾಗ್ಯೂ ಅಪೋಸ್ತಲನು ಅಂಥಹ ಅನುಭವಗಳಲ್ಲಿ ತಾನು ದೇವರಿಂದ ಕೈಬಿಟ್ಟವನು ಎಂದು ಪರಿಗಣಿಸುವುದಿಲ್ಲ ಬದಲಾಗಿ ಇವುಗಳು ತಾನು ಕರ್ತನಿಗಾಗಿ, ಸತ್ಯಕ್ಕಾಗಿ ಸಹಿಸಿಕೊಂಡು ದೇವರಿಗೆ ಮಾಡುವಂತೆ ಅನುಮತಿಸಲ್ಪಟ್ಟ ಅರ್ಪಣೆಯ ಭಾಗವಾಗಿದೆ, ಎಂದು ಆತನನ್ನು ಮಹಿಮೆಪಡಿಸುತ್ತಾನೆ. ಇದು ಇತರರಿಗಿಂತ ಹೆಚ್ಚಾದಾಗ ಆತನು ಹೆಚ್ಚು ಸಂತೋಷಿಸುತ್ತಾನೆ ಮತ್ತು ಭವಿಷ್ಯದಲ್ಲಿನ ತನ್ನ ವೈಭವವು ಹೆಚ್ಚಿಸಲ್ಪಡುತ್ತದೆ ಎಂದು ಪರಿಗಣಿಸಿಕೊಳ್ಳುತ್ತಾನೆ.

ಹೀಗಿದ್ದಾಗ್ಯೂ, ನಾವು ನೀತಿಯ ಸಲುವಾಗಿ ಸಂಭವಿಸುವ ಶ್ರಮೆ ಹಾಗೂ ಅಪರಾಧಗಳ ನಿಮಿತ್ತ ಅನುಭವಿಸುವ ಯಾತನೆ ಇವುಗಳ ವ್ಯತ್ಯಾಸ ಕಂಡುಕೊಳ್ಳಬೇಕು. ಇತರರ ಸಂಗತಿಗಳಲ್ಲಿ, ಕೆಟ್ಟಕಾರ್ಯಗಳಲ್ಲಿ ಅನಾವಶ್ಯಕ ತಲೆಹಾಕುವುದರಿಂದ ಹೆಚ್ಚಾದ ಶ್ರಮೆಯನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಅಪೋಸ್ತಲನು ನಮ್ಮ ಗಮನಕ್ಕೆ ತರುತ್ತಾನೆ. ನಾವು ಇದಕ್ಕೆ ಹೊಟ್ಟೆಬಾಕತನವನ್ನು ನಿಶ್ಚಿತಪಡಿಸಬಹುದು–**"ನಾಶನವೇ ಅವರ ಅಂತ್ಯಾವಸ್ಥೆ, ಹೊಟ್ಟೆಯೇ ಅವರ ದೇವರು"** (ಫಿಲಿಪ್ಪಿ 3–19). ಈ ಕೆಡುಕುಗಳಲ್ಲಿ ಸ್ವಯಂನಿಯಂತ್ರಣ ಇಲ್ಲದಿರುವಿಕೆಯು ಅನೇಕ ತಾಪತ್ರಯಗಳನ್ನು ಉಂಟುಮಾಡುತ್ತದೆ, ಇವುಗಳನ್ನು ನೀತಿಯ ನಿಮಿತ್ತ ತಾಳುವ ಶ್ರಮೆಯೆಂದು ಎಣಿಸಬಾರದು. ಇಂತಹ ಯಾತನೆಗಳಲ್ಲಿ ಯಾರೂ ಸಂತೋಷ ಪಡದಿರಲಿ; ಬದಲಾಗಿ ಶೋಕಿಸಲಿ, ಉಪವಾಸವಿದ್ದು ಪ್ರಾರ್ಥಿಸಲಿ – ಸ್ವಯಂ ನಿಯಂತ್ರಣವನ್ನು ಅಭ್ಯಾಸ ಮಾಡಲಿ. ಆದರೆ, ತನ್ನ ಅತ್ಯುತ್ತಮ ನಿರ್ಣಯದಲ್ಲಿ ನೂತನ ಸೃಷ್ಟಿಯು ದೈವಾನುಗ್ರಹದಿಂದ ತನ್ನ ಅವಕಾಶದ ಬಾಗಿಲು ತೆರೆದಿದೆ ಎಂದು ತೋರಿಬಂದಾಗ, ನೂತನ ಸೃಷ್ಟಿಯು ಅದನ್ನು ಶ್ರದ್ಧೆಯಿಂದ ಮತ್ತು ಸ್ವಾರ್ಥತ್ಯಾಗದೊಡನೆ ಪ್ರವೇಶಿಸಿಬೇಕು. ಇದರ ಪರಿಣಾಮ ದೈಹಿಕ ವ್ಯಾಧಿಗಳು ಉಂಟಾಗಬಹುದು. ಇದನ್ನು ಈ ಲೌಕಿಕರು ಅವಿವೇಕದ ಗುರುತೆಂದು ತಿಳಿಯಬಹುದು. ಆದರೆ ಆತನು ಇದಕ್ಕಾಗಿ ನಾಚಿಕೆ ಪಡದೆ, ಅಂಥಹ ಸಂಕಟಗಳಿಗಾಗಿ ದೇವರನ್ನು ಮಹಿಮೆಪಡಿಸಲಿ– ಕ್ರಿಸ್ತನಿಗಾಗಿ "ಶ್ರಮೆಯನ್ನು ಅನುಭವಿಸುವ ಯೋಗ್ಯತೆ" ಯ ಬಾಧ್ಯತೆಯಲ್ಲಿ ಸಂತುಷ್ಟರಾಗಿರಬೇಕು.

ನಿಜವಾಗಿಯೂ ವ್ಯಾಧಿಗಳು ಪಾಪ ಇಲ್ಲವೆ ಸ್ವಾರ್ಥತೆಯ ಕಾರಣವಲ್ಲದೆ ಬೇರೆ ಕಾರಣಗಳಿಂದ ಬರುವುದಾದರೆ ಅದನ್ನು ತಾಳ್ಮೆಯಿಂದಲೂ, ಕೃತಜ್ಞತೆಯಿಂದಲೂ ಸ್ವೀಕರಿಸಬೇಕು ಮತ್ತು ಇದು ಗೋಳಾಡುತ್ತಿರುವ ಸೃಷ್ಟಿಗಳಿಗಾಗಿ ಪಡುವ ಅನುಕಂಪದಿಂದ ದೊರೆಯುವ ಪಾಠ ಮತ್ತು ಸಹಸ್ರ ವರ್ಷದ ಆಳ್ವಿಕೆಯ ಅರುಣೋದಯದಲ್ಲಿ ಈ ಶಾಪ ವಿಮೋಚನೆಯಾಗುತ್ತದೆ ಎಂಬ ನಿರೀಕ್ಷೆ ಮತ್ತು ನಂಬಿಕೆ ಎಂದು ತಿಳಿಯಬೇಕು. ಹೃದಯದಲ್ಲಿ ಉಂಟಾಗುವ ಕೃಪೆಯು ಜೀವನದಲ್ಲಿನ ಎಲ್ಲಾ ಕಾರ್ಯಗಳಲ್ಲಿ ಅನುಕೂಲಕರ ಪ್ರಭಾವವನ್ನು ಬೀರುವುದಾಗಿದೆ; ಆದರೆ ಅವುಗಳು (ಯಾವುದೇ ಚಮತ್ಕಾರ ಮಧ್ಯಸ್ಥಿಕೆ ಇಲ್ಲದೆ) ನಮ್ಮ ಮರ್ತ್ಯ ಶರೀರಗಳನ್ನು ರಂಜಿಸಲಾರದು ಅಥವಾ ದುರಸ್ಥಿಗೊಳಿಸಲಾರದು. ದೇವರು ಅಂತಹ ಚಮತ್ಕಾರಗಳನ್ನು ಸೂಚಿಸುವುದಿಲ್ಲ. ಯಾಕೆಂದರೆ, ಇವುಗಳು ನಮ್ಮನ್ನು ವಿಶ್ವಾಸದ ಮೂಲಕ ನಡೆಗೊಡಿಸದೆ ತಮ್ಮ ದೃಷ್ಟಿಗೆ ತಕ್ಕಂತೆ ನಡೆಯುವ ಮತ್ತು ಸಭೆಯಲ್ಲಿ ದೇವರು ಇಂದು ಬಯಸದ ಒಂದು ವರ್ಗವನ್ನು ಹುಟ್ಟುಹಾಕುವ ಗಂಡಾತರ ಉಂಟು ಮಾಡುವುದಾಗಿದೆ. ನಾವೀಗಾಗಲೆ ಕಂಡುಕೊಂಡಂತೆ ಆತನು ನಂಬಿಕೆಯ ಮೂಲಕ ನಮ್ಮನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ, ಪ್ರತಿಯಾಗಿ–ಎಂದಿನಂತೆ ಅಸಂಪೂರ್ಣರಾಗಿ ಜೀವಿಸುವಾಗಲೂ ಆತನು ನಮ್ಮನ್ನು ಸಂಪೂರ್ಣರನ್ನಾಗಿ ಪರಿಗಣಿಸುತ್ತಾನೆ. ಹೃದಯದಲ್ಲಿನ ಕೃಪೆಯು ನಮ್ಮನ್ನು ಬಿಸಿಲು ಮತ್ತು ಚಳಿಯ ಅಥವಾ ಹಸಿವು ಮತ್ತು ಬಾಯಾರಿಕೆಯ

ಪ್ರಭಾವಗಳನ್ನು ತಡೆಗಟ್ಟಲು ಅಸಾಧ್ಯವಾಗಿರುವಾಗ ಅವನ್ನು ಪರಲೋಕದ ತಂದೆಯ ಮೇಲೆ ವಿಶ್ವಾಸವಿಡುವುದರ ಮೂಲಕ ತಾಳ್ಮೆಯಿಂದ ಸಹಿಸಿಕೊಳ್ಳುವಂತೆ ಮಾಡಬಹುದಾದರೂ ಸಂಪೂರ್ಣವಾಗಿ ಅವುಗಳ ಅರಿವಿರದಂತೆ ಮಾಡಲಾರದು. ಎಲ್ಲಾ ಸಂಗತಿಗಳೂ ಅವನ್ನು ಒಳ್ಳೆಯ ರೀತಿಯಾಗಿ ತಾಳ್ಮೆ ಮತ್ತು ವಿಶ್ವಾಸದಿಂದ ತೆಗೆದುಕೊಳ್ಳುವುದಾದರೆ ಕೊನೆಗೆ ಅವುಗಳು ನಮಗೆ ಒಳಿತನ್ನೇ ಉಂಟು ಮಾಡುತ್ತವೆಂಬ ವಿಶ್ವಾಸ ನಮಗಿರಬೇಕು.

ಈ ಲೋಕದವರು ತಮ್ಮ ಅಸ್ವಸ್ಥತೆಗಳಿಗಾಗಿ ಗಿಡ ಮೂಲಿಕೆಗಳನ್ನು ಹುಡುಕುತ್ತಿರುವಾಗ ನೂತನ ಸೃಷ್ಟಿಗಳು ಇದರಲ್ಲಿ ಯಾವುದನ್ನೂ ಬಯಸದೆ ಅವರು ತಮ್ಮ ವಿಶ್ವಾಸವನ್ನು ತೋರುವುದಕ್ಕಾಗಿ ಎಲ್ಲಾ ನೋವುಗಳನ್ನು ಸಹಿಸಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ಇದು ನೀಡುವುದೇ? ಯಾವ ಕಾರಣವಾಗಿಯೂ ಇಲ್ಲ. ಈ ಸುವಾರ್ತಾ ಯುಗದಲ್ಲಿ ದೇವರು ತನ್ನ ಜನರೊಂದಿಗೆ ಅವರ ದೇಹಕ್ಕೆ ಅನುಸಾರವಾಗಿ ವ್ಯವಹರಿಸುವುದಿಲ್ಲ. ಆದರೆ ನೂತನ ಸೃಷ್ಟಿಗಳಾಗಿ ವ್ಯವಹರಿಸುತ್ತಾನೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಇದು ನಮ್ಮ ಮನಸ್ಸಿನಲ್ಲಿ ಉತ್ತಮ ಪರಿಣಾಮವನ್ನು ಬೀರಬೇಕು. "ಮಾಂಸವು ಯಾವುದಕ್ಕೂ ಬರುವುದಿಲ್ಲ" ನಾವು ಹೇಗೂ ಅದನ್ನು ಮರಣಕ್ಕೆ, ಲಯವಾಗುವುದಕ್ಕೆ ಪ್ರತಿಷ್ಠಿಸಿದ್ದೇವೆ. ನೂತನ ಸೃಷ್ಟಿಗಳಾಗಿ ನಮ್ಮ ಆಸಕ್ತಿಯೇ ನಮ್ಮ ಮುಖ್ಯ ಚಿಂತೆಯಾಗಿರಬೇಕು. ಆದರೆ ನಮ್ಮ ಮರ್ತ್ಯ ಶರೀರಗಳ ಬಗ್ಗೆ ಅವುಗಳನ್ನು ಸಮಂಜಸವಾಗಿ ಕ್ರಮವಾಗಿ ಇಟ್ಟುಕೊಳ್ಳುವ ಬಗ್ಗೆ, ಆರಾಮದಿಲ್ಲದಿರುವಿಕೆಯ ಕೊರತೆಯಿಂದ ಮುಕ್ತವಾಗುವ ಬಗ್ಗೆ ನಮಗೆ ಹಕ್ಕು ಇದೆ. ಆದರೆ ಅವು ಯಾವಾಗಲೂ ನಮ್ಮ ಸೇವೆಯ ಒಡಂಬಡಿಕೆಯನ್ನು ನೆರವೇರಿಸಲು ನಮ್ಮ ಸೇವಕನಂತೆ ಇರಬೇಕಾಗುತ್ತದೆ. ಅವು ಹಸಿದು ಆಹಾರವನ್ನು ಮತ್ತು ಪಾನೀಯಗಳನ್ನು ಕೇಳುತ್ತವೆಯೋ? ಅವುಗಳನ್ನು ಒದಗಿಸುವುದನ್ನು ಕರ್ತನು ಒಪ್ಪುತ್ತಾನೆಂದು ನಾವು ನಂಬುತ್ತೇವೆ. ಅವುಗಳು ನಾವು ನಿಷ್ಠೆಯಿಂದ ಕರ್ತನ ಕಾರ್ಯವನ್ನೆಸಗಲು ನಮ್ಮನ್ನು ಶಕ್ತರನ್ನಾಗಿ ಮಾಡುತ್ತವೆ. ಶೀತ ಮತ್ತು ಅಸೌಕರ್ಯವನ್ನು ಅನುಭವಿಸುತ್ತವೆಯೋ? ಅದಕ್ಕೆ ದೇವರು ಒಪ್ಪುವಂಥಹ ಬಟ್ಟೆಗಳನ್ನು ಒದಗಿಸುವುದು ನಮ್ಮ ಹಕ್ಕು. ಅದು ಜ್ವರದ ತಾಪದಿಂದ ಬಳಲುತ್ತಿದೆಯೋ? ಅಥವಾ ನೋವಿನಿಂದ ನರಳುತ್ತಿದೆಯೋ? ನಾವು ಪ್ರಯೋಜನಕಾರಿ ಎಂದು ತಿಳಿದಿರುವ ಯಾವುದೇ ಉಪಶಮನವನ್ನು ನೀಡಿ ಅವನ್ನು ಕಡಿಮೆಗೊಳಿಸುವುದು ನಮ್ಮ ಕರ್ತವ್ಯ. ಆದರೆ ನಾವು ನಮ್ಮನ್ನು ಸೂಕ್ಷ್ಮ ದೃಷ್ಟಿಯುಳ್ಳವರಿಗೆ, ಕ್ರೈಸ್ತ ವಿಜ್ಞಾನಿಗಳಿಗೆ, ವಶೀಕರಣ ಮಾಡುವವರಿಗೆ ಅಥವಾ ವಿರೋಧಿಯ ಸಹಾಯದಿಂದ ಮಂತ್ರೋಚ್ಚಾರಣೆ ಮಾಡಿ ಕಷ್ಟನಿವಾರಣೆ ಮಾಡುತ್ತೇನೆಂದು ಹೇಳಿಕೊಂಡು ನಮ್ಮ ಮನಸ್ಸನ್ನು ಪಾಶದಿಂದ ಬಂಧಿಸುವವರಿಗೆ ಒಪ್ಪಿಸಬಾರದು. ತಮ್ಮ ಬಡ, ದುರ್ಬಲವಾದ, ಮರಣದ ಅಂಚಿನಲ್ಲಿರುವ ದೇಹದ ಪಾಲನೆಯಲ್ಲಿ ಸ್ವಾಭಾವಿಕ ಮಾನವರು ಅನುಭವಿಸುವ ಎಲ್ಲಾ ಸೌಕರ್ಯಗಳನ್ನು ಪಡೆಯಲು ನೂತನ ಸೃಷ್ಟಿಗಳೂ ಬದ್ಧರಾಗಿದ್ದಾರೆ. ಅಷ್ಟೇ ಏಕೆ, ಇನ್ನೂ ಹೆಚ್ಚಾಗಿ. ಪ್ರತಿಯೊಬ್ಬ ನೂತನಸೃಷ್ಟಿಯೂ ತನ್ನ ದೇಹದ ಸಮಂಜಸವಾದ ಜಾಗರೂಕತೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ನೂತನ ಸೃಷ್ಟಿಯಲ್ಲಿ ಆತನ ಕರ್ತವ್ಯವು ತೀವ್ರಗೊಳ್ಳುತ್ತದೆ. ಕಾರಣವೇನೆಂದರೆ, ಅವರ ದೇಹವು ಮರಣ ಪರ್ಯಂತ ಕರ್ತನ ಸೇವೆಗೆ ಸಮರ್ಪಿತವಾಗಿವೆ ಮತ್ತು ಅವರು ತಮ್ಮಿಂದಾದ ಮಟ್ಟಿಗೆ ಹೆಚ್ಚಿನ ತ್ಯಾಗದ ಸೇವೆಯನ್ನು ಮಾಡಬೇಕಾಗುತ್ತದೆ.

ಕೆಲವರು "ನಾನು ಉರಿಗೆ ಆದಷ್ಟು ಬೇಗನೇ ಕ್ರೀಮ್ ಅಥವಾ ಯಾವುದಾದರೂ ಮಾಮೂಲಿ ಮುಲಾಮನ್ನು ಹಚ್ಚುತ್ತೇನೆ ಅಥವಾ ವಿವಿಧ ಆಹಾರಗಳನ್ನು ಪಥ್ಯೆಮಾಡುವ ಪದ್ಧತಿಯನ್ನು ಅನುಸರಿಸುತ್ತೇನೆ; ಆದರೆ ನಾನು ಯಾವುದೇ ಮದ್ದನ್ನಾಗಲೀ, ಮುಲಾಮನ್ನಾಗಲೀ ಕೊಂಡುಕೊಳ್ಳುವ ಬಗ್ಗೆ, ವೈದ್ಯರನ್ನು ಕರೆಯುವ ಬಗ್ಗೆ ಸಂಪೂರ್ಣವಾಗಿ ಬೇರೆಯ ರೀತಿಯಲ್ಲಿ ಯೋಚಿಸುತ್ತೇನೆ" ಎಂದು ಹೇಳಲು ಸಿದ್ಧರಿರಬಹುದು. ಆದರೆ ಅಂತಹ ವಿವೇಚನೆಯು ಅರ್ಥವಿಲ್ಲದ್ದು. ನಮಗೆ ಶೀತ ಬಾಧೆ ಉಂಟಾದಾಗ ನಾವು "ನಾನು ಬಟ್ಟೆಗಳನ್ನು ಧರಿಸಿ ಬೆಚ್ಚಗಾಗುತ್ತೇನೆ. ನನ್ನಲ್ಲಿ ಸ್ವಂತ ಕುರಿಗಳಿರುವುದಾದರೆ ಉಣ್ಣೆ ಕತ್ತರಿಸಿ ಬೇಕಾದಂತೆ ಅವನ್ನು ಸಿದ್ಧಪಡಿಸಿಕೊಂಡು ಶೀತದಿಂದ ನನ್ನನ್ನು ರಕ್ಷಿಸಿಕೊಳ್ಳುತ್ತೇನೆ, ಆದರೆ ನಾನು ಇತರರು ತಯಾರಿಸಿದ ಉಡುಪನ್ನು ಅದು ಎಷ್ಟೇ ಉತ್ತಮ ಮಟ್ಟದ್ದಾಗಿದ್ದರೂ, ಅನುಕೂಲಕರವಾಗಿದ್ದಾರೂ ಅವನ್ನು ಧರಿಸುವುದಿಲ್ಲ" ಎಂದು ಸಹಾ ಹೇಳಬಹುದಲ್ಲವೇ? ಅಥವಾ ನಮಗೆ ಹಸಿವಾದಾಗ, ನಾವು "ನಾವೇ ಬಿತ್ತಬೇಕು, ಕೊಯ್ಯಬೇಕು, ಹಿಟ್ಟು ಮಾಡಿ ನಾವೇ ರೊಟ್ಟಿ ತಯಾರಿಸಿಕೊಳ್ಳಬೇಕು" ಎಂದು ಹೇಳುತ್ತಾರೆಯೇ? ನಾವು ನಮ್ಮ ದೇಹದ ಅಗತ್ಯತೆಗಾಗಿ ರೈತರ, ಮಾಂಸ ಮಾರಾಟಗಾರರ, ಮತ್ತು ರೊಟ್ಟಿ ತಯಾರಿಸುವವರ ಹಾಗೂ ಧರ್ಜಿಗಳ ಕೆಲಸವನ್ನು ನಮ್ಮ ಮೇಲೆ ತೆಗೆದುಕೊಳ್ಳಲು ಸಾಧ್ಯವೇ? ಅಥವಾ ನಮ್ಮ ದೇಹದ ನೋವನ್ನು ಉಪಶಮನಗೊಳಿಸಲು ಇತರ ಸಹೋದರರ, ನೆರೆಯವರ ಅಥವಾ ಅಪರಿಚಿತರ ಸಹಾಯವನ್ನು ತೆಗೆದುಕೊಳ್ಳುವುದು ಪಾಪವೇ? ಖಂಡಿತವಾಗಿಯೂ ಅಲ್ಲ. ನಾವು ಔಷಧಿಗಳನ್ನು ಪ್ರತಿಪಾದಿಸುತ್ತಿದ್ದೇವೆಂದು ಅರ್ಥೈಸಬಾರದು, ಆದರೆ ಸಾಮಾನ್ಯ ಜ್ಞಾನವನ್ನು. ಮದ್ದು ಮಾಡುವುದನ್ನು ನಿಸ್ಸಂದೇಹವಾಗಿ ಅವಿವೇಕ ಅಥವಾ ಅಪರಾಧದ ಮಟ್ಟಕ್ಕೂ ಕೊಂಡೊಯ್ಯಬಹುದು. ಅಹಾರ ಪದ್ಧತಿಯನ್ನು ಸರಿಪಡಿಸಿಕೊಂಡು ಪಥ್ಯಮಾಡುವುದನ್ನು ಸಾಧ್ಯವಾದಷ್ಟು ಆರಿಸಿಕೊಳ್ಳಬೇಕು. ನೂತನ ಸೃಷ್ಟಿಗಳಿಗೆ ನೀಡುವ ಸೂಚನೆ ಈ ರೀತಿಯಾಗಿದೆ–"ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ"(ಫಿಲಿಪ್ಪಿ 4:5). ಇದು ಔಷಧಿ, ಅಹಾರ ಇವೇ ಮುಂತಾದವುಗಳೆಲ್ಲವುಗಳಿಗೂ ಅನ್ವಯವಾಗುತ್ತದೆ.

ಯೇಸು ಕ್ರಿಸ್ತನು ಮಾಡಿದ್ದೇನು? ಅಪೋಸ್ತಲರು ಆತನ ಹೆಜ್ಜೆಜಾಡಿನಲ್ಲಿ ಹೇಗೆ ಮುಂದುವರೆದರು? ನಾವು ಉತ್ತರಿಸುವುದೇನೆಂದರೆ, ಯೇಸುವಾಗಲೀ, ಅಪೋಸ್ತಲರಾಗಲೀ ಯಾವುದೇ ಒಂದು ಸಭೆಯವರನ್ನು ಗುಣಪಡಿಸಿದ ದಾಖಲೆ ಇಲ್ಲ. ಕ್ರಿಸ್ತನು ಕಾಯಿಲೆಯವರನ್ನು ಗುಣಪಡಿಸಿದ್ದು ಈ ವಿಷಯದಲ್ಲಿ ದೇವರ ಚಿತ್ತವನ್ನು ಬಹಿರಂಗ ಪಡಿಸುವ ಒತ್ತಾಯವನ್ನು ಸೂಚಿಸುತ್ತದೆಯೋ? ಇದಕ್ಕೆ ನಮ್ಮ ಉತ್ತರವೇನೆಂದರೆ, ಗುಣ ಹೊಂದಿಕೊಂಡವರಲ್ಲ, ಗುಣ

ಪಡಿಸುವವನು ನಮ್ಮ ಮಾದರಿಯಾಗಿದ್ದಾನೆ. ನಮ್ಮ ಕರ್ತನು ಆಶ್ಚರ್ಯಕರವಾದ ರೀತಿಯಲ್ಲಿ ಸಹಸ್ರಾರು ಮಂದಿಗೆ ಉಣಬಡಿಸಿದನು. ನಾವೂ ಸಹಾ ಅದೇ ರೀತಿಯಲ್ಲಿ ಚಮತ್ಕಾರಿಕವಾಗಿ ಆಹಾರ ಪಡೆದುಕೊಳ್ಳಬೇಕೋ? ಅದಕ್ಕೆ ವ್ಯತಿರಿಕ್ತವಾಗಿ – ಕೂಡದು. ನೂತನ ಸೃಷ್ಟಿಯ ಮುಖ್ಯಸ್ಥನು ದೈವಿಕ ಶಕ್ತಿಯನ್ನು ತನ್ನ ಸ್ವಂತ ಲಾಭಕ್ಕಾಗಿ ಉಪಯೋಗಿಸಿಕೊಳ್ಳಲು ನಿರಾಕರಿಸಿದಂತೆ ನಾವೂ ಸಹಾ ಮಾಡಬೇಕು. (ಮತ್ತಾಯ 4:2–4, 26:53 ನೋಡಿರಿ). ಆತನು ಹಸಿದಾಗ ತನ್ನ ಶಿಷ್ಯರನ್ನು ರೊಟ್ಟಿ ಕೊಂಡುಕೊಳ್ಳಲು ಕಳುಹಿಸುತ್ತಾನೆ, ವಿಶ್ರಾಂತಿ ಬೇಕಾದಾಗ ಭಾವಿಯ ಕಟ್ಟೆ ಮುಂತಾದೆಡೆ ದಣಿವಾರಿಸಿಕೊಳ್ಳುತ್ತಾನೆ – ಆತನಿಗೆ ತನ್ನ ಚೈತನ್ಯವು ನಷ್ಟಹೊಂದಿದಾಗಲೂ, ಕುಂದಿದಾಗಲೂ ಈ ಸ್ವಾಭಾವಿಕ ತೊಂದರೆಗಳ ನಿವಾರಣೆಗಾಗಿ ಆತನು ಪ್ರಾರ್ಥಿಸಲಿಲ್ಲ. ಅವುಗಳನ್ನು ತನ್ನ ಸಮರ್ಪಣೆಯ ಭಾಗವೆಂಬಂತೆ ಸಂತೋಷವಾಗಿ ಸಹಿಸಿಕೊಂಡನು. ಅದರಂತೆ ನಾವೂ ಸಹಾ ಮಾಡಬೇಕು.

ಇದಕ್ಕಿಂತಲೂ ಹೆಚ್ಚಾಗಿ, ತನ್ನ ಲೌಕಿಕ ಅಗತ್ಯತೆಗಳಿಗಾಗಿ ಪವಿತ್ರಾತ್ಮನನ್ನು ಬಳಸಿಕೊಳ್ಳುವುದು ದೋಷಕರವಾಗಿ ತನ್ನ ಶಕ್ತಿಯ ದುರುಪಯೋಗವಾಗುತ್ತದೆಂದು ನಮ್ಮ ಕರ್ತನೇ ಹೇಳಿದ್ದಾನೆ. ಯಾಕೆಂದರೆ ಈ ಶಕ್ತಿಯು ಬೇರೆ ಕಾರಣಕ್ಕಾಗಿಯೇ ಆತನ ಬಳಿಯಲ್ಲಿತ್ತು. ತನ್ನ ಅಪತ್ಕಾಲದ ಸಹಾಯಕ್ಕಾಗಿ ಅಥವಾ ರಕ್ಷಣೆಗಾಗಿ ದೇವರ ಶಕ್ತಿಯನ್ನು ಬರಮಾಡಿಕೊಳ್ಳುವುದು ಪಾಪವಾಗುತ್ತಿತ್ತು. ಯಾಕೆಂದರೆ ಆತನು ತ್ಯಾಗದ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ. ಅದರ ಪರಿಣಾಮಗಳಿಗೆ ಮನವಿಮಾಡುವ ಯಾವುದೇ ಪ್ರಯತ್ನವು "ಹಿಂಜರಿಯುವಿಕೆ' ಎನಿಸುತ್ತದೆ. – "ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿಲ್ಲ" (ಇಬ್ರಿಯ 10:38 ಮತ್ತಾ. 26:53).

ಸಭೆಯ ವಿಷಯದಲ್ಲಿಯೂ ಸಂಗತಿಗಳು ಹಾಗೆಯೇ ನಿಲ್ಲುತ್ತದೆ. ಯಾಕೆಂದರೆ, ನಾವು ನಮ್ಮ ನಾಯಕನನ್ನು ಅನುಸರಿಸುವವರಾಗಿದ್ದೇವೆ. ನಾವು ಮರಣ ಪರ್ಯಂತ ಪ್ರತಿಷ್ಠೆಗೊಳಿಸಿರುವ ನಮ್ಮ ಮರ್ತ್ಯ ಶರೀರಕ್ಕಾಗಿ ದೇವರ ಸಹಾಯಕ್ಕೆ ಮನವಿ ಮಾಡುವುದು ನಮ್ಮ ಒಡಂಬಡಿಕೆಯನ್ನು ಹೀನೈಸುವುದಾಗಿದೆ. ಈ ಒಡಂಬಡಿಕೆಯ ಮೂಲಕ ನಾವು ನಮ್ಮ ಈ ಲೋಕದ ಎಲ್ಲಾ ಸವಲತ್ತುಗಳನ್ನು ನೂತನ ಸೃಷ್ಟಿಗಳಾಗಿ "ಪ್ರಭಾವ, ಮಾನ, ನಿರ್ಲಯತ್ವಗಳೆಂಬ" ಬಹುಮಾನವನ್ನು ಪಡೆಯುವ ಓಟದ ಭಾಗ್ಯಕ್ಕಾಗಿ ವಿನಿಮಯ ಮಾಡಿಕೊಂಡಿರುವ ನಮ್ಮ ಎಲ್ಲಾ ಮಾನವ ಹಕ್ಕುಗಳನ್ನು (ಕ್ರಿಸ್ತನು ತನ್ನ ಅಮೂಲ್ಯ ರಕ್ತದ ಮೂಲಕ ಖರೀದಿಸಿದ ಪ್ರಾಯಶ್ಚಿತ್ತ ಸಂಧಾನದ ಸವಲತ್ತುಗಳನ್ನು) ನೀಡುವವರಾಗಿದ್ದೇವೆ. ನಾವು ಈಗಾಗಲೇ ಒಪ್ಪಿಸಿ ಕೊಟ್ಟಿರುವುದನ್ನು ಪುನಃ ವಾಪಸ್ಸು ಕೇಳುವುದು ನಮ್ಮ ಅರ್ಪಣೆಯನ್ನು ವಾಪಸು ಪಡೆಯುವ, ನಮ್ಮ ಒಡಂಬಡಿಕೆಯನ್ನು ರದ್ದುಗೊಳಿಸುವ, ಮತ್ತು ನೂತನ ಸೃಷ್ಟಿಗಳಾಗಿ ನಮ್ಮ ಬಾಧ್ಯತೆಗಳನ್ನು ಬಿಟ್ಟುಕೊಡುವ ಅರ್ಥ ನೀಡುತ್ತದೆ. ಲೌಕಿಕ ಸಂಗತಿಗಳಿಗಾಗಿ ಮಾಡುವ ಪ್ರಾರ್ಥನೆಯ ಈ ದೃಷ್ಟಿಕೋನವು ಕೆಲವರಿಗೆ ಹೊಸದು. ಕೆಲವರಿಗೆ ಅದು ಆಘಾತವನ್ನೂ ಉಂಟು ಮಾಡಬಹುದು. ಯಾಕೆಂದರೆ ಅವರು ತಿಳುವಳಿಕೆಯಿಲ್ಲದೆ ಮಾಡಿದ ಅವರ ಪ್ರಾರ್ಥನೆಗಳಿಗೆ ದೇವರು ಉತ್ತರಿಸಿದ್ದನ್ನು ಇದು ಪ್ರತಿಬಿಂಬಿಸುತ್ತವೆ. ಈ ರೀತಿಯಲ್ಲಿ ಅವರು ಬಹುಮಾನದ ಓಟದಿಂದ ತಿರಸ್ಕರಿಸಲ್ಪಟ್ಟಿದ್ದಾರೆಂಬ ಅರ್ಥವೋ? ಹಾಗೆಂದು ನಾವು ತಿಳಿಯುವುದಿಲ್ಲ. ಈ ಲೋಕದ ತಂದೆತಾಯಿಗಳು ಅರಿವಿಲ್ಲದ ತಮ್ಮ ಚಿಕ್ಕ ಮಕ್ಕಳ ಬಗ್ಗೆ ಹೇಗೆ ದೀರ್ಘಶಾಂತಿಯಿಂದಿರುತ್ತಾರೋ ಅದೇ ರೀತಿಯಲ್ಲಿ ದೇವರು ತನ್ನ ಜನರ ಬಗ್ಗೆ ತಾಳ್ಮೆಯುಳ್ಳವನಾಗಿದ್ದಾನೆ, ಅವರ ಉದ್ದೇಶಪೂರ್ವಕವಲ್ಲದ ತಪ್ಪುಗಳನ್ನು ಕ್ಷಮಿಸುತ್ತಾನೆ ಮತ್ತು ಕೇವಲ ಮಾತುಗಳನ್ನಲ್ಲ ಅವರ ಉದ್ದೇಶವನ್ನು ಗಣನೆಗೆ ತೆಗೆದುಕೊಳ್ಳುತ್ತಾನೆ. ತಂದೆತಾಯಿಗಳು ತಮ್ಮ ಚಿಕ್ಕ ಮಗುವಿನ ಸೂಕ್ತವಲ್ಲದ ಕೋರಿಕೆಗಳನ್ನೂ ನೆರವೇರಿಸುವಂತೆ, ಪರಲೋಕದ ತಂದೆಯೂ ಕೆಲವೊಮ್ಮೆ ಅನುಚಿತವಾಗಿ ಉಪಯೋಗಿಸಿದ್ದನ್ನೂ ಗೌರವಿಸುತ್ತಾನೆ. ಆದರೆ, ನಾವು ಕೃಪೆಯಲ್ಲಿ ಮತ್ತು ಜ್ಞಾನದಲ್ಲಿ ಬೆಳೆದಂತೆಲ್ಲಾ ಇದು ಬದಲಾಗುತ್ತಾ ಹೋಗುತ್ತದೆ; ನಂತರದಲ್ಲಿ ಒಡಂಬಡಿಕೆಯನ್ನು ತಿರಸ್ಕರಿಸುವುದು ಪಾಪವೂ, ದೇವರ ಅವಕೃಪೆಗೆ ಪಾತ್ರವಾಗುವುದೂ ಆಗುತ್ತದೆ.

## "ವಿಶ್ವಾಸಿಗಳ ಪ್ರಾರ್ಥನೆಯು ರೋಗಿಗಳನ್ನು ರಕ್ಷಿಸುತ್ತದೆ" (ಯಾಕೋಬ 5 : 14–16)

## The Prayer of Faith Shall Save the Sick - James 5:14-16

ಈ ವಾಕ್ಯಭಾಗ ಮತ್ತು ಮಾರ್ಕ 16: 17,18 ಇವುಗಳು ನೂತನ ಸೃಷ್ಟಿಗಳು ಕಾಯಿಲೆಯವರನ್ನು ಗುಣಪಡಿಸಲು* ದೇವರ ಶಕ್ತಿಯ ಮೇಲೆ ಆತುಕೊಳ್ಳಬೇಕು ಎಂಬುದಕ್ಕೆ ಆಧಾರವಾಗಿವೆ. ಮಾರ್ಕನ ಸುವಾರ್ತೆಯಲ್ಲಿನ ವಾಕ್ಯಕ್ಕೆ ಸುಲಭವಾಗಿ ಹೊಂದಿಸಬಹುದು. ಇದು ಬಹಳ ಹಿಂದಿನ ಗ್ರೀಕ್ MSS ನಲ್ಲಿ ಕಂಡುಬರುವುದಿಲ್ಲವಾದುದರಿಂದ ಇದನ್ನು ಸುಮಾರು 5ನೇ ಶತಮಾನದಲ್ಲಿ ಸೇರಿಸಿದ್ದಿರಬಹುದೆಂದು ಪರಿಗಣಿಸಬಹುದು.

ಯಾಕೋಬನ ಪತ್ರಿಕೆಯಲ್ಲಿನ ಮಾತುಗಳ ಬಗ್ಗೆ ಹೇಳುವುದಾದರೆ; ಇಲ್ಲಿ ಉಲ್ಲೇಖಿಸಿರುವ ವ್ಯಾಧಿಯು ನಮ್ಮ ಪಾಪಕ್ಕೆ ದೊರೆಯುವ ದಂಡನೆಯಾಗಿದೆ ಎಂಬುದು 16ನೇ ವಚನದಿಂದ ಸ್ಪಷ್ಟವಾಗುತ್ತದೆ. ಇದೊಂದು ಅಲ್ಪವಾದ ವ್ಯಾಧಿಯಾಗಿರದೆ, ಭಯಂಕರವಾದುದಾಗಿದ್ದು ಸಭೆಯ ಹಿರಿಯರನ್ನು ಕರೆಸಲು ಯೋಗ್ಯವಾಗಿದೆ. ಪಾಪವು ಪಾಪಿಯಾದ ರೋಗಿಯನ್ನು ದೇವರ ಸಂಪರ್ಕದಿಂದ ಕಡಿದು ಹಾಕಬಹುದಾದ ಬಾಗಿಲಿಗೆ ಬಹಳ ನಿಕಟವಾಗಿದೆ ಎಂಬ ಅಭಿಪ್ರಾಯ ಮೂಡಿಸುತ್ತದೆ. ಇಂಥಹ ಪರಿಸ್ಥಿತಿಯಲ್ಲಿ ನಾವು ಅಪೇಕ್ಷಿಸುವುದೇನೆಂದರೆ ಪಾಪವನ್ನು ಒಪ್ಪಿಕೊಂಡು ಅರಿಕೆಮಾಡಿ ಕ್ಷಮಾಪಣೆಗೋಸ್ಕರ ಬೇಡಿಕೊಳ್ಳತಕ್ಕದ್ದು. ದಾಖಲೆಯು ಸಹಾ ಅದನ್ನೇ ಹೇಳುತ್ತವೆ –"ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಗಳನ್ನು ರಕ್ಷಿಸುವುದು (ಅತನು ಅನುಭವಿಸುತ್ತಿರುವ ದಂಡನೆಯಿಂದ) ಕರ್ತನು ಅವನನ್ನು ಎಬ್ಬಿಸುವನು (ಆರೋಗ್ಯವಂತನಾಗುವಂತೆ ಈ ವಾಸಿಪಡಿಸುವಿಕೆಯು ಪಾಪಕ್ಷಮಾಪಣೆಯ ಸೂಚನೆಯಾಗಿದೆ) ಮತ್ತು ಪಾಪಮಾಡಿದವನಾಗಿದ್ದರೆ ಅದು ಪರಿಹಾರವಾಗುವುದು" (ಯಾಕೋಬ 5:15)

## ಸೈತಾನನು ಸೈತಾನನ್ನು ಹೊರ ಹಾಕಿದರೆ ಆತನ ರಾಜ್ಯವು ಕ್ಷೀಣಿಸುತ್ತದೆ (ಮತ್ತಾಯ 12:26)

## If Satan Cast Out Satan His Kingdom Wanes -Matthew 12:26

ಕರ್ತನ ಮೊದಲನೆಯ ಆಗಮನದಲ್ಲಿ ಫರಿಸಾಯರು ಆತನು ದೆವ್ವಗಳನ್ನು, ಸೈತಾನನ ಸಹಾಯದಿಂದ ಬಿಡಿಸುತ್ತಾನೆ ಎಂದು ಆರೋಪಮಾಡಿದಾಗ, ಸೈತಾನನು ಆ ರೀತಿಯ ಕಾರ್ಯವೆಸಗುವ ಸಾಧ್ಯತೆಯಿದೆಯಾದರೂ ಅದು ಸಂಭವನೀಯವಲ್ಲ ಎಂಬುದನ್ನು ಆತನ ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಹೀಗಾದಲ್ಲಿ, ಸೈತಾನನ ಶಕ್ತಿಯು ಕ್ಷೀಣಿಸುತ್ತಿದೆ ಮತ್ತು ಆತನ ಬಹಳ ಒತ್ತಡಕ್ಕೆ ಸಿಕ್ಕಿಕೊಂಡು ತನ್ನ ಮೋಸಕ್ಕೆ ಬಲಿಯಾದವರು ತನ್ನ ಹಿಡಿತದಿಂದ ಕಳಕೊಳ್ಳಲಾಗದೆ ಕಡೆಯ ಪ್ರಯತ್ನವೆಂಬಂತೆ ಹೀಗೆಮಾಡುತ್ತಿದ್ದಾನೆ ಎಂಬುದು ಇದರಿಂದ ನಮಗೆ ರುಜುವಾತಾಗುತ್ತದೆ. ಗುಣಪಡಿಸುವಿಕೆ ಮುಂತಾದ ಅದ್ಭುತ ಕಾರ್ಯಗಳೆಲ್ಲವೂ ಸೈತಾನಿಕವಾಗಿದೆ ಎಂಬ ಸರ್ವೆ ಸಾಮಾನ್ಯವಾದ ನಿರಾಕರಣೆಯನ್ನು ನಾವು ಪ್ರತಿಪಾದಿಸುತ್ತಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯ ಅಥವಾ ಪದ್ಧತಿಯ ಜಾಗರೂಕವಾದ ಸೂಕ್ಷ್ಮ ಪರಿಶೀಲನೆಯು ಅದ್ಭುತ ಕಾರ್ಯಗಳಿಂದ ಸ್ಥಾಪಿತ ವಾಗಲು ಬಯಸುವುದಾಗಿದೆ, ನೂತನ ಸೃಷ್ಟಿಯು ಸ್ಪೂರ್ತಿದಾಯಕವಾದ ಈ ನಿರ್ದೇಶನವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು : **"ಅನೇಕ ಮಂದಿ ಸುಳ್ಳುಪ್ರವಾದಿಗಳು ಲೋಕದೊಳಗೆ ಬಂದಿರುವುದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು (ಬೋಧನೆಗಳು) ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು"** (1 ಯೋಹಾನ 4:1)

ಈ ಯುಗದ ಆರಂಭದ ದಿನಗಳಲ್ಲಿ ಸಭೆಯನ್ನು ಸ್ಥಾಪಿಸಲು ಉಪಯೋಗಿಸಿದ ಈ ಅದ್ಭುತಕಾರ್ಯಗಳನ್ನು ನಾವು ನೆನಪುಮಾಡುವಾಗ, ಸಭೆಯು ಸ್ಥಾಪನೆಗೊಂಡ ಹತ್ತೊಂಬತ್ತು ಶತಮಾನಗಳ ನಂತರ ಅದು ಮುಕ್ತಾಯದ ಹಂತದಲ್ಲಿರುವಾಗ ಅಂತಹ ಉದ್ದೇಶದ ಅಗತ್ಯತೆ ಈಗ ಕಂಡುಬರುವುದಿಲ್ಲ ಎಂಬುದು ಈ ವಿಚಾರಣೆಗೆ ಉಚಿತವಾಗಿದೆ. ಸ್ಪೂರ್ತಿದಾಯಕವಾಗಿ ಅಪೋಸ್ತಲನು ತೋರಿಸುವುದೇನಂದರೆ ನಮ್ಮನ್ನು ಮೋಸಗೊಳಿಸಲು ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ (ಶಾಂತಿ ಮತ್ತು ಆರೋಗ್ಯದ ದೂತ ಎಂಬುದಾಗಿ ವಿಜ್ಞಾನವು ತಪ್ಪಾಗಿ ಕರೆಯುವ) ವೇಷವನ್ನು ಹಾಕಿಕೊಳ್ಳುವನು (2 ಕೊರಿಂಥ 11:14) ನಮ್ಮ ಕಾಲದಲ್ಲಿ ಇದು ನೆರವೇರುವುದು ಎಂದು ಸೂಚಿಸಿ ಹೇಳಿರುವನೆಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕುರಿಮರಿಯಾದಾತನ ಜೀವಬಾಧ್ಯ ಪುಸ್ತಕದಲ್ಲಿ ಹೆಸರು ಬರೆಯಲ್ಪಡದೆ ಇರುವ ಈ ಲೋಕದಲ್ಲಿ ವಾಸಿಸುವ ಜನರನ್ನು ಮೋಸಗೊಳಿಸುವಂತೆ ದೇವರು ಈ ಕ್ರಮವನ್ನು ಹೆಚ್ಚಿನ ಮಟ್ಟದಲ್ಲಿ ಜಯಪ್ರಧವಾಗಲು ಅನುಮತಿಸುತ್ತಾನೆ ಎಂಬ ಅಭಿಪ್ರಾಯವನ್ನೂ ಅಪೋಸ್ತಲನು ನೀಡುತ್ತಾನೆ. – "ಆ ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಸಾರವಾಗಿರುವುದು. ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ ದೇವರು ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವುದಕ್ಕೆ ಅವರನ್ನು ಬಿಡುತ್ತಾನೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದ ಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು" (2ಥೆಸ. 2:9–12).ನಮ್ಮ ಕರ್ತನ ಈ ಮಾತುಗಳನ್ನೂ ನಾವು ಮರೆಯದೇ ಇರೋಣ –"ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ? ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮ ವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು" (ಮತ್ತಾ.7: 22,23).

ನಾವು ಈ ಯುಗದ ಅಂತ್ಯಕಾಲದಲ್ಲಿದ್ದೇವೆ ಮತ್ತು ಈ ಎಲ್ಲಾ ಭವಿಷ್ಯ ನುಡಿಗಳೂ ಪೂರ್ಣವಾಗಿ ಈಗ ನೆರವೇರುತ್ತವೆ ಎಂಬ ತಿಳುವಳಿಕೆಗೆ ಯಾರ ಕಣ್ಣುಗಳು ತೆರೆಯಲ್ಪಟ್ಟಿವೆಯೋ ಅಂಥವರನ್ನು ಹುಡುಕುವ ಕಾಲ ಇದಾಗಿದೆ ಎಂಬುದು ಸತ್ಯ. ಯಾಕೆಂದರೆ, ಅವರ ಭ್ರಷ್ಟ ಬೋಧನೆಗಳಿಂದ ಮತ್ತು ಕ್ರೈಸ್ತ ಪ್ರಪಂಚದ ಎಲ್ಲೆಡೆಗಳಲ್ಲಿಯೂ ಮಾಡುವ ಚಮತ್ಕಾರಿ ಕಾರ್ಯಗಳಿಂದ ಅವರನ್ನು ಗುರುತಿಸಲು ಸಾಧ್ಯವಾಗುತ್ತದೆ.

ಆದರೆ, ಇವುಗಳನ್ನು ಎಷ್ಟು ಸೈತಾನನ ಭ್ರಮೆ, ಅವುಗಳಲ್ಲಿ ದೇವರದು ಯಾವುದೂ ಇಲ್ಲ ಎಂಬುದಾಗಿ ನಾವು ಹೇಗೆ ಖಚಿತಪಡಿಸಿಕೊಳ್ಳಬಹುದು? ನಾವು ಇದಕ್ಕೆ ಸ್ಪೂರ್ತಿ ದಾಯಕವಾದ ದೇವರ ವಾಕ್ಯದಿಂದಲೇ ಉತ್ತರಿಸುತ್ತೇವೆ – "ದೇವರ ಉಪದೇಶವನ್ನು ದೇವರ ಬೋಧನೆಯನ್ನು ವಿಚಾರಿಸುವ ಎಂದು ಅವರು ಹೇಳದಿದ್ದರೆ, ಅವರಿಗೆ ಎಂದಿಗೂ ಬೆಳಗಾಗುವುದಿಲ್ಲ" (ಯೆಶಾಯ 8:20 ನೋಡಿರಿ). ಅವರು ವಾಕ್ಯದಿಂದ ದೂರಸರಿಯುವುದು ವಿವಿಧ ರೀತಿಯಲ್ಲಿ – ಕೆಲವರು ಒಂದು ದಿಕ್ಕಿನಲ್ಲಿ, ಮತ್ತೆ ಕೆಲವರು ಮತ್ತೊಂದು ದಿಕ್ಕಿನಲ್ಲಿ. ಅವರಲ್ಲಿ ಹೆಚ್ಚು ಮಂದಿ ಈಡು ಬಲಿ ಇವೇ ಮುಂತಾದ ಸುವಾರ್ತೆಯ ಮೂಲ ಸಿದ್ಧಾಂತಗಳಿಂದ ದೂರ ಸರಿದಿದ್ದಾರೆ ಎಂಬುದನ್ನು ತ್ವರಿತವಾಗಿ ಕಂಡುಕೊಳ್ಳಬಹುದು. ಅವರು ಈಡುಬಲಿಯನ್ನು ಅಲ್ಲಗಳೆಯುತ್ತೇವೆಂದು ಹೇಳಿಕೊಳ್ಳುವುದಿಲ್ಲ; ಅವರು ಕಲ್ವಾರಿಯಲ್ಲಿ ಪಾಪ ನಿವಾರಣೆಗಾಗಿ ನಡೆದ ಆ ಮಹಾ ತ್ಯಾಗದ ಅಗತ್ಯತೆಯನ್ನು ಮತ್ತು ಅದರ ಪರಿಣಾಮದ ಶಕ್ತಿಯನ್ನು ನಂಬುತ್ತೇವೆ, ಅದು ಎಲ್ಲರ ಪಾಲಿನ ಈಡುಬಲಿಯಾಗಿದೆ ಮತ್ತು ಎಲ್ಲರ ಪಾಪ ಕ್ಷಮಾಪಣೆ ಮತ್ತು ದೇವರೊಂದಿಗಿನ ಸಂಧಾನಕ್ಕೆ ತಳಹದಿಯಾಗಿದೆ ಎಂದು ಸಹಾ ಹೇಳಿಕೊಳ್ಳಬಹುದು. ಆದರೆ ಮೋಸಗೊಳಿಸುವ ಅವರ ಪ್ರಯತ್ನವು ಗ್ರೀಕ್‌ನಲ್ಲಿ "Ransom' (ಈಡುಬಲಿ) ಎಂಬ ಪದಕ್ಕೆ "anti-lutron' ಎಂಬ ಅರ್ಥವಿದೆ ಮತ್ತು ಇದು " ತಕ್ಕ ಕ್ರಯ' ಎಂಬುದನ್ನು ಸೂಚಿಸುತ್ತದೆ ಎಂದು ನಂಬಿರುವವರನ್ನು ಗೊಂದಲಕ್ಕೀಡುಮಾಡದು. ದೈವಿಕ ಸತ್ಯದ ಈ ಓರೆಗಲ್ಲು ಸದ್ಯದಲ್ಲಿಯೇ ವಿಕಾಸ ಸಿದ್ದಾಂತವು(Evolution) ಸತ್ಯಕ್ಕೆ ವಿರೋಧವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ. ಯಾಕೆಂದರೆ, ವಿಕಾಸ ಸಿದ್ದಾಂತವು ಆದಾಮನ ಪತನವನ್ನು

ಬಹುಮಾನದ ರೂಪದಲ್ಲಿ ಅನುಗ್ರಹಿಸಿದ ಚಾಲ್ತಿಯಲ್ಲಿದ್ದ ಸಮಯ* ಸತ್ಯವೇದದ ಸಂಖ್ಯಾಶಾಸ್ತ್ರವು (Biblical Numerics) ಈ ವಚನ ನಿಜವಾದುದು (ದೈವ ಪ್ರೇರಿತವಾದದ್ದು) ಎಂದು ಋಜುವಾತುಪಡಿಸುತ್ತದೆ ಇದು ಕೇವಲ ಪವಿತ್ರಾತ್ಮನ ವರಗಳನ್ನು ಕ್ಕೆ ಅನ್ವಯಿಸುತ್ತದೆ.

ಮತ್ತು ಅದರಿಂದ ವಿಮೋಚನೆಗೊಳ್ಳುವ ಯೋಜನೆಯನ್ನು ನಿರಾಕರಿಸುತ್ತದೆ. ಅದು ಕ್ರೈಸ್ತ ವಿಜ್ಞಾನವನ್ನು ಸಂಪೂರ್ಣವಾಗಿ ಅಕ್ರೈಸ್ತೀಯವೆಂದು ತಡವಿಲ್ಲದೆ ಖಂಡಿಸುವಾಗ ಪಾಪ, ಮರಣ ಮತ್ತು ಎಲ್ಲಾ ಕೆಡುಕುಗಳನ್ನು ನಿರಾಕರಿಸಿ ಅವು ಮಾನಸಿಕ ಭ್ರಮೆಗಳೆಂದು ಹೇಳುತ್ತವೆ. ದೇವರು ಸದಾ ಪಾಪವನ್ನು ವಿರೋಧಿಸುವವನು, ಮಾನವರನ್ನು ಪಾಪದ ಬಂಧನದಿಂದ ವಿಮೋಚಿಸಲು ತನ್ನದೇ ಆದ ವಿಮೋಚನೆಯ ಯೋಜನೆಯನ್ನು ಹೊಂದಿದ್ದು ಅದರ ಫಲಗಳು ಪುನರ್ವಶದ ಕಾಲದಲ್ಲಿ ಫಲನೀಡುತ್ತವೆ ಎಂಬ ಸೂತ್ರವನ್ನು ಅದು ಅಲ್ಲಗಳೆದು ಆತನೇ ಚಿತಾವಣೆಗಾರನು, ಪಾಪದ ಮತ್ತು ಕೆಡಕುತನದ ಉತ್ಪಾಧಕನು ಎಂದು ಖಂಡಿಸುತ್ತದೆ.

ಪಿಶಾಚನ ತತ್ವಗಳನ್ನು ಬೋಧಿಸಿ, ದೇವರ ಪವಿತ್ರ ನಾಮವನ್ನು ದೂಷಣೆಮಾಡುವವರ ಬಗ್ಗೆ ನಾವು ಏನು ಹೇಳಬಹುದು? – ಇದರಂತೆ ಜೀವಿಸುವ ಜನರ ಮಹಾ ಗುಂಪಿಗೆ ನಿತ್ಯಯಾತನೆಯು ಕಾಯುತ್ತಿದೆ ಮತ್ತು ಈಗಾಗಲೇ 50.000,000,000 ಮಹಾ ಜನಸಮೂಹವು ಇದರ ನಿಯಂತ್ರಣದಲ್ಲಿದೆ. ಆದರೆ ಇವರ ಬಗ್ಗೆ ಪರಿಶುದ್ಧ ಗ್ರಂಥವು ವ್ಯತಿರಿಕ್ತವಾದ ಹೇಳಿಕೆ ನೀಡಿ. ಅವರೆಲ್ಲರೂ ಸಮಾಧಿಯಲ್ಲಿದ್ದಾರೆ, ಮತ್ತು ಈ ಲೋಕದ ಎಲ್ಲಾ ಕುಟುಂಬಗಳಿಗೆ ದೊರೆಯುವ ವಾಗ್ಧತ್ತ ಆಶೀರ್ವಾದಗಳಿಗಾಗಿ ಕಾಯುತ್ತಿದ್ದಾರೆ'ಎಂದು ಹೇಳುತ್ತದೆಯೋ?. ಅಂಥಾಃ ಜನರು 'ನನ್ನ ಹೆಸರಿನಲ್ಲಿ ಅದ್ಭುತ ಕಾರ್ಯ'ಗಳನ್ನು ನಡೆಸುವುದಾದರೆ, ಕಾಯಿಲೆಗಳನ್ನು ಗುಣಪಡಿಸುವುದಾದರೆ ದೇವರು ಅವರ ತಪ್ಪುಸಿದ್ಧಾಂತಗಳನ್ನು ಅನುಮೋಧಿಸುತ್ತಾನೆಂದು ನಾವು ಪರಿಗಣಿಸಬಹುದೋ? ಹಾಗೆಂದು ನಾವು ಭಾವಿಸಲೇಬಾರದು. ಈಗ ಮಿಲೇನಿಯಂ (ಧರ್ಮಯುಗ)ಯುಗದ ಅರುಣೋದಯ ವಾಗುತ್ತಿದೆ, ಅಂಥಹ ಭಯಂಕರವಾದ ಕತ್ತಲು ಮಾಯವಾಗುತ್ತಿದೆ. ಅಪೋಸ್ತಲನು "ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ" ಎಂಬುದಾಗಿ ಯಾರ ಬಗ್ಗೆ ಹೇಳಿದನೆಂದು ನಾವು ಎಣಿಕೆ ಮಾಡಲಾಗದು. ತಮ್ಮ ರಾಜನಾಗಿ ಬರಲಿರುವ ಕ್ರಿಸ್ತನ ಬರೋಣವು ಹತ್ತಿರದಲ್ಲಿಯೇ ಎಂದು ಪ್ರಕಟಿಸುವಂತೆ ಅವರು ಮಾಡುವ ಅದ್ಭುತ ಕಾರ್ಯಗಳು ಲೆಕ್ಕಕ್ಕೆ ಬಾರವು. ಅವರ ಬಾಯಲ್ಲಿ ಮತ್ತು ಹೃದಯಗಳಲ್ಲಿರುವ ಪಿಶಾಚನಂತಹ ಸಿದ್ಧಾಂತಗಳನ್ನು ಇಟ್ಟುಕೊಂಡು ಅವರುಗಳು ಮಾಡುವ ವಿಶ್ವಾಸದ ಗುಣಪಡಿಸುವಿಕೆ ಮತ್ತಿತರ ಅದ್ಭುತ ಕಾರ್ಯಗಳನ್ನು ನೋಡಿ ಅವುಗಳು ಪಿಶಾಚಕನ Spiritism, Christian Science, Mormonism ಮುಂತಾದವುಗಳ ಮೂಲಕ ನಡೆಸುವ ಗುಣಪಡಿಸುವಿಕೆಗೆ ಸರಿಸಮವಾಗಿದೆ ಎಂಬ ನಿರ್ಧಾರಕ್ಕೆ ಬರಬಹುದು.

ಒಂದು ವೇಳೆ, ಹೇಗೂ ಯಾರಾದರೂ ತಮ್ಮ ಸುವಾರ್ತಾ ಸೇವಕರನ್ನು ಅನ್ಯಜನರ ಬಳಿಗೆ ಕಳುಹಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸುತ್ತೇವೆಂದು ಹೇಳಿಕೊಂಡರೆ? ಇದು ಒಟ್ಟಾರೆಯಾಗಿ ಈ ಚಳುವಳಿಯು ನಮ್ಮ ಸರ್ವೇ ಸಾಮಾನ್ಯವಾದ ದೃಷ್ಟಿಕೋನವನ್ನು ಬದಲಿಸುವುದಿಲ್ಲವೆಂದು ನಾವು ಅವರಿಗೆ ಉತ್ತರಿಸುತ್ತೇವೆ. ( ಹೌದು, ದೇವರ ನಿಜವಾದ ಮಕ್ಕಳಲ್ಲಿ ಕೆಲವರು ಈ ಚಳುವಳಿಯಿಂದ "ಬಲೆಗೆ ಬೀಳುತ್ತಾರೆ' "ಬಂಧಿಸಲ್ಪಡುತ್ತಾರೆ' ಎಂದು ನಾವು ನಿರೀಕ್ಷಿಸುತ್ತೇವೆ ಮತ್ತು ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಆತನು ಇವರನ್ನು ಸಂಕೇತವಾದ ಬಾಬೇಲ್ ನಾಡಿನಿಂದ ಬಿಡುಗಡೆ ಗೊಳಿಸುತ್ತಾನೆಂದು ನಾವು ನಂಬುತ್ತೇವೆ). ನಮ್ಮ ಕರ್ತನ ದಿನದಲ್ಲಿನ ಆತನ ಆಸಕ್ತ ಸುವಾರ್ತಾ ಸೇವೆಯ ಪ್ರಯತ್ನಗಳ ಅಂದಾಜನ್ನು ನಮ್ಮ ಮನಸ್ಸಿಗೆ ತಂದುಕೊಳ್ಳೋಣ. ಆ ಕಾಲದ ಹಾಗೂ ದೇಶದ ಪರಿಶುದ್ಧ ಜನರು ಎಂದು ಹೇಳಿಕೊಳ್ಳುತ್ತಿದ್ದ ಫರಿಸಾಯರಿಗೆ ಆತನು "ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಭೂಮಿಯನ್ನೂ ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ. ಅವನು ಸೇರಿದ ಮೇಲೆ ಅವನನ್ನು ನಿಮಗಿಂತ ಎರಡರಷ್ಟಾಗಿ ಭ್ರಷ್ಟನನ್ನಾಗಿ ಮಾಡುತ್ತೀರಿ" (ಮತ್ತಾಯ 23:15) ಎಂದಿದ್ದಾನೆ. ವಿರೋಧಿಯ ತಪ್ಪು ಸಿದ್ಧಾಂತಗಳನ್ನು ಅನ್ಯಜನರಿಗೆ ನೀಡುವುದರಿಂದ ಅವರಿಗೆ ಯಾವ ಭಾಗ್ಯ ಫಲಿಸಬಹುದು? ಸಮಸ್ತವನ್ನು ಸರಿಪಡಿಸುವ (ಪುನರ್ವಶದ) ಕಾಲದ ಪ್ರಾರಂಭದವರೆಗೂ ತಲುಪಿದ ಕೆಲವರು ಹೆಚ್ಚು ಕಲಿಯದೇ ಹೋಗಬಹುದು. ಮೊದಲ ಆಗಮನಕಾಲದಲ್ಲಿ ಇರುವಂತೆಯೇ, ಇಂದು ಸಹಾ "ನೀವು ಯಾರ ಸೇವೆ ಮಾಡುತ್ತಿರೋ ಆತನ ದಾಸರಾಗಿದ್ದೀರಿ" ಹಾಗಾದರೆ, ಸೈತಾನನು ಕ್ರೈಸ್ತ ಪ್ರಪಂಚದ ನಾಮಾಂಕಿತ ಸಭೆಗಳಲ್ಲಿ ವಿಶೇಷವಾಗಿ ಅವರ ಪ್ರಸಂಗ ಪೀಠಗಳ ಮೂಲಕ ಒಳ್ಳೆಯ ವ್ಯವಹಾರ ಮಾಡುತ್ತಿದ್ದಾನೆ, ಮಹಾಯಾಜಕರುಗಳು, ಶಾಸ್ತ್ರಿಗಳು ಮತ್ತು ಇಂದಿನ ದೈವಶಾಸ್ತ್ರ ಪಂಡಿತರುಗಳು ಸತ್ಯವನ್ನು ಹಗೆಮಾಡಿದರೆ ಆಶ್ಚರ್ಯವಲ್ಲ– ಪ್ರಕಾಶವನ್ನು ಹಗೆಮಾಡಿ ಅದನ್ನು ಸಾಧ್ಯವಾದ ಎಲ್ಲಾ ವಿಧಗಳಿಂದ ವಿರೋಧಿಸುತ್ತಾರೆ –"ನನ್ನ ಪ್ರಜೆಗಳೇ, ಅವಳನ್ನು (ಬಾಬೇಲನ್ನು) ಬಿಟ್ಟುಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರ ರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18:4).

"ಸೈತಾನನು ಸೈತಾನನ್ನು ಹೊರಡಿಸಿದರೆ ತನ್ನಲ್ಲಿ ಬೇಧ ಹುಟ್ಟಿಸಿಕೊಂಡ ಹಾಗಾಯಿತು. ಹಾಗಾದರೆ ಅವನ ರಾಜ್ಯವು ಹೇಗೆ ಉಳಿದೀತು"? (ಮತ್ತಾಯ 12:26,27), ಅಜ್ಞಾನದ ಮುಸುಕನ್ನು ಮರೆಮಾಡಿದಾಗ – ಎಲ್ಲಾ ಸಂಗತಿಗಳ ಬಗ್ಗೆ ಸಾಮಾನ್ಯ ಜ್ಞಾನವು ಹೆಚ್ಚಿ ಹಿಂದಿನ ಮೂಢನಂಬಿಕೆಗಳನ್ನು ಮೊದಲಿನಂತೆ ಅನುಸರಿಸಲು ಅಸಾಧ್ಯವನ್ನಾಗಿ ಮಾಡುತ್ತದೆ. ನೂತನ ಭ್ರಮೆಗಳನ್ನು ಪರಿಚಯಿಸಬೇಕಾಗುತ್ತದೆ. ಇಲ್ಲವಾದಲ್ಲಿ ಜನರಿಗೆ ಸತ್ಯವು ದೊರೆತು ಸೈತಾನನಿಂದ ತಪ್ಪಿಸಿಕೊಳ್ಳುತ್ತಾರೆ. ಸೈತಾನನು ಒಬ್ಬ "ಬೆಳಕಿನ ದೇವದೂತ" ನಂತೆ ಬಿಡುವಿಲ್ಲದೆ ಇದ್ದಾನೆ–ವಿಕಾಸ ಸಿದ್ಧಾಂತದ ಬಗ್ಗೆ ಕೆಲವರಿಗೆ ಬೋಧಿಸುವವನಂತೆ; ಅನ್ಯಜನರಿಗೆ ನಿತ್ಯ ಯಾತನೆಯ, ಕೆಟ್ಟ ಸಮಾಚಾರಗಳ ಮಿಷನರಿಯಂತೆ; ತಾನು ಮಾನವ ಕುಲದ ಪುನಃಸ್ಥಾಪಕನೆಂದು ಘೋಷಿಸಿಕೊಂಡ ಎಲೀಯನಂತೆ; ಜನರ ದೈಹಿಕ ವ್ಯಾಧಿಗಳನ್ನು ನಿವಾರಿಸಿ ಅವರು ತಮ್ಮ ನೋವು ಮತ್ತು ವೇದನೆಗಳನ್ನು ನಿರಾಕರಿಸಲು ಒಡಂಬಡಿಸುವ ವಿಜ್ಞಾನಿ(?)ಯಂತೆ ಅವಿಶ್ರಾಂತ ಕಾರ್ಯಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿ ಕೊಂಡಿರುತ್ತಾನೆ. ಹೀಗಾಗಿ ಸತ್ಯಕ್ಕೆ ವಿರುದ್ಧವಾದ ಈ ಕಾರ್ಯಗಳಿಂದ ಜನರು ಸತ್ಯವನ್ನು ಸುಳ್ಳಿನಿಂದ ಬೇರೆಯಾಗಿ ಗ್ರಹಿಸಲು ಅಶಕ್ತರಾಗಿ ಬಿಡುತ್ತಾರೆ. ಈ

ರೀತಿಯಾಗಿ ಮಾಡುವುದರಿಂದ ತಾನು ಜಯ ಹೊಂದುತ್ತಿದ್ದೇನೆಂದು ಸೈತಾನನು ಊಹಿಸಿಕೊಳ್ಳಬಹುದು. ಆದರೆ ಆತನ ಮನೆಯು ದಢಂ ಎಂದು ಕುಸಿದು ಬೀಳುವುದು ಎಂದು ಕರ್ತನ ಮಾತುಗಳಲ್ಲಿ ಕಂಡುಕೊಳ್ಳುತ್ತೇವೆ. ಆತನು ಸುಧಾರಕನಂತೆ, ವೈದ್ಯನಂತೆ ಮಾಡುವ ಈ ಅಗತ್ಯತೆಗಳು ಆತನ ಪತನ ಸನ್ನಿಹಿತವಾಗುತ್ತಿದೆಯೆಂಬುದಕ್ಕೆ ಸಾಕ್ಷಿಗಳಾಗಿವೆ. ಆತನು ಇನ್ನು ಮುಂದೆ ಜನರನ್ನು ಮರಳುಗೊಳಿಸದಂತೆ ಅಧೋಲೋಕಕ್ಕೆ ದೊಬ್ಬಲ್ಪಟ್ಟು ಬಂಧಿಸಲ್ಪಡುವವರೆಗೆ (ಪ್ರಕಟನೆ 20:3) ಇದು ಮುಂದುವರೆಯದೇ ಇರುವುದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

## ನೀತಿವಂತಿಕೆಯನ್ನು ಪ್ರೀತಿಸಿರಿ – ದುಷ್ಟತನವನ್ನು ದ್ವೇಷಿಸಿರಿ

## Love Righteousness-Hate Iniquity

ಪ್ರಸ್ತುತ ಸಮಯದಲ್ಲಿ ನೂತನ ಸೃಷ್ಟಿಗಳೊಂದಿಗೆ ದೇವರ ವ್ಯವಹಾರಗಳನ್ನು ನಾವು ಅರ್ಥಮಾಡಿಕೊಳ್ಳುವುದಾದಲ್ಲಿ ಈ ದೈವಿಕ ಸಮತಲದಲ್ಲಿ ಇರುವವರೆಲ್ಲರೂ ಉತ್ತಮ ಉದ್ದೇಶಗಳನ್ನು ಹೊಂದಿರುವುದು ಮಾತ್ರವಲ್ಲ ಅರ್ಥಾತ್ ತಪ್ಪನ್ನು ಸರಿಪಡಿಸಿಕೊಳ್ಳುವುದನ್ನು ಮಾತ್ರವೇ ಆಯ್ಕೆಮಾಡಿಕೊಳ್ಳುವುದಲ್ಲ, ಇದರೊಂದಿಗೆ, ಹೆಚ್ಚಿನ ಅನುಭವಗಳ ಮೂಲಕ ಅವರು ಸರಿಯಾದವುಗಳ – ನೀತಿವಂತಿಕೆಯನ್ನು – ಸಮಗ್ರವಾಗಿ ಗ್ರಹಿಸಿಕೊಂಡು ಸ್ಪಷ್ಟವಾಗಿ ಮೆಚ್ಚಿಕೊಳ್ಳತಕ್ಕದ್ದು ಮತ್ತು ತಪ್ಪಾದವುಗಳ ಅನಾನುಕೂಲತೆ ಮತ್ತು ಗೊಂದಲಗಳನ್ನು ಪರಿಹರಿಸಿಕೊಳ್ಳತಕ್ಕದ್ದು. ಈ ಕಾರಣದಿಂದ ಮಿಲೇನಿಯಂ ಯುಗದ ಆ ನ್ಯಾಯ ತೀರ್ಪಿನ ದಿನದಲ್ಲಿ ದೇವದೂತರಿಗಿಂತಲೂ ಮಾನವ ಲೋಕದವರಿಗಿಂತಲೂ ಹೆಚ್ಚಾಗಿ ನೂತನ ಸೃಷ್ಟಿಗಳು ಅನೇಕ ಶೋಧನೆಗಳಿಗೂ, ಪರೀಕ್ಷೆಗಳಿಗೂ ತುತ್ತಾಗುತ್ತಾರೆ. ನಮಗೆ ತಿಳಿದಿರುವಂತೆ, ಸೈತಾನನು ಈ ಲೋಕವನ್ನು ಆಳಬೇಕೆಂಬ ದುರಾಲೋಚನೆ ಕಾರಣದಿಂದ ಮಾರ್ಗತಪ್ಪುವತನಕ ದೇವದೂತರುಗಳು ಯಾವ ಪರೀಕ್ಷೆಗೂ ಒಳಗಾಗಲಿಲ್ಲ. ಆದರೆ, ಆತನು ಪಾಪದಲ್ಲಿ ಬಿದ್ದು ಮಾನವರನ್ನು ಪತನಕ್ಕೆ ಕಾರಣನಾದುದು ತಮ್ಮ ಮೊದಲಿನ ಸ್ಥಾನವನ್ನು ಉಳಿಸಿಕೊಳ್ಳಲಾಗದೆ ಪಿಶಾಚಿಗಳಾದ ದೇವದೂತರುಗಳಿಗೆ ಮಾತ್ರವಲ್ಲ, ಉಳಿದೆಲ್ಲ ಪವಿತ್ರ ದೇವದೂತರುಗಳಿಗೂ ಪರೀಕ್ಷೆಯ ಸಂಧರ್ಭವಾಯಿತೆಂದು ಊಹಿಸಲು ನಮಗೆ ಎಲ್ಲಾ ಕಾರಣಗಳುಂಟು. ಇದು ಅವರಿಗೆ ಯೆಹೋವನ ಶಕ್ತಿಯ ಬಗ್ಗೆ ಅಥವಾ ಕೆಡುಕನ ಕ್ರಮ ಮತ್ತು ಅದನ್ನು ನಿಗ್ರಹಿಸಿ ನಾಶಪಡಿಸಲು ದೇವರ ಸುವ್ಯಕ್ತವಾದ ಶಕ್ತಿಯ ಕೊರತೆ ಇವುಗಳ ಬಗ್ಗೆ ಅವರಿಗಿರುವ ವಿಶ್ವಾಸದ ಪರೀಕ್ಷೆಯಾಗಿರಬೇಕು. ಇದನ್ನು ನೋಡಿ, ಪ್ರತಿಯೊಬ್ಬರೂ ಮತ್ತು ಎಲ್ಲರೂ ತಾವೂ ಸಹಾ ನಿರ್ಭಯವಾಗಿ ಪಾಪ ಮಾಡಬಹುದು ಮತ್ತು ಪ್ರಯತ್ನಿಸಬಹುದು ಎಂಬ ಶೋಧನೆಗೆ ಒಳಗಾಗಬಹುದಾಗಿದೆ; ಆದರೆ ಸತ್ಯವಾಗಿ ಅವರು ದೇವರಿಗೆ ನಿಷ್ಠೆಯಾಗಿರುವ ಅವರ ಹೃದಯಗಳು ನಮ್ರತೆ ಮತ್ತು ವಿಧೇಯತೆಗಳಲ್ಲಿ ಸರಿಯಾದ ಸ್ಥಿತಿಯಲ್ಲಿದೆ ಎಂಬುದಕ್ಕೆ ನಿದರ್ಶನವಾಗಿದೆ. ಅವರು ಕ್ರಿಸ್ತೇಸುವಿನ ಮೂಲಕ ದೇವರ ಯೋಜನೆಯ ಭವ್ಯವಾದ ಹೊರ ಕಾರ್ಯವನ್ನು ನೋಡಿದ್ದಾರೆ ಮತ್ತು ಯೆಹೋವನ ಜ್ಞಾನ, ಪ್ರೀತಿ, ನ್ಯಾಯ ಮತ್ತು ಶಕ್ತಿಯ ಮೇಲಿರುವ ತಮ್ಮ ಭರವಸೆಯನ್ನು ಕ್ರಿಸ್ತ ಯೇಸುವಿನ ಮತ್ತು ಮಹಿಮೆಯುಳ್ಳ ಸಭೆಯ ಮೂಲಕ ಸಮರ್ಥನೆಗೂ ಮೀರಿ ನೆರವೇರಿದ್ದನ್ನು ಸಧ್ಯದಲ್ಲಿಯೇ ಕಂಡುಕೊಳ್ಳುತ್ತಾರೆ.

ಪರಿಶುದ್ಧರಾದ ದೇವದೂತರುಗಳ ಈ ಪರೀಕ್ಷೆಗಳು ಮರಣ ಪರ್ಯಂತವಾಗಿ ಮಾನವ ಅಪರಿಪೂರ್ಣತೆ, ವಿಶ್ವಾಸ, ತಾಳ್ಮೆ ಮತ್ತು ಪ್ರೀತಿಯ ಪರೀಕ್ಷೆಗಳಲ್ಲಿ, ಉತ್ಸಾಹಗಳಲ್ಲಿ ನಿರಂತರವಾದ ಸಂಪರ್ಕವುಳ್ಳ ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾದವರಿಗೆ ಬರುವ ಪರೀಕ್ಷೆಗಳಷ್ಟು ನಿರ್ಣಾಯಕ ವಾಗಿರುವುದಿಲ್ಲ. ಅದೇ ರೀತಿಯಲ್ಲಿ ಸಹಸ್ರವರ್ಷ ಯುಗದಲ್ಲಿ ಈ ಲೋಕದ ಪರೀಕ್ಷೆಯು ನಿರ್ಣಾಯಕವಾಗಿ, ಸಂಪೂರ್ಣ ವಾದುದೂ ಆಗಿರುವಾಗ, ಯಾರಾರು ಕರ್ತನಿಗೆ ಮತ್ತು ನೀತಿಯುತ ತತ್ವಗಳಿಗೆ ತಮ್ಮ ಹೃದಯಗಳಲ್ಲಿ ನಿಷ್ಠೆಯುಳ್ಳವರಾಗಿದ್ದರೋ ಅಥವಾ ಆಗಿಲ್ಲವೋ ಎಂಬುದನ್ನು ನಿರೂಪಿಸುತ್ತದೆ. ಇದು ಪ್ರಸ್ತುತ ಯುಗದಲ್ಲಿ ನಡೆಯುವ ಸಭೆಯ ಪರೀಕ್ಷೆಗಳಿಗಿಂತ ಭಿನ್ನವಾಗಿದೆ. ಯಾಕೆಂದರೆ, ಅವರೊಂದಿಗೆ ನೀತಿವಂತಿಕೆಯ ಸಂಪೂರ್ಣ ಉಚಿತವಾದ ಮೆಚ್ಚುಗೆಯಲ್ಲಿ ಎಲ್ಲವೂ ಅನುಕೂಲಕರವೂ, ಸಂಪೂರ್ಣವಾದದ್ದೂ, ವಿಧೇಯತೆ ಯುಳ್ಳದ್ದೂ ಆಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಒಳಗಾಗುವರು." ಎಂದು ಅಪೋಸ್ತಲನು ಪ್ರಕಟಿಸಿದಂತೆ ಇಂದಿನ ಕಾಲದ ನೂತನ ಸೃಷ್ಟಿಗಳೂ ಹಿಂಸೆಗೊಳಗಾಗುತ್ತಾರೆ. ದೇವರಿಗೆ ಮತ್ತು ಆತನ ರಾಜ್ಯದ ತತ್ವಗಳಿಗೆ ನಿಷ್ಠೆಯುಳ್ಳವರಾಗುವಂತೆ ಇಚ್ಛಾಪೂರ್ವಕವಾಗಿ ಪಡುವ ಈ ಶ್ರಮೆ ಮತ್ತು ಅದು ವ್ಯಕ್ತಪಡಿಸುವ ವಿಶ್ವಾಸವು ವಿಶೇಷ ಗುಣಲಕ್ಷಣಗಳ ನಿದರ್ಶನಗಳಾಗಿ ದೇವರಿಗೆ ಅಂಗೀಕಾರವಾಗಿವೆ. ನೂತನ ಸೃಷ್ಟಿಗಳೊಂದಿಗಿನ ಇಂದಿನ ಆತನ ವ್ಯವಹಾರಗಳು ಈ ಗುಣಲಕ್ಷಣಗಳನ್ನು ಪವಿತ್ರತೆಯಲ್ಲಿ ಉನ್ನತವಾಗಿ ಸಮರ್ಪಕಪಡಿಸುವ ದೃಷ್ಟಿಕೋನ ಹೊಂದಿದೆ. ಇದು ಕರ್ತನ ಮತ್ತು ಆತನ ಸತ್ಯದ ಸಲುವಾಗಿ ಸಂತೋಷದಿಂದ ಅನುಭವಿಸುವ ಶ್ರಮೆ ಮತ್ತು ಅನಾನುಕುಲತೆಗಳಾಗಿವೆ. ಹೌದು, ಈ ಲೋಕದ ನೆಮ್ಮದಿ, ಸುಖ ಶಾಂತಿ, ಗೌರವ ಮತ್ತು ವರಮಾನಗಳನ್ನು ಕಡೆಗೆ ಜೀವವನ್ನು ಸಹಾ ತ್ಯಾಗಮಾಡಿ ಸತ್ಯದ ಸೇವೆಮಾಡಲು ಬಯಸುವುದಾಗಿದೆ.

ದೇವರ ಯೋಜನೆಯ ಈ ಜ್ಞಾನವನ್ನು ಸ್ಪಷ್ಟವಾಗಿ ಕಂಡುಕೊಳ್ಳದ್ದರಿಂದ ಚಿಕ್ಕಹಿಂಡಿನೊಂದಿಗಿನ ಕರ್ತನ ದೈವಾಯುಕ್ತ ವ್ಯವಹಾರಗಳ ವಿಷಯದಲ್ಲಿ ಅನೇಕರು ಗೊಂದಲಕ್ಕೀಡಾಗಿದ್ದಾರೆ. ಅಪ್ಪಟವಾದ ಉಕ್ಕಿನ ಸಾಧನವನ್ನು ಹದಗೊಳಿಸಲು ವಿಶೇಷವಾದ ಕಾವು ಮತ್ತು ಶೀತಲತೆಯ ಕಾರ್ಯವಿಧಾನಗಳು ಅವಶ್ಯವಿರುವಂತೆ ಕರ್ತನು ಮಾನವನ ಪುನರ್‌ಸ್ಥಾಪನೆ ಮುಂತಾದ ಮಹಾಕಾರ್ಯಗಳಲ್ಲಿ ತನ್ನ ಪ್ರತಿನಿಧಿಗಳಾಗಿ, ಸಾಧನಗಳನ್ನಾಗಿ ಉಪಯೋಗಿಸಲು ಕ್ಷಿಪ್ರವಾಗಿ ಸಿದ್ಧಮಾಡುತ್ತಿರು ವವರಿಗೆ ಇಂತಹ ಕಾವು ಮತ್ತು ಶೀತಲತೆಯ ಅನುಭವಗಳು ಬೇಕಾಗುತ್ತವೆ. ಕೆಟ್ಟದ್ದು ಎಂದಿಗೂ ಒಳ್ಳೆಯದಲ್ಲ ಮತ್ತು ಒಳ್ಳೆಯದು ಎಂದಿಗೂ ಯಾವುದೇ ಅರ್ಥದಲ್ಲಿ ಅಥವಾ ಯಾವುದೇ ಮಟ್ಟದಲ್ಲಿ ನೈತಿಕ ಕೆಟ್ಟತನಕ್ಕೆ ದೇವರು ಕಾರಣನಲ್ಲ.

ಪರಂತು, ಆತನ ಜ್ಞಾನ ಮತ್ತು ಶಕ್ತಿಗಳು ಎಂಥವುಗಳೆಂದರೆ ಆತನು ಒಳ್ಳೆಯತನಕ್ಕಾಗಿ ಅದರ ಪರಿಣಾಮಗಳನ್ನು ತಳ್ಳಿಹಾಕುವವನಾಗಿದ್ದಾನೆ. ಉದಾಹರಣೆಗಾಗಿ, ನಾವು ಕಂಡುಕೊಂಡಂತೆ, ದೇವರು ಸೈತಾನನನ್ನು ಪಾಪ ಮಾಡಗೊಳಿಸಲಿಲ್ಲ. ಆತನು ಅವನನ್ನು ಪರಿಪೂರ್ಣವಾಗಿ, ಪ್ರಮಾಣಿಕನನ್ನಾಗಿ, ಶುದ್ಧನನ್ನಾಗಿ ಸೃಷ್ಟಿಸಿದ್ದನು ಮತ್ತು ಆತನ ಮೇಲೆ ದೇವರು ಸುರಿಸಿದ ಒಂದು ಆಶೀರ್ವಾದವೆಂದರೆ ಸ್ವತಂತ್ರ ಚಿತ್ತದ ಆಶೀರ್ವಾದ. ಇದನ್ನು ಆತನು ದೇವರ ಕ್ರಮಕ್ಕೆ ವ್ಯತಿರಿಕ್ತವಾಗಿ ಕಾರ್ಯಗತಗೊಳಿಸಿದನು. ಹೀಗಾಗಿ ಒಮ್ಮೆ ಪವಿತ್ರ ದೇವದೂತನಾಗಿ ರಚನೆಗೊಂಡವನು ವಿರೋಧಿ ಅಥವಾ ಸೈತಾನನಾದನು. ತನ್ನ ವಿರೋಧಿಯನ್ನು ಕ್ಷಣಮಾತ್ರದಲ್ಲಿ ಧ್ವಂಸಪಡಿಸುವ ಶಕ್ತಿ ಸರ್ವಶಕ್ತ ದೇವರಿಗಿತ್ತು. ಆದರೆ ಆತನು ದೇವದೂತರಿಗೆ ಮಾತ್ರವಲ್ಲ ಮಾನವಕುಲಕ್ಕೂ ಒಳ್ಳೆಯದರ ಮತ್ತು ಕೆಟ್ಟದರ ಬಗ್ಗೆ, ಎರಡನೆಯದಾಗಿ ಭ್ರಷ್ಟತೆ ಮತ್ತು ಕಹಿಫಲಗಳಿಂದ ಉಂಟಾಗಲಿರುವ ಮಹಾ ಅನುಭವಗಳ ಪಾಠಗಳನ್ನು ಮುಂಚಿತವಾಗಿಯೇ ತಿಳಿದಿದ್ದನು. ಅದರಂತೆ ಮಾನವ ಜಾತಿಯಲ್ಲಿನ ಪಾಪದ ಬಗ್ಗೆಯೂ; ದೇವರು ಮುಂದೆ ಇದನ್ನು ಸಂಭವನೀಯವಾಗಿ ಮಾಡಲಿರುವಂತೆ ಈಗಲೇ ಯಾವ ಸಮಯದಲ್ಲಿಯಾದರೂ ಸಂಪೂರ್ಣವಾಗಿ ನಿವಾರಿಸಲು ಶಕ್ತನಾಗಿದ್ದಾನೆ. ಆದರೆ ಈ ಸಮಯದಲ್ಲಿ ಮಾನವನ ಕ್ರೋಧವನ್ನು ಯಾವರೀತಿಯಲ್ಲಿ ಆತನ ಮಹಿಮೆಗೆ ಉಪಯೋಗಿಸಿಕೊಳ್ಳಬಹುದೆಂದು ಆತನ ಜ್ಞಾನವು ಮುಂದಾಲೋಚಿಸಿತ್ತು. ಆದುದರಿಂದ ಪಾಪ ಮತ್ತು ಪಾಪಿಗಳ ಮೇಲೆ ದೇವರು ಗಳಿಸಲಿರುವ ದೇವರ ಅಂತಿಮ ವಿಜಯೋತ್ಸವದ ಬಗ್ಗೆ ಪ್ರಪಂಚದ ಯಾವುದೇ ಅರ್ಥದಲ್ಲಿ ದೇವರ ಮಕ್ಕಳು ಅಂಜಿಕೆಯುಳ್ಳವರಾಗಿರಬಾರದು. ಪ್ರಮುಖ ಪಿತೂರಿಗಾರನಾಗಲೀ ಅಥವಾ ಆತನ ಹೆಚ್ಚುಕಡಿಮೆ ಇಚ್ಛಾಪೂರ್ವಕ ಅಥವಾ ಭ್ರಮೆಗೊಂಡ ಹಿಂಬಾಲಕರಾಗಲೀ ಕೆಡುಕಾದ ಮಾರ್ಗದಿಂದ ಅಂತಿಮ ಪ್ರಭುತ್ವ ಸಾಧಿಸಲಾರರೆಂಬ ಭರವಸೆ ಅವರಲ್ಲಿರಬೇಕು. ಪಾಪವು ಮತ್ತು ಪಾಪಿಗಳು, ದೇವರ ನಿಷ್ಠಾವಂತರ ವಿರುದ್ಧದ ಅವರ ಹೋರಾಟದಲ್ಲಿ ಯಶಸ್ಸು ಸಾಧಿಸಬಹುದಾದರೂ ಈ ಮಹಾ ಧಾರ್ಮಿಕ ಸತ್ಯದ ಅಂತ್ಯವನ್ನು ದೇವರು ಬಹಿರಂಗಗೊಳಿಸುವುದನ್ನು ಸ್ವಲ್ಪ ಸಮಯದ ಮಟ್ಟಿಗೆ ಮುಂದುವರಿಸಿದ್ದಾನೆ.

ಈ ಪ್ರಪಂಚದಲ್ಲಿನ ಎಲ್ಲಾ ಕಾಯಿಲೆಗಳಿಗೂ, ಸಂಭವಿಸುವ ಮರಣಗಳಿಗೂ ಆ ಮಹಾ ವಿರೋಧಿಯನ್ನು ಹೆಚ್ಚುಕಡಿಮೆ ನೇರಹೊಣೆಯಾಗಿ ಕಂಡುಕೊಳ್ಳುವಾಗ ಮತ್ತು ಹಾಗೆಂದು ಆರೋಪಿಸುವಾಗ, ಆತನ ಮೂಲಕವಾಗಿಯೇ ಪಾಪವು ಮಾನವರ ಮನಸ್ಸಿನೊಳಗೆ ಪ್ರವೇಶಿಸಿ ಆತನನ್ನು ಕಳಂಕಿತಗೊಳಿಸಿ, ನಾಶಗೊಳಿಸಿರುವಾಗ ನಾವು ಇನ್ನೂ ಮಾನವರ ಬಗ್ಗೆಯೂ, ನೂತನ ಸೃಷ್ಟಿಗಳ ಬಗ್ಗೆಯೂ ಪಾಪದ ಸಲುವಾಗಿ ಎರಗಿಬಂದ ಶಾಪಗಳ ವಿಷಯದಲ್ಲಿ ಮಾನವನ ವಿವಿಧ ಅಂಶಗಳ ಬೋಧನೆ ಮತ್ತು ಶಿಕ್ಷಣಗಳನ್ನು ದೇವರು ರದ್ದು ಮಾಡಿದ್ದಾನೆ ಎಂಬುದನ್ನು ನಾವು ಮರೆಯಬಾರದು. ಕಡೇ ಪಕ್ಷ ಸಾಮಾನ್ಯ ಅರ್ಥದಲ್ಲಿ ಪ್ರಪಂಚವು, ನರಳುವ ಸಮಗ್ರ ವರ್ಗವು ಹೆಚ್ಚುತ್ತಿರುವ ಪಾಪ ಮತ್ತು ಪಾಪದ ಅನಿಷ್ಟ ಸಂಗತಿಗಳ ಬಗ್ಗೆ ಕಲಿಯುತ್ತಿದೆ; ಸಭೆಯ ಬಗ್ಗೆ, ನೂತನ ಸೃಷ್ಟಿಯ ಬಗ್ಗೆ, ಕ್ರಿಸ್ತನ ಶ್ರಮೆಯೊಂದಿಗೆ ಅವರ ಭಾಗವಹಿಸುವಿಕೆಯು ಮಾನವ ಕುಲದ ಉಳಿದವರೊಂದಿಗೆ ಶ್ರಮೆಯಲ್ಲಿ ಭಾಗವಹಿಸುವುದೂ ಸಾಮಾನ್ಯವಾಗಿದೆ ಎಂಬ ಅಭಿಪ್ರಾಯವನ್ನುಂಟುಮಾಡುತ್ತದೆ. ನಮ್ಮ ಕರ್ತನ ಪ್ರಕರಣದಲ್ಲಿ, ನಮ್ಮ ಕರ್ತನು ಮಾನವಕುಲದ ಮಹಾ ಯಾಜಕನಾಗಿದ್ದು, ನಮ್ಮ ಅಪರಾಧಗಳ ಭಾವನೆಗಳು ಆತನಿಗೆ ಮುಟ್ಟುತ್ತದೆಂದು ನಮಗೆ ವಿಶಿಷ್ಟವಾಗಿ ತಿಳಿಯಪಡಿಸಿರುವುದು ಸಮಯೋಚಿತವಾಗಿದೆ. ಆ ಮಹಾ ಯಾಜಕನ ದೇಹದ ಪ್ರತಿಯೊಂದು ಅಂಗದ ಬಗ್ಗೆಯೂ, ಅದರ ತಲೆಯಾದ ನಮ್ಮ ಕರ್ತನ ಬಗ್ಗೆಯೂ ಇದು ನಿಜವಾಗಿದೆ. ಕ್ರಿಸ್ತನ ಸಮಗ್ರದೇಹದಲ್ಲಿ ಯಾರೊಬ್ಬ ಸಹಾನುಭೂತಿಯಿಲ್ಲದ ಸದಸ್ಯನೂ ಇರಲಾರನೆಂಬುದು ಸತ್ಯ. ಎಲ್ಲರೂ ಅನುಭವಗಳನ್ನು ಹೊಂದಿರುತ್ತಾರೆ ಮತ್ತು ನ್ಯಾಯತೀರ್ಪಿನ ಮೂಲಕ ಸಮಸ್ತವನ್ನೂ ಸರಿಮಾಡುವ ಸಮಯದಲ್ಲಿ ಯಾವ ರೀತಿಯಲ್ಲಿ ಬಡ ಪ್ರಪಂಚದವರ ಮೇಲೆ ಅನುಕಂಪ ತೋರಬೇಕೆಂದು ಸಂಪೂರ್ಣವಾಗಿ ಅವರು ತಿಳಿದಿರುತ್ತಾರೆ. ದೇಹದಲ್ಲಿ ಪರಿಪೂರ್ಣನಾಗಿದ್ದ ನಮ್ಮ ಕರ್ತನು, ಆ ಕಾರಣದಿಂದ, ಆತನು ರೋಗಿಗಳನ್ನು ಗುಣಪಡಿಸಲು ತನ್ನ ಜೀವಶಕ್ತಿಯನ್ನು ವಿನಯೋಗಿಸುತ್ತಿರಲಿಲ್ಲವಾದರೆ ಆ ರೀತಿಯಲ್ಲಿ ಮನ ಕರುಗುತ್ತಿರಲಿಲ್ಲ. "ನಮ್ಮ ಬೇನೆಗಳನ್ನು ತಾನೇ ತೆಗೆದುಕೊಂಡು ನಮ್ಮ ರೋಗಗಳನ್ನು ಹೊತ್ತುಕೊಂಡನು" (ಮತ್ತಾಯ8:17) ಎಂಬ ಮಾತಿನಂತೆ ಆತನು ಜೀವಶಕ್ತಿಯ ಬದಲಾಗಿ ತಾನು ಗುಣಪಡಿಸಿದವರ ಬಲಹೀನತೆ ಮತ್ತು ಶ್ರಮೆಯ ಪ್ರಜ್ಞೆಯನ್ನು ತಾನೇ ಅನುಭವಿಸಿದನು. ಕ್ರಿಸ್ತನ ದೇಹದ ಅಂಗಗಳಾಗಿ ಕರೆಯಲ್ಪಟ್ಟವರಲ್ಲಿ ಸಾಮಾನ್ಯವಾಗಿ ಹಾಗೂ ಆಶ್ಚರ್ಯಕರವಾಗಿ ಕೊಡುವಂತಮಟ್ಟಿನ ದೈವೀಕಶಕ್ತಿ ಅವರಲ್ಲಿರಲಿಲ್ಲ; ಆದರೆ ಈ ಪ್ರಪಂಚದಲ್ಲಿನ ಸರ್ವೆ ಸಾಮಾನ್ಯ ಅನುಭವಗಳಲ್ಲಿ ಪಾಲುದಾರರಾಗುವಾಗ, ತಮ್ಮ ಸ್ವಂತ ಮಾನವ ಅಂಗಗಳ ನ್ಯೂನತೆಗಳ ಸಂಬಂಧವಾಗಿ, ಇವರುಗಳು ಸಹಾ ಜನಾಂಗದ ದೌರ್ಬಲ್ಯದದಿಂದ ಮನಮುಟ್ಟುವವರಾಗಿ ಅನಿಶ್ಚಿತವಾದ ಸಂಕಟಗಳ ಬಗ್ಗೆ ಅನುತಾಪವುಳ್ಳವರಾಗುತ್ತಾರೆ.

ಇದರಿಂದ ಕ್ರಿಸ್ತನ ದೇಹವು ಈ ಲೋಕದ ಎಲ್ಲಾ ಶೋಧನೆಗಳಿಂದ, ದೈಹಿಕ, ಸಮಾಜಿಕ ಮತ್ತು ಆರ್ಥಿಕ ಕಷ್ಟ ಸಂಕಟಗಳಿಂದ ಹೊರತಾಗಿ ಇರಬೇಕು ಎಂದು ಕೆಲವರು ಮುಂದಿಡುವ ನಿರೀಕ್ಷೆಗಳ ಆಲೋಚನೆಯ ಬಗ್ಗೆ ಯಾವುದೇ ಸಹಾನುಭೂತಿ ಇರುವುದಿಲ್ಲ ಎಂಬುದಾಗಿ ನಮಗೆ ತೋರಿಬರುತ್ತದೆ. ನಿಜವಾಗಿಯೂ, ಸಾಂಕೇತಿಕ ಇಸ್ರಾಯೇಲ್ಯರ ಬಗ್ಗೆ ಹೀಗೆಯೇ ಇತ್ತು. ಕರ್ತನ ಮತ್ತು ಆತನ ನಿಯಮಗಳಿಗೆ ಅವರ ನಿಷ್ಠೆ ಮತ್ತು ವಿಧೇಯತೆಗಳು ಎಲ್ಲಾ ಶೋಧನೆ ಮತ್ತು ಕಷ್ಟಸಂಕಟಗಳಿಂದ ವಿನಾಯತಿಹೊಂದುವ ದೆಸೆಯಲ್ಲಿಯೇ ಇದ್ದವು. ಆದರೆ, ನೂತನ ಸೃಷ್ಟಿಗಳ ವಿಷಯದಲ್ಲಿ ಈ ಸಂಗತಿಗಳು ಸಂಪೂರ್ಣವಾಗಿ ವಿರುದ್ಧವಾಗಿವೆ. ಯಾಕೆಂದರೆ, ಅವರು ಶರೀರಕ್ಕನುಸಾರವಾದ ಇಸ್ರಾಯೇಲ್ಯರಾಗಿರದೆ ಅಬ್ರಹಾಮನ ಆತ್ಮೀಕ ಸಂತತಿಯವರಾಗಿದ್ದಾರೆ. ಇಸ್ರಾಯೇಲಿನ ಪ್ರತಿಸಾಂಕೇತಿಕ ಆಶೀರ್ವಾದಗಳು ನೂತನ ಸೃಷ್ಟಿಗಳಿಗೆ ಆತ್ಮೀಕವಾಗಿರುತ್ತವೆ. ಎಲ್ಲಾ ಸಂಗತಿಗಳು ಒಟ್ಟಾಗಿ ಅವರ ಆತ್ಮೀಕತೆಯ ಅನುಕೂಲಕ್ಕಾಗಿಯೇ ನೆರವೇರುತ್ತವೆ. ಅವರು ವಿಶ್ವಾಸದಲ್ಲಿ ಮತ್ತು ವಿಧೇಯತೆಯಲ್ಲಿ ನೆಲೆಯಾಗಿರುವವರೆಗೂ

ದೇವರ ಆಶೀರ್ವಾದಗಳು ನಿಶ್ಚಿತವಾಗಿವೆ. ಆದುದರಿಂದ ಯಾವುದೇ ಕೆಡುಕುಗಳು ಅವರಿಗೆ ಹಾನಿ ಉಂಟುಮಾಡುವ ಎಲ್ಲಾ ಸಂಗತಿಗಳಿಂದ ರಕ್ಷಣೆಹೊಂದುವಂತೆ ಅವರನ್ನು ಗುಪ್ತವಾಗಿಟ್ಟಿರುವ ವಾಸಸ್ಥಳದ ಬಳಿಗೆ ಬರಲಾರವು. ಆದರೂ ಈ ಆತ್ಮೀಕ ಸಂಬಂಧಗಳ ಬಗ್ಗೆ ಅವರ ಮೆಚ್ಚುಗೆಯು ನಿರಂತರವಾದ ಪರೀಕ್ಷೆಗೆ ಒಳಗಾಗುತ್ತದೆ. ಸ್ವಾಭಾವಿಕ ವಾಗಿರುವುಗಳಿಗಿಂತ ಆತ್ಮೀಕವಾಗಿರುವುಗಳನ್ನು ಹೆಚ್ಚಾಗಿ ಮೆಚ್ಚಿಕೊಳ್ಳುತ್ತಾರೋ ಇಲ್ಲವೋ ಎಂಬುದರ ಬಗ್ಗೆ ನಿರಂತರವಾಗಿ ಪರೀಕ್ಷಿಸಲ್ಪಡುತ್ತಾರೆ. ಅದರಿಂದಾಗಿ ನೂತನ ಸೃಷ್ಟಿಗಳ ಲೌಕಿಕ ತ್ಯಾಗಗಳು ಪೂರ್ಣಗೊಂಡ ಮೇಲೆ ಅಂತಿಮವಾಗಿ ಅವರು ಪರಿಪೂರ್ಣರಾಗಿ ಆತ್ಮೀಕ ವಿಷಯಗಳನ್ನು ಅತಿಹೆಚ್ಚಿನ ರೀತಿಯಲ್ಲಿ ಅನುಸರಿಸಿ ಸಂತೋಷಿಸುತ್ತಾರೆ.

ಆದುದರಿಂದ, ಕ್ರಿಸ್ತಯೇಸುವಿನಲ್ಲಿ ನೂತನ ಸೃಷ್ಟಿಗಳು ತಮಗೆ ಅನೇಕ ತೀವ್ರತರ ಪರೀಕ್ಷೆಗಳಿವೆ ಎಂದು ಕಂಡುಕೊಳ್ಳುವಾಗ, ಯಾವ ದೆಸೆಯಲ್ಲಿ ಅವುಗಳು ತಮಗೆ ಬರುತ್ತವೆ ಎಂದು ಅವರು ಅವುಗಳನ್ನು ನಿಷ್ಠಾವಂತಿಕೆಯ ನಿದರ್ಶನಗಳನ್ನಾಗಿ ಪರಿಗಣಿಸಿಕೊಳ್ಳಬೇಕು – ದೇವರು ತಮ್ಮನ್ನು ತನ್ನ ಮಕ್ಕಳೆಂದು ಪರಿಗಣಿಸುವ ಕುರುಹುಗಳೆಂದು ಮತ್ತು ಅವರನ್ನು ಅವರ ಒಡಂಬಡಿಕೆಯ ಸಂಬಂಧದ ಮೇರೆಗೆ ಪರೀಕ್ಷೆಗಳಿಗೆ ಒಳಪಡಿಸಲಾಗುವುದೆಂದೂ, ಅವರುಗಳನ್ನು ಮುಂಬರಲಿರುವ ಮಹಿಮೆಗೆ ಸರಿಹೊಂದುವಂತೆ ಸಿದ್ಧಪಡಿಸುವುದೂ ಆಗಿವೆ ಎಂದು ತಿಳಿದುಕೊಳ್ಳಬೇಕು. ಆದುದರಿಂದ, ದೇವರು ಅಂಥವರಿಗೆ ದುರ್ದೆಶೆಗಳನ್ನು ಉಂಟುಮಾಡಲು ಅನುಮತಿಸುವುದಾದರೆ, ಲೋಕಕ್ಕೆ ಸಂಭವಿಸುವಂತೆ ಅವುಗಳು ತಮಗೂ ಸಂಭವಿಸುತ್ತದೆಂದು ತಿಳಿಯದಿರಲಿ. ಈ ಲೋಕವು ಮರಣದ ದಂಡನೆಯಲ್ಲಿದೆ ಮತ್ತು ಅನೇಕ ಆಕಸ್ಮಿಕಗಳಿಗೆ ಮತ್ತು ಬದಲಾವಣೆಗಳಿಗೆ ತುತ್ತಾಗಲಿದೆ. ಇವುಗಳೊಂದಿಗೆ ನಮ್ಮ ಕರ್ತನು ಮಾಡುವಂತಾದ್ದು ಯಾವುದೂ ಇಲ್ಲ. ಇದನ್ನು ನಮ್ಮ ಕರ್ತನು – "ಸಿಲೋವಾಮಿನಲ್ಲಿ ಬುರುಜು ಬಿದ್ದು ಸತ್ತ ಆ ಹದಿನೆಂಟು ಮಂದಿಯು ಯೆರೂಸಲೇಮಿನಲ್ಲಿ ವಾಸವಾಗಿರುವ ಮತ್ತು ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರೆಸಿದನು ಇವರು ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳೆಂದು ಭಾವಿಸುತ್ತೀರೋ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ " (ಲೂಕ 13: 4) ಎಂದು ಹೇಳುವುದರ ಮೂಲಕ ನಮಗೆ ವಿವರಿಸಿದ್ದಾನೆ. (ಲೂಕ 13:1–5). ದೇವರು ಮನುಷ್ಯರ ಕೋಪ ಮತ್ತು ಸೈತಾನನ ಕ್ರೋಧ ಇವೆರಡನ್ನೂ ಮಾನವ ಲೋಕದ ಕೆಲವೊಂದು ಇತಿಮಿತಿಗಳಿಗನುಸಾರವಾಗಿ ಅನುಮತಿಸುತ್ತಾನೆ. ಆದರೆ ಆತನು ಆಯ್ದುಕೊಂಡ ಸಭೆಯ ವಿಷಯದಲ್ಲಿ ಇದು ಭಿನ್ನವಾಗಿದೆ. ಆಕಸ್ಮಿಕ ರೀತಿಯಲ್ಲಿ ಅವರಿಗೆ ಏನೂ ಸಂಭವಿಸದು. "ಕರ್ತನು ತನ್ನ ಭಕ್ತರ ಮರಣವನ್ನು ಅಲ್ಪವೆಂದೆಣಿಸುವುದಿಲ್ಲ" (ಕೀರ್ತನೆ 116:15) " ನಿಮ್ಮ ತಲೆಕೂದಲುಗಳು ಸಹಾ ಎಣಿಕೆಯಾಗಿವೆ "(ಮತ್ತಾಯ 10:30) ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದು. ಪಿಲಾತನು ಯೇಸುವನ್ನು– "ನನ್ನ ಸಂಗಡಲೂ ನೀನು ಮಾತನಾಡು ವುದಿಲ್ಲವೋ? ನಿನ್ನನ್ನು ಬಿಡಿಸುವ ಅಧಿಕಾರವೂ, ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವೂ ನನಗೆ ಉಂಟೆಂಬುದು ನಿನಗೆ ಗೊತ್ತಿಲ್ಲವೋ"? ಎಂದು ಪ್ರಶ್ನಿಸಿದಾಗ ಯೇಸು "ಮೇಲಣಿಂದ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ" ಎಂದು ಉತ್ತರಿಸುತ್ತಾನೆ (ಯೋಹಾನ 19:10). ಕ್ರಿಸ್ತನ ದೇಹದ ಪ್ರತಿಯೊಬ್ಬ ಸದಸ್ಯರ ಬಗ್ಗೆಯೂ ಅವರು ನೂತನ ಸೃಷ್ಟಿಗಳಾಗಿ ಆತ್ಮನಿಂದ ಜನಿಸಿದ ಕ್ಷಣದಿಂದ ಇದು ನಿಜವಾಗಿದೆ. ನೂತನ ಸೃಷ್ಟಿಗಳಿಗೆ ಹತ್ತಿರ ಹೊಂದಿಕೊಂಡಿರುವ ಕೆಲವರ ಜೀವಿತ ಹಾಗೂ ಹಿತಾಸಕ್ತಿಯುಳ್ಳವರಿಗೂ ಕೆಲವೊಮ್ಮೆ ದೈವಕೃಪೆ ವ್ಯಾಪಿಸುತ್ತದೆ. ಎಂದು ನಂಬಲು ನಮಗೆ ಎಲ್ಲಾ ಕಾರಣಗಳುಂಟು. ಹಾಗಾದರೆ, ನೂತನ ಸೃಷ್ಟಿಗಳು ಘೋರವಾದ ಪರೀಕ್ಷೆಗಳನ್ನು ಅನುಭವಿಸುವುದಾದರೆ, ಇವುಗಳನ್ನು ವಿಚಿತ್ರವಾದವುಗಳೆಂದು, ಯಾವುದೋ ಅಪರೂಪದ ಸಂಗತಿಗಳು ನಮಗಾಗುತ್ತಿವೆ ಎಂದು ಆಲೋಚಿಸಬಾರದು. ಆದರೆ, ಅನುರೂಪವಾದ ಪರೀಕ್ಷೆಗಳು ಕ್ರಿಸ್ತನ ಶರೀರದ ತಲೆಯಿಂದ ಕಾಲಿನವರೆಗಿನ ಎಲ್ಲಾ ಸದಸ್ಯರುಗಳಿಗೂ ಉಂಟಾಗುತ್ತವೆ. ಇದು ಕಾಲಿನ ವರ್ಗದ (Feet Class) ಕಡೆಯ ಸದಸ್ಯನು ಪರೀಕ್ಷೆಗೊಳಗಾಗಿ, ಹೊಳಪು ಪಡೆದು, ಅಂಗೀಕರಿಸಲ್ಪಟ್ಟು ಮಹಿಮೆಹೊಂದುವವರೆಗೂ ನೆರವೇರುತ್ತಲೇ ಇರುತ್ತದೆ. ನಂತರದಲ್ಲಿ ಇವರು ವಿರೋಧ ಸ್ವಭಾವಕ್ಕೆ ಒಳಗಾಗುವುದಾದರೆ, ಮನೆಯಲ್ಲಿಯೂ, ಹಿಂದಿನ ಸ್ನೇಹಿತರುಗಳಿಂದಲೂ, ನೆರೆಹೊರೆಯವರಿಂದಲೂ ಅಥವಾ ನಾಮಾಂಕಿತ ಸಭೆಯವರಿಂದಲೂ ಕಾನೂನುಕ್ರಮಗಳಿಗೆ ತುತ್ತಾಗುವುದಾದರೆ, ಅಥವಾ ಅವುಗಳು ಆರ್ಥಿಕ ಮುಗ್ಗಟ್ಟಿನ ಅಥವಾ ಬಡತನದ ರೂಪದಲ್ಲಿ ಬರುವುದಾದರೆ ಅಥವಾ ಅವುಗಳು ಕಾಯಿಲೆಗಳ, ವೇದನೆಗಳ ಮತ್ತು ದೈಹಿಕ ಅವಘಡ ಮುಂತಾದ ಸ್ವಭಾವದಲ್ಲಿ ಬರುವುದಾದಲ್ಲಿ, ಅದು ಹೇಗೆಯೇ ಇರಲಿ, ದೇವ ಜನರು ಅವರ ಎಲ್ಲಾ ಹಿತಾಸಕ್ತಿಗಳ ಬಗ್ಗೆ ದೇವರ ಪ್ರೀತಿ, ದೈವಾಯುಕ್ತ ಪಾಲನೆ ಇವುಗಳ ಬಗ್ಗೆ ತೃಪ್ತರೂ, ಪ್ರಜ್ಞಾವಂತರೂ ಆಗಿರತಕ್ಕದ್ದು. ಈ ಬಗ್ಗೆ ಸಂಪೂರ್ಣವಾದ ಭರವಸೆ ಹೊಂದಿರುವುದು ನಂಬಿಕೆಯ ಪರೀಕ್ಷೆಯ ಒಂದು ಭಾಗವಾಗಿದೆ. ನಾವುಗಳು ದೇವರ ಮಕ್ಕಳು, ಆತನ ಬಾಧ್ಯಸ್ಥರೂ ಎಂದು ದೇವರಿಂದ ಭರವಸೆ ಪಡಕೊಳ್ಳುವುದು, ಮತ್ತು ದೇವರ ಕಣ್ತಪ್ಪಿಸುವಿಕೆ ಬಗ್ಗೆ ತಿಳಿಸಲ್ಪಡುವುದು, ಅದೇ ಸಮಯದಲ್ಲಿ ಸಂಕಟಗಳಿಗೆ ತುತ್ತಾಗಲು ಅನುಮತಿ ಹೊಂದುವುದು ಇವುಗಳು ಕೇವಲ ನೋಟದಲ್ಲಿ ಮಾತ್ರವಲ್ಲ ವಿಶ್ವಾಸದಲ್ಲಿ ನಡೆಯಬೇಕಾದವರು ಅಂತಿಮವಾಗಿ ಜಯಶಾಲಿಗಳೆಂದು ಅಂಗೀಕರಿಸಲ್ಪಡಬೇಕಾದರೆ ಉಂಟಾಗುವ ವಿಶ್ವಾಸದ ಕಠಿಣ ಪರೀಕ್ಷೆಗಳಾಗಿವೆ. ಆದುದರಿಂದ ನಾವು ನಮಗೆ ದೈವಾಯುಕ್ತವಾಗಿ ಒದಗಿಬರುವ ಯಾವುದೇ ಲಾಭ ಅಥವಾ ತೊಂದರೆಗಳನ್ನು ಪ್ರೀತಿ, ನಂಬಿಕೆ ಮತ್ತು ಭರವಸೆಯೊಂದಿಗೆ ಪಡೆದುಕೊಳ್ಳೋಣ ಮತ್ತು ಅವುಗಳಿಂದ ಪಾಠ ಕಲಿತುಕೊಂಡು ಲಾಭ ಹೊಂದಿಕೊಳ್ಳೋಣ.

ಪರಲೋಕ ಮತ್ತು ಲೌಕಿಕ ಜೀವನದ ಎಲ್ಲಾ ಹಿತಾಸಕ್ತಿಗಳಲ್ಲಿ ದೈವ ಪರಿಪಾಲನೆಯ ಗ್ರಹಿಕೆಯು ನಮ್ಮನ್ನು ನಮ್ಮ ಐಹಿಕ ಮತ್ತು ಪರಲೋಕದ ಸಂಗತಿಗಳಲ್ಲಿ ಯಾವುದೇ ಉದಾಸೀನತೆಗೆ ನಡಿಸಕೂಡದು. ಇದಕ್ಕೆ ವ್ಯತಿರಿಕ್ತವಾಗಿ, ನಾವು ಸಮಾಜಿಕ, ಆರ್ಥಿಕ ಮತ್ತು ನಮ್ಮ ಆರೋಗ್ಯದ ವಿಷಯಗಳಲ್ಲಿನ ಎಲ್ಲಾ ಸೌಕರ್ಯಗಳು, ಅವಕಾಶಗಳು ಮತ್ತು ಜವಾಬ್ದಾರಿಗಳಲ್ಲಿ ನಾವು ಮನೆವಾರ್ತೆಯವರಾಗಿದ್ದೇವೆ ಎಂಬುದನ್ನು

ಮರೆಯಬಾರದು. ಕಾಣಿಸಿಕೊಳ್ಳಬಹುದಾದ ಯಾವುದೇ ಸಾಮಾಜಿಕ ಒಡಕನ್ನು ಗುಣಪಡಿಸಲು ನಮ್ಮಿಂದಾದುದನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ನಾವು ವಿವರಣೆಗಳನ್ನು ನೀಡುವಲ್ಲಿ ಕರುಣೆಯೂ, ವಿವೇಚನೆಯೂ ಉಳ್ಳವರಾಗಿರಬೇಕು ಮತ್ತು ನಮ್ಮಉದ್ದೇಶ ಅಥವಾ ಅಭಿಪ್ರಾಯಗಳಬಗ್ಗೆ ಯಾವುದೇ ತಪ್ಪು ತಿಳುವಳಿಕೆಗೂ ಅವಕಾಶವಿಲ್ಲದಂತೆ ನಮ್ಮ ಅಧಿಕಾರದಲ್ಲಿರುವುದೆಲ್ಲವನ್ನೂ ಸಮಂಜಸವಾಗಿ ನಿರ್ವಹಿಸತಕ್ಕದ್ದು. ಅಂಧವಿಶ್ವಾಸ ಮತ್ತು ಧರ್ಮಾಂಧತೆಗಳಿಂದ ಕೂಡಿದ್ದು ಎಂದು ಕಂಡುಬರುವವುಗಳನ್ನು ನಾವು ಬುದ್ಧಿವಂತಿಕೆಯಿಂದ ನಿವಾರಿಸಲು ಬಯಸಬೇಕು ಮತ್ತು ಈ ರೀತಿಯಲ್ಲಿ ನಮ್ಮ ದೇವರನ್ನು, ಆತನ ಗುಣಲಕ್ಷಣಗಳನ್ನು, ಆತನ ಗ್ರಂಥ ಮತ್ತು ಆತನ ಸಭೆಯ ಬಗ್ಗೆ ಇತರರಿಗೆ ಪ್ರಶಂಸಿಸಬೇಕು. ಈ ರೀತಿಯಲ್ಲಿ ನಮ್ಮ ಬೆಳಕನ್ನು ಪ್ರಕಾಶಿಸಲು ಬಿಡಬೇಕು. ಆರ್ಥಿಕ ಸಂಗತಿಗಳಲ್ಲಿ ನಾವು ನಮ್ಮ ದೂರದೃಷ್ಟಿಯ ಮತ್ತು ಮಿತವ್ಯಯದ ಹಿಡಿತವನ್ನು ಪ್ರಯೋಗಿಸಬೇಕು ಮತ್ತು ದೇವರಿಲ್ಲವೇನೋ, ಎಲ್ಲವುಗಳೂ ನಮ್ಮ ಶ್ರಮದಮೇಲೆ ಆಧಾರಗೊಂಡಿದೆಯೋ ಎಂಬಂತೆ ವ್ಯವಹಾರದಲ್ಲಿ ಯಾವುದೇ ಆಲಸ್ಯ ತೋರಬಾರದು. ಹೀಗಿದ್ದಾಗ್ಯೂ ನಮ್ಮ ಹೃದಯಗಳಲ್ಲಿ ಮತ್ತು ವಿಶ್ವಾಸದ ಮನೆಯವರೊಡನೆ ಈ ವಿಷಯವಾಗಿ ಚರ್ಚಿಸುವಾಗ ನಾವು ಕರ್ತನ ಮೇಲಿನ ನಮ್ಮ ಭರವಸೆಯನ್ನು ವ್ಯಕ್ತಪಡಿಸಬೇಕು. ನಾವು ಆತನವರಾಗಿರುವಾಗ ನಮ್ಮ ಹಿತಾಸಕ್ತಿಗಳೆಲ್ಲವೂ ಆತನ ಪಾಲನೆಯ ರಕ್ಷಣೆಗೆ ಒಳಗಾಗಿದೆ. ಅನಂತರದಲ್ಲಿ ನಮ್ಮ ವಿವೇಕದ ಉತ್ತಮ ಕಾರ್ಯಗತ ಹಾಗೂ ದೂರದೃಷ್ಟಿಯ ಹೊರತಾಗಿಯೂ, ಬಡತನ ಅಥವಾ ಆರ್ಥಿಕ ನಷ್ಟವು ಉಂಟಾದಲ್ಲಿ, ನೂತನ ಸೃಷ್ಟಿಗಳಾದ ನಮಗೆ ಹೆಚ್ಚಿನ ಅಂತಹ ಅನುಭವಗಳು ನಮಗೆ ಉತ್ತಮವಾದವುಗಳೆಂದು ನಮ್ಮ ಪರಲೋಕದ ತಂದೆಯು ಕಂಡುಕೊಂಡಿದ್ದಾನೆಂದು ಎಣಿಸಬೇಕು. ನಮ್ಮ ಎಲ್ಲಾ ವ್ಯವಹಾರಗಳಲ್ಲಿ ಆತನ ನಡೆಸುವಿಕೆ ಮತ್ತು ನಮ್ಮ ಅನುಭವಗಳು ಎಂತೇ ಇರಲಿ ನಾವು ಆತನ ಆಶೀರ್ವಾದದಾಯಕ ಮೇಲ್ವಿಚಾರಿಕೆಯನ್ನು ಗ್ರಹಿಸಬೇಕು. ಅದೇ ರೀತಿಯಲ್ಲಿ ನಮ್ಮ ಆರೋಗ್ಯದ ವಿಷಯಗಳಲ್ಲಿ, ನಮಗೆ ಯಾವುದೇ ಕಾಯಿಲೆಯು ಬರುವಲ್ಲಿ ಈ ಮರ್ತ್ಯ ಶರೀರದ ಬಗ್ಗೆ ನಮ್ಮ ಯುಕ್ತವಾದ ಮನೆವಾರ್ತೆತನವು ನಮ್ಮ ಜ್ಞಾನ ಮತ್ತು ನಿರ್ಣಯಗಳಿಗನುಸಾರವಾಗಿ ಸೂಕ್ತವಾದ ನಿವಾರಣೋಪಾಯಗಳನ್ನು ಪ್ರಯೋಗಿಸಲು ನಮ್ಮ ಚೈತನ್ಯವನ್ನು ವ್ಯಯಿಸುತ್ತೇವೆ. ನಮ್ಮ ಪ್ರಯತ್ನಗಳು ಸಫಲವಾದಲ್ಲಿ ನಮ್ಮ ಹೃದಯದ ಅಂಗೀಕಾರವು ದೇವರಿಗೆ ಸಮರ್ಪಿತವಾಗಬೇಕೇ ಹೊರತು, ಕೇವಲ ಔಷಧಿಗಳಿಗಾಗಿ ಅಲ್ಲ. ಅವುಗಳು ಅಸಫಲವಾದಲ್ಲಿ, ನಾವು ಆತನ ಶಕ್ತಿಯ ಬಗ್ಗೆ ಅನುಮಾನಪಡಬಾರದು. ಬದಲಾಗಿ ನಾವು ಸಾಗುತ್ತಿರುವ ಪರೀಕ್ಷೆಗಳ ಸಂಬಂಧವಾಗಿ ಮುಂದಿನ ಆಶೀರ್ವಾದಗಳನ್ನು ಎದುರುನೋಡಬೇಕು. ನಿಜವಾಗಿಯೂ ಪ್ರತಿಯೊಂದು ಸಂಕಟ ಮತ್ತು ವಿಪತ್ತುಗಳು ಬರುವಾಗ, ನೂತನ ಸೃಷ್ಟಿಗಳು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ತಮ್ಮ ದೃಢಪ್ರಯತ್ನಗಳನ್ನು ಮುಂದುವರಿಸುವುದರೊಂದಿಗೆ ತಮ್ಮ ಹೃದಯಗಳನ್ನು ಭರವಸದಿಂದಲೂ, ವಿಶ್ವಾಸದಿಂದಲೂ ಕರ್ತನ ಕಡೆಗೆ ಆತುಕೊಳ್ಳಬೇಕು, ತಮ್ಮ ಅನುಭವಗಳಿಂದ ಯಾವ ಪಾಠವನ್ನು ಕಲಿತುಕೊಳ್ಳಬೇಕೆಂದೂ, ಈ ಕಲಿಯುವಿಕೆಯು ನಮ್ಮ ತಪ್ಪು ಕಾರ್ಯಗಳ ದಂಡನೆಯನ್ನು ಸರಿಪಡಿಸುತ್ತವೆಯೋ ಇಲ್ಲವೋ ಅಥವಾ ಇದು ಕುರುಬನ ಹೆಜ್ಜೆಜಾಡಿನಿಂದ ಹಾದಿತಪ್ಪಿದ ಕುರಿಗಳನ್ನು ಸರಿಯಾದ ಮಾರ್ಗಕ್ಕೆ ತರಲು ಉಪಯೋಗಿಸುವ ಬೆತ್ತವೂ, ದಂಡವೂ ಆಗಿದೆಯೋ ಎಂಬುದನ್ನು ತಿಳಿಯಲು ಅಪೇಕ್ಷಿಸಬೇಕು."ನಿನ್ನ ದೊಣ್ಣೆಯೂ, ನಿನ್ನ ಕೋಲೂ ನನಗೆ ಧೈರ್ಯಕೊಡುತ್ತವೆ" (ಕೀರ್ತನೆ 23:4) ಕರ್ತನ ಜನರು ಕೇವಲ ಸರಾಸರಿ ಮೊತ್ತದ ಆರೋಗ್ಯ, ಆರ್ಥಿಕ ಮತ್ತು ಸಮಾಜಿಕ ಅಭಿವೃದ್ಧಿಗಳ ಮೇಲೆ ಆತುಕೊಂಡವರಾಗಿರದೆ ಎಲ್ಲಾ ಸಂಧರ್ಭಗಳಲ್ಲಿಯೂ ಮತ್ತು ಎಲ್ಲಾ ಪರಿಸ್ಥಿತಿಗಳಲ್ಲಿಯೂ ದೇವರ ಶಾಂತಿಯಲ್ಲಿ ಆನಂದಪಡುವವರಾಗಿದ್ದಾರೆ ಮತ್ತು ಕುರುಬನ ದೊಣ್ಣೆಯಲ್ಲಿಯೂ, ಕೋಲಿನಲ್ಲಿಯೂ ಹೃದಯ ಪೂರ್ವಕವಾಗಿ ಸಂತೋಷಿಸಲು ಶಕ್ತರಾಗಿರುತ್ತಾರೆ. ಹಳೆಯ ಪ್ರವಾದಿಗಳೊಂದಿಗೆ ಹೆಚ್ಚಿನ ನೂತನ ಸೃಷ್ಟಿಗಳು "ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿಹೋಗುತ್ತಿದ್ದೆನು" (ಕೀರ್ತನೆ 119:67) ಎಂದು ಹೇಳಬಹುದು. ಅವರಲ್ಲಿ ಅನೇಕರು ಇಂತಹ ಕಷ್ಟಾನುಭವದಲ್ಲಿ ಮೇಲಾದ ಆಶೀರ್ವಾದಗಳಿವೆ ಎಂದು ಕಲಿತುಕೊಂಡಿದ್ದರು.

ಸಭೆ ಮತ್ತು ಅದರ ಮೇಲಿನ ಕರ್ತನ ಪಾಲನೆಯ ಬಗ್ಗೆ "ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ, ಸಮಸ್ತ ರೋಗಗಳನ್ನು ವಾಸಿಮಾಡುವವನೂ ಆಗಿದ್ದಾನೆ" (ಕೀರ್ತನೆ : 103:3) ಎಂದು ಬರೆದದೆ. ಇದನ್ನು ದೈಹಿಕ ಪರಿಸ್ಥಿತಿಯ ವಿಷಯದಲ್ಲಿ ಸುವಾರ್ತಾ ಸಭೆಗೆ ಅನ್ವಯಿಸುವ ಯಾವುದೇ ಪ್ರಯತ್ನವೂ ಅವಶ್ಯಕವಾಗಿ ಕುಂಟುನೆಪ ಇಲ್ಲವೇ ಬಲಹೀನತೆ ಎನಿಸುತ್ತದೆ. ಸಭೆಯ ತಲೆಯಿಂದ ಕಾಲಿನವರೆಗಿನ ಕಡೆಯ ಸದಸ್ಯರ ದೈಹಿಕ ಕಾಯಿಲೆಗಳನ್ನು ಗುಣಪಡಿಸುವಲ್ಲಿ ಕರ್ತನಿಗೆ ಸಂತೋಷವಿಲ್ಲವೆಂದು ಯಾರಿಗೆ ತಿಳಿಯದು? ಅನೇಕಾನೇಕ ಭಕ್ತಜನರು ತಮ್ಮ ದೈಹಿಕ ಅಸ್ವಸ್ಥತೆಯಿಂದಾಗಿ ಮರಣಿಸಿದ್ದರೆಂಬುದು ಯಾರಿಗೆ ಗೊತ್ತಿಲ್ಲ? ವೈದ್ಯಕೀಯ ವಿಜ್ಞಾನದ ಪ್ರಕಾರ, ನಮ್ಮ ಪ್ರೀತಿಯ ವಿಮೋಚಕನು ದೈಹಿಕವಾಗಿ ಪೂರ್ಣ ಸಮರ್ಪಕನಾಗಿದ್ದರೂ ವಿಜ್ಞಾನಕ್ಕೆ ತಿಳಿಯದಿರದ ಕಾಯಿಲೆಗೆ ತುತ್ತಾಗಿ ಗೆತ್ಸೆಮನೆ ತೋಟದಲ್ಲಿ ರಕ್ತಬಿಂದುಗಳ ಬೆವರನ್ನು ಸುರಿಸಿದನು. ಅದೇ ವಿಜ್ಞಾನದ ಪ್ರಕಾರ ಮತ್ತು ಎಲ್ಲಾ ಸತ್ಯಾಂಶಗಳಿಗೊಪ್ಪುವಂತೆ, ದೈಹಿಕವಾಗಿ ಪೂರ್ಣ ಸಮರ್ಪಕ ವಾಗಿದ್ದಾತನು ಆತನೊಂದಿಗೆ ಕ್ರೂಜೆಗೆ ಹಾಕಲ್ಪಟ್ಟ ಇನ್ನಿಬ್ಬರು ವ್ಯಾದಿಗ್ರಸ್ಥ ಅಪರಾಧಿಗಳಿಗಿಂತ ಬಲು ಬೇಗ ತನ್ನ ಹೃದಯ ಬಿರುದು ಮರಣಹೊಂದಿದನು. ಅಪೋಸ್ತಲನಾದ ಪೌಲನ ದೇಹದಲ್ಲಿ ಶೂಲದಂತೆ ಒಂದು ವ್ಯಾಧಿ ಆತನ ಮರಣದವರೆಗೂ ಅಂಟಿಕೊಂಡಿದ್ದನ್ನು ಮತ್ತು ಕರ್ತನು ಇದನ್ನು ತೆಗೆಯಲು ನಿರಾಕರಿಸಿದ್ದನ್ನು ತಿಳಿಯದವರು ಯಾರು? ಆತನು ಅವನಿಗೆ ಅದನ್ನು ತಾಳ್ಮೆಯಿಂದ ಸಹಿಸಿಕೊಳ್ಳುವುದರಿಂದ ಪರಿಹಾರಕ್ಕೂ ಹೆಚ್ಚಿನ ಆಶೀರ್ವಾದಗಳು ದೊರೆಯಲಿದೆ ಎಂಬ ಭರವಸೆ ನೀಡಿದನು. ಯುಗದ ಎಲ್ಲಾ ಕಾಲಗಳಲ್ಲಿಯೂ ಅನೇಕಾನೇಕ ದೇವ ಭಕ್ತರುಗಳು ಒಂದಲ್ಲಾ ಒಂದು ವ್ಯಾಧಿಯಿಂದ ನರಳಿದರು ಮತ್ತು ಅವರ ಈ ವ್ಯಾಧಿಯು ಗುಣಪಡುವ ಬದಲು ಅವರು ಮರಣಹೊಂದಿದರು ಎಂಬುದು ಯಾರಿಗೆ ತಿಳಿಯದು? ಆದುದರಿಂದ ಮೇಲಿನ ವಚನವನ್ನು ದೈಹಿಕ ಕಾಯಿಲೆಗಳಿಗೆ

ಅನ್ವಯಿಸುವುದು ದೇವರ ವಾಕ್ಯದ ಅರ್ಥಕ್ಕೆ ಅನುಗುಣವಾಗಿರುವುದಿಲ್ಲ. ಆದರೆ ಅದನ್ನು ಆತ್ಮೀಕ ಪರಿಸ್ಥಿತಿಗೆ ಅನ್ವಯಿಸುವುದು ನಿಜವಾಗಿಯೂ ಬಹಳಷ್ಟು ಸೂಕ್ತವಾಗಿದೆ. ನೂತನ ಸೃಷ್ಟಿಗಳು ಅಂತ್ಯದ ತನಕ ವ್ಯಾಧಿಗಳೊಡನೆ ಹೋರಾಡುವವರಾಗಿದ್ದಾರೆ ಮತ್ತು ದೇವರ ವಾಕ್ಯವು ಅವರಿಗೆ ಆ ಕಾಯಿಲೆಯು ಗಿಲ್ಯಾದಿನ ಮುಲಾಮಿನಿಂದ ಗುಣಹೊಂದುವದೆಂಬ ನಿರೀಕ್ಷೆಯ ಖಾತ್ರಿಯನ್ನು ನೀಡುತ್ತದೆ. ಇದು ದೇವರ ವಾಕ್ಯದ ಅತಿ ಮಹತ್ತಾದ ಮತ್ತು ಅಮೂಲ್ಯವಾದ ವಾಗ್ದಾನಗಳಿಂದಲೂ ಬಂಧಿಸಲ್ಪಟ್ಟಿದ್ದು, ಅದೇ ರೀತಿಯಲ್ಲಿ ಶಾಂತಿ ಮತ್ತು ಸಂತೋಷವು ಮೊಳಕೆಯೊಡೆದು ಇದನ್ನು ಮನುಷ್ಯನು ಇತರರಿಗೆ ಕೊಡಲೂ, ತೆಗೆದುಕೊಂಡು ಹೋಗಲೂ ಸಾಧ್ಯವಿಲ್ಲವಾಗಿದೆ. ಪವಿತ್ರಾತ್ಮನ ಪ್ರೀತಿ, ಸಂತೋಷ ಮತ್ತು ಶಾಂತಿಯಲ್ಲಿ ನೆಲೆಗೊಂಡಿದ್ದು ಆಳುವಾಗ ಹೃದಯದ ಆ ಕಾಯಿಲೆಯು, ಅವಿಶ್ರಾಂತಿಯು ಹೆಚ್ಚುಕಾಲ ಆಕ್ರಮಿಸದು.

## ಮಾರ್ಕ 16:9–20 ಕೃತ್ರಿಮವಾಗಿದೆ
## Mark 16:9-20 Is Spurious

ಈ ವಚನಗಳು ಮೂಲಗ್ರಂಥದಲ್ಲಿ ಇಲ್ಲದಿರುವುದನ್ನು ಸೇರಿಸಿರುವುದಾಗಿದೆ ಎಂದು ಪ್ರಬುದ್ಧ ವೇದಪಂಡಿತರು ಒಪ್ಪಿಕೊಳ್ಳುತ್ತಾರೆ. ಈ ವಚನಗಳು ಯಾವುದೇ ಮೂಲ ಗ್ರೀಕ್ ಎಂ.ಎಸ್.ಎಸ್‌ನಲ್ಲಿ ದೊರೆಯುವುದಿಲ್ಲ ಮತ್ತು ಇವುಗಳು ಖಂಡಿತವಾಗಿಯೂ ಆಧಾರ ಭೂತವಾದವುಗಳಲ್ಲ. ಕರ್ತನಾದ ಯೇಸುವನ್ನು ನಂಬುವವರೆಲ್ಲರೂ ಹಾವುಗಳನ್ನು ಎತ್ತುವರು, ವಿಷಪದಾರ್ಥಗಳನ್ನು ಕುಡಿದರೂ ಯಾವಕೇಡೂ ಸಂಭವಿಸದು, ಯಾವ ಸಾಂಕ್ರಾಮಿಕ ರೋಗವೂ ಅವರಿಗೆ ತಟ್ಟದು ಇತ್ಯಾದಿ ಅಭಯದ ಮಾತುಗಳು ನಿಜವಲ್ಲ. ಮಾತ್ರವಲ್ಲದೆ ಎಲ್ಲರಿಗೂ ರೋಗಿಗಳನ್ನು ಗುಣಪಡಿಸುವ, ದೆವ್ವಗಳನ್ನು ಬಿಡಿಸುವ ಶಕ್ತಿ ಒದಗಿ ಬರುವುದಿಲ್ಲ. ಕೆಲವು ಪರಿಷ್ಕೃತ ಕೃತಿಗಳಲ್ಲಿ ಮತ್ತು ಎಲ್ಲಾ ಆಧುನಿಕ ಕೃತಿಗಳಲ್ಲಿ ಈ ವಾಕ್ಯವೃಂದವನ್ನು ಬಿಟ್ಟುಬಿಟ್ಟಿದ್ದಾರೆ. ಆದುದರಿಂದ, ಈ ಮಾತುಗಳನ್ನು ಅಂಗೀಕರಿಸುವುದಾಗಲೀ, ಇವುಗಳನ್ನು ದೇವರ ಮಾತುಗಳೆಂದು ಉಲ್ಲೇಖಿಸುವುದಾಗಲೀ ಮಾಡಬಾರದು, ಇದು ಒಂದು ಮುಖ್ಯವಾದ ಪ್ರಸ್ತಾಪಕ್ಕೆ ಹೆಚ್ಚಿನ ಗೊಂದಲವನ್ನುಂಟು ಮಾಡುವುದಾಗಿದೆ.

ಕರ್ತನ ಜನರು ತಮ್ಮ ದೈಹಿಕ ಆರೋಗ್ಯದ ವಿಷಯದಲ್ಲಿ, ಜೀವಿತದ ಇತರ ಸೌಕರ್ಯಗಳಲ್ಲಿ ಲೋಕದವರಿಗಿಂತ ಹೆಚ್ಚಿನ ಸೌಭಾಗ್ಯ ಮತ್ತು ವಿನಾಯಿತಿಗಳನ್ನು ಹೊಂದಿದ್ದಾರೆ ಎಂಬ ಆಲೋಚನೆಯು ಭ್ರಮೆಯಿಂದಲೂ, ಪಾಶದಿಂದಲೂ ಕೂಡಿದ್ದಾಗಿದ್ದು ಮುಂದೆ ಕಂಡುಬರುವಂತೆ ನೂತನ ಸೃಷ್ಟಿಯ ಎಲ್ಲಾ ಯುಕ್ತವಾದ ಹಾರೈಕೆಗಳಿಗೆ ಭಿನ್ನವಾಗಿದೆ. ನಮ್ಮ ಕರ್ತನು ಮತ್ತು ಅಪೋಸ್ತಲರುಗಳು ಸಭೆಯ ಮಾದರಿಯಾಗಿದ್ದಾರೆ. ಆದುದರಿಂದ ನರಳುವ ಜೀವಿಗಳನ್ನು ದಾಳಿಮಾಡುವ ಸರ್ವೆ ಸಾಮಾನ್ಯವಾದ ತೊಂದರೆಗಳಿಂದ ಮುಕ್ತರಾಗುವುದನ್ನು ನಿರೀಕ್ಷಿಸುವ ಬದಲು, ಅವರ ಮುಡಿಪು ಈ ಸಂಕಟಗಳಲ್ಲಿ ಭಾಗವಹಿಸುವುದರಿಂದ ಮಾನವರ ದೌರ್ಭಲ್ಯಗಳನ್ನು ಅನುಭವಿಸಿ ಅವುಗಳಿಗೆ ಮನಕರಗುವುದಾಗಿರಬೇಕು. ನಮ್ಮ ಕರ್ತನು ಅಡವಿಯಲ್ಲಿ ನಾಲ್ವತ್ತು ದಿವಸಗಳ ಉಪವಾಸ ಪ್ರಾರ್ಥನೆಯ ನಂತರ ಸೈತಾನನಿಂದ ಪರಿಶೋಧಿಸಲ್ಪಟ್ಟಾಗ ಆತನ ಹಸಿವೆಯನ್ನು ತೀರಿಸಿಕೊಳ್ಳಲು ದೈವಿಕ ಶಕ್ತಿಯನ್ನು ಉಪಯೋಗಿಸುವಂತೆ ಶೋಧಿಸಲ್ಪಟ್ಟಾಗ ಅದನ್ನು ನಿರಾಕರಿಸಿದನು. (ಮತ್ತಾಯ4:3,4). ಆತನು ದಣಿದು ಸಮಾರ್ಯದ ಬಾವಿಯೊಂದರ ಬಳಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, ಆತನ ಶಿಷ್ಯರು ಕೆಲವೊಂದು ಆಹಾರಪದಾರ್ಥಗಳನ್ನು ಕೊಂಡುಕೊಳ್ಳಲು ಊರೊಳಕ್ಕೆ ಹೋಗಿದ್ದಾಗ ಆತನು ತನ್ನ ಶಕ್ತಿಯನ್ನು ತಿರುಗಿ ಪಡಕೊಳ್ಳುವಂತೆ ತನ್ನ ದೈವಿಕ ಶಕ್ತಿಯ ಪ್ರಯೋಗ ಮಾಡಬಹುದಿತ್ತು. (ಯೋಹಾ. 4:6) ಈ ಎರಡೂ ಸಂಧರ್ಭಗಳಲ್ಲಿಯೂ ಆಹಾರ ಮತ್ತು ನೀರು, ಹಸಿವೆ ಮತ್ತು ಬಾಯಾರಿಕೆಗಳೆಂಬ ತೀಕ್ಷ್ಣವೇದನೆಗಳಿಗೆ ಸೂಕ್ತವಾದ ಪರಿಹಾರಗಳಾಗಿದ್ದವು. ಅದರಂತೆ ದಣಿವಿಗೆ ವಿಶ್ರಾಂತಿಯು ಅಗತ್ಯವಾದ ಮದ್ದಾಗಿತ್ತು. ಕರ್ತನು ಇದೇ ಪರಿಹಾರಗಳನ್ನು ಉಪಯೋಗಿಸಿದನು. ಆತನಿಗೆ ಯಾವುದೇ ದೀರ್ಘಾವಧಿ ವ್ಯಾಧಿ ಇತ್ತೆಂದು ನಮಗೆ ತಿಳಿಸಲಾಗಿಲ್ಲ. ಆತನು ಅಹಾರ ಮತ್ತು ವಿಶ್ರಾಂತಿಯನ್ನು ಉಪಯೋಗಿಸಿದಂತೆ ಬೇರೆ ಯಾವುದೇ ಗಿಡಮೂಲಿಕೆ, ಬೇರು ದಂಟುಗಳನ್ನು ಪರಿಹಾರಿಕ ಮದ್ದನ್ನಾಗಿ ಮುಕ್ತವಾಗಿ ಉಪಯೋಗಿಸಬಹುದಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆತನ ನರಗಳ ತೊಂದರೆಯಿಂದಾಗಿ ರಕ್ತದ ಬೆವರು ಬಂದಿದ್ದಿರಬಹುದು ಮತ್ತು ಆತನ ಸೇವೆಯ ಅಂತ್ಯದಲ್ಲಿ ಆತನ ಹೃದಯ ಬೇನೆಯಿಂದ ಅದು ಒಡೆದುಹೋಯಿತು. ತನ್ನ ಕಡೇ ಘಳಿಗೆ ಬಂದಿತೆಂದು ಆತನಿಗೆ ತಿಳಿದಿತ್ತು. ದೇವದೂತರ ರಕ್ಷಣೆಗಾಗಿ ತಂದೆ ದೇವರ ಸಹಾಯವನ್ನು ಯಾಚಿಸಲು ನಿರಾಕರಿಸಿದಾತನು (ಮತ್ತಾ.26:53), ತನ್ನ ಹಸಿವೆಯನ್ನು, ದಣಿವನ್ನು ನೀಗಿಸಿಕೊಳ್ಳಲು ತನ್ನ ದೈವಿಕ ಶಕ್ತಿಯನ್ನು ಪ್ರಯೋಗಿಸಲು ನಿರಾಕರಿಸಿದನು. ಹಾಗಿದ್ದಾಗ್ಯೂ ಆತನು ಸಹಸ್ರಾರು ಮಂದಿಗೆ ಊಣಬಡಿಸಿದಾಗ (ಮತ್ತಾಯ 14: 15–21), ಬಿರುಗಾಳಿಯನ್ನು ಶಾಂತಗೊಳಿಸಿದಾಗ (ಮಾರ್ಕ4:36–41), ಮಂಡೇ ತೆರಿಗೆಯನ್ನು ನೀಡುವಾಗ (ಮತ್ತಾಯ17:24–27) ಉಪಯೋಗಿಸಿದಂತೆ ಆತನು ಈಗಲೂ ತನ್ನ ಹಿಂಬಾಲಕರ ಹಿತಕ್ಕಾಗಿ ತನ್ನ ದೈವಿಕ ಶಕ್ತಿಯನ್ನು ಬರಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದನು. ಆದರೆ ಆತನು ಹಾಗೆ ಮಾಡಲಿಲ್ಲ.

ಅದೇ ರೀತಿಯಲ್ಲಿ ಅಪೋಸ್ತಲರುಗಳು ಸಹಾ ತಮ್ಮ ವಶಕ್ಕೆ ಒಪ್ಪಿಸಲ್ಪಟ್ಟ ವಿಶೇಷ ಸೌಲಭ್ಯಗಳನ್ನಾಗಲೀ, ಆಶೀರ್ವಾದ ಗಳನ್ನಾಗಲೀ ಲೌಕಿಕ ಅಸ್ವಸ್ಥತೆಗಳ, ಇತರ ಅಗತ್ಯತೆಗಳ ಪರಿಹಾರಕ್ಕಾಗಿ ಪ್ರಯೋಗಿಸಲಿಲ್ಲ. ಪೌಲನ ಹೊರತಾಗಿ (ಅ. ಕೃ. 9:8, 18;ಗಲಾತ್ಯ 4:14, 6:11) ಬೇರೆ ಯಾರಿಗಾಗಲೀ ಯಾವುದೇ ಕಾಯಿಲೆಗಳು ಅಸ್ವಸ್ಥತೆಗಳು ಇದ್ದ ಬಗ್ಗೆ ನಮಗೆ ತಿಳಿದು ಬರುವುದಿಲ್ಲ. ಕೋರಿಕೆಯು ನಂತರವೂ ಪೌಲನ ದೃಷ್ಟಿಮಾಂಧ್ಯವನ್ನು ಗುಣಪಡಿಸುವ ಇಚ್ಛೆ ಕರ್ತನಿಗೆ ಇದ್ದಿಲ್ಲ. ಅದು ಬಿಟ್ಟುಹೋಗಬೇಕೆಂದು ಬೇಡಿಕೊಂಡಾಗ ಕರ್ತನು ಆತನಿಗೆ "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ" ಎಂದು ಹೇಳುತ್ತಾನೆ. (2ಕೊರಿ.12:7–10). ಅಂದಿನಿಂದ ಇಂದಿನವರೆಗೂ ಇಕ್ಕಟ್ಟಿನ ಹಾದಿಯಲ್ಲಿರುವವ ರೆಲ್ಲರಿಗೂ ಕರ್ತನ ಮೇಲಣ ಅಪೋಸ್ತಲನ ನಂಬಿಕೆ ಮತ್ತು ವಿಶ್ವಾಸಗಳು ಸಮಾಧಾನದ ಮೂಲವಾಗಿದೆ. ಹೀಗಿದ್ದರೂ ಆತನು ಹಣ, ಮನೆ, ಭೂಮಿ, ಅಹಾರ, ಉಡುಗೆ

ತೊಡುಗೆ ಮುಂತಾದ ಯಾವುದೇ ಲೌಕಿಕ ಅನುಕೂಲತೆಗಳಿಗಾಗಿ ಕರ್ತನನ್ನು ಬೇಡಿಕೊಳ್ಳಲಿಲ್ಲ. ನಮ್ಮ ಬಳಿಯಲ್ಲಿರುವ ಆತನ ಸ್ವಂತ ಮಾತುಗಳ ಪ್ರಕಾರ ಆತನಿಗೆ ಕೆಲವೊಮ್ಮೆ ಕೊರತೆಗಳುಂಟಾದಾಗ ಆತನು ಕಷ್ಟಪಟ್ಟು ದುಡಿದನು, ದೋಣಿಹಾಯಿ ಗುಡಾರ ಮಾಡುವ ಮುಂತಾದ ಸಾಮಾನ್ಯ ಕಾರ್ಯಕ್ಕೆ ಕೈಹಾಕಿದನು. ಕೆಲವು ಆತನಿಗಿಂತ ಬಹಳಷ್ಟು ಕಡಿಮೆ ಪವಿತ್ರತೆಯಿದ್ದವರು, ಕರ್ತನೊಡನೆ ಬಹಳ ಕಡಿಮೆಯಾಗಿ ಸಹಭಾಗತ್ವ ಹೊಂದಿದ್ದರು. ಅಂತಹ ದೀನ ಕೆಲಸವನ್ನು ತುಚ್ಛೀಕರಿಸಬಹುದು ಮತ್ತು ಉದ್ಯೋಗವನ್ನು ಧಿಕ್ಕರಿಸುವುದು "ನಂಬಿಕೆಯಿಂದ ಜೀವಿಸುವುದು" ಅಂದರೆ ಕೆಲಸವಿಲ್ಲದೆ ಜೀವಿಸುವುದು ಎಂಬ ಮಾತಿನಂತೆ ನಡೆದುಕೊಳ್ಳುತ್ತಿದ್ದರು. ಇಂಥಹ ಸಂಗತಿಯನ್ನು ಅಪೋಸ್ತಲನು ತಾನೇ ನಿರ್ಧಾರಾತ್ಮಕವಾಗಿ ಆಕ್ಷೇಪಿಸುತ್ತಾ "ಕೆಲಸವಮಾಡಲೊಲ್ಲದವನು ಊಟವಮಾಡಬಾರದು" (2ಥೆಸ.3:10) ಎಂತಲೂ "ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವುದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ" (ಎಫೆಸ4:28) ಎಂತಲೂ ಹೇಳಿದ್ದಾನೆ. ತಾವು ಕೇವಲ ವಿಶ್ವಾಸದಿಂದಲೇ ಜೀವಿಸಬೇಕೆಂಬುದು ದೇವರ ಚಿತ್ತವಾಗಿದೆ ಎಂದು ತಪ್ಪಾಗಿ ಭಾವಿಸುವ ಹಲವರು ಕೆಲವೊಮ್ಮೆ ತಾವು ದುಡಿಯದೇ ಇರುವ ಹಣಕ್ಕಾಗಿ, ಊಟ ಬಟ್ಟೆಗಳಿಗಾಗಿ ಬೇಡುವ ಧೈರ್ಯ ಮಾಡುತ್ತಾರೆ. ಅಂಥವರೆಲ್ಲರೂ ಕೆಟ್ಟವರೆಂದು ತಿಳಿಸಲು ಇಷ್ಟಪಡುವುದಿಲ್ಲ, ಆದರೆ, ಕರ್ತನ ಜನರಲ್ಲಿ ಕೆಲವರು ತಪ್ಪು ಬೋಧನೆ ಮತ್ತು ಅವರ ಕರೆಯ ಲಕ್ಷಣಗಳನ್ನು ತಪ್ಪಾರ್ಥ ಮಾಡಿಕೊಂಡಿರುವ ಮನೋವೃತ್ತಿಯವರಾಗುತ್ತಾರೆ ಎಂಬುದು ನಮ್ಮ ನಂಬಿಕೆ.

ಇಂತಹ ಪ್ರಾರ್ಥನೆಗಳು ದೇವರ ಚಿತ್ತಕ್ಕೆ ಅನುಸಾರವಾಗಿರದಿದ್ದರೂ ಕರ್ತನು ಕೆಲವೊಮ್ಮೆ ಅಂಥವರ ಪ್ರಾರ್ಥನೆಗಳನ್ನೂ ಕೇಳಿ ಉತ್ತರಿಸುತ್ತಾನೆ ಎಂಬುದರ ಬಗ್ಗೆ ನಮಗೆ ಯಾವುದೇ ತಕರಾರಿಲ್ಲ. ದೇವರಿಗೆ ಸಂತೋಷವನ್ನೀಡ ಬಹುದೆಂದು ನೂತನ ಸೃಷ್ಟಿಗಳು ನೇರವಾಗಿ ಮತ್ತು ವಿಶಿಷ್ಟವಾಗಿ ಅಪೋಸ್ತಲರುಗಳ ಸೂಚನೆಗಳನ್ನೂ, ಅಭ್ಯಾಸಗಳನ್ನೂ ಅನುಸರಿಸುವುದು ಉಚಿತವಾದ ಒಂದು ಕ್ರಮವೆಂದು ನಾವು ನಂಬುತ್ತೇವೆ. ಅವರುಗಳನ್ನು ನೂತನ ಸೃಷ್ಟಿಗಳೆಂದು ಪರಿಗಣಿಸಿರುವುದು ಅವರುಗಳು ಈ ಲೋಕದ ಆಶೀರ್ವಾದಗಳು ತನ್ನ ಸೃಷ್ಟಿಕರ್ತನೊಂದಿಗೆ ಐಕ್ಯತೆಯಲ್ಲಿರುವ ಸ್ವಾಭಾವಿಕ ಮಾನವನಿಗೆ ಸೇರಿದೆ ಎಂಬ ಸತ್ಯವನ್ನು ಅವರು ಗ್ರಹಿಸಿದ್ದಾರೆ ಮತ್ತು ಈ ಕಾರಣ ಅದು ಕ್ರಿಸ್ತನಲ್ಲಿ ತೋರುವ ವಿಶ್ವಾಸದ ಮೂಲಕ ದೇವರ ಮುಂದೆ ಸಮರ್ಥಿಸಲ್ಪಟ್ಟ ವಿಶ್ವಾಸಿಗಳಿಗೂ ದೊರೆಯುತ್ತದೆ ಎಂದು ಪರಿಗಣಿಸಲಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ. ನೂತನ ಸೃಷ್ಟಿಗಳಿಗೆ ಒದಗಿಬರಲಿರುವ ಪರಲೋಕದ ಶ್ರೇಷ್ಠ ಆತ್ಮೀಕ ಆಶೀರ್ವಾದಗಳ ಬದಲಾಗಿ ಅವರು ಅರ್ಪಿಸುವ, ಪ್ರತಿಷ್ಠೆಗೊಳಿಸುವ, ನಿವೇದಿಸುವ, ಬಲಿಪೀಠದ ಮೇಲೆ ಸಮರ್ಪಿಸುವ ಈ ಮಾನವ ಹಕ್ಕುಗಳು ಸುವರ್ತಾಯುಗದಲ್ಲಿ ಕರೆಯಲ್ಪಡುವ ವಿಶ್ವಾಸಿಗಳಿಗೆ ದೊರಕುತ್ತವೆ. ಪರಲೋಕದ ಅನುಕೂಲಗಳು ಮತ್ತು ನಿರೀಕ್ಷೆ ಮುಂತಾದವುಗಳ ಬದಲಾಗಿ ದೇವರಿಗೆ ಈಗಾಗಲೇ ಪ್ರತಿಷ್ಠೆಗೊಳಿಸಿರುವ ಅಥವಾ ಸಮರ್ಪಿಸಿರುವ ಈ ಲೋಕದ ಹಕ್ಕುಗಳನ್ನು ನೂತನ ಸೃಷ್ಟಿಗಳು ಕೇಳಿಕೊಳ್ಳುವುದನ್ನು "ಹಕ್ಕಿನಿಂದ ಕೇಳುವುದಲ್ಲ" ಎಂದು ಯಾವ ವಿವೇಚನಾ ಪ್ರಕ್ರಿಯೆಯಲ್ಲಿ ಹೇಳಬಹುದು? ಆತನ ವಿವೇಕವು ನಮಗೆ ಉತ್ತಮವೆಂದು ಕಂಡುಕೊಳ್ಳುವಂತೆ ಈ ರೀತಿಯಲ್ಲಿ ಅಂತಹ ಲೌಕಿಕ ಸಂಗತಿಗಳಿಗಾಗಿ ಸಮಗ್ರವಾಗಿ ಕರ್ತನನ್ನು ಕೇಳಿಕೊಳ್ಳುವುದು ಒಂದು ಸಂಗತಿಯಾದರೆ, ಮತ್ತೊಬ್ಬರಿಗೆ ಅಂದರೆ ಆತ್ಮೀಕವಾಗಿ ಅಲ್ಲ, ದೈಹಿಕವಾಗಿ ನಮಗೆ ಪ್ರಿಯರಾದವರಿಗೆ ಆಶೀರ್ವಾದಗಳನ್ನು ಬೇಡಿಕೊಳ್ಳುವುದು ಮತ್ತೊಂದು ಸಂಗತಿ. ಪರಂತು, ನಮ್ಮೆಲ್ಲಾ ಕೋರಿಕೆಗಳಲ್ಲಿ ಕರ್ತನ ಪ್ರೀತಿ ಮತ್ತು ವಿವೇಕವು ನಮ್ಮದಕ್ಕಿಂತ ಶ್ರೇಷ್ಠವಾದುದು ಎಂದು ಗ್ರಹಿಸಬೇಕು. ಎಲ್ಲಾ ಸಂಗತಿಗಳಲ್ಲಿ ಆತನ ಚಿತ್ತಕ್ಕೆ ಪೂರ್ಣವಾಗಿ ಒಪ್ಪಿಸಿಕೊಡುವುದನ್ನು ಗ್ರಹಿಸುವುದು ಮಾತ್ರವಲ್ಲ ಅದನ್ನು ಅಂಥಹ ಬಿನ್ನಹಗಳಲ್ಲಿ ವ್ಯಕ್ತಪಡಿಸಬೇಕು. ದೇವರ ವಾಕ್ಯಗಳ ಮೂಲಕ ಸರಿಯಾದ ರೀತಿಯಲ್ಲಿ ಬೋಧಿಸಲ್ಪಟ್ಟ ನೂತನ ಸೃಷ್ಟಿಗಳು ಮತ್ತು ಅದರ ಸ್ಫೂರ್ತಿಯನ್ನು ಮೆಚ್ಚಿಕೊಳ್ಳುವವರು ಅದರ ಆತ್ಮೀಕ ಹಿತಾಸಕ್ತಿಗಳು ಯಾವುದೇ ಲೌಕಿಕ ಕ್ಷೇಮಾಭಿವೃದ್ಧಿಗಳಿಗಿಂತ ಎಷ್ಟೋ ಹೆಚ್ಚಾದುದೆಂದು ಅವುಗಳಿಗೆ ಬೆಲೆಕೊಡಬೇಕು ಮತ್ತು ಅವುಗಳನ್ನು ಖಂಡಿತವಾಗಿಯೂ ಅಪೇಕ್ಷಿಸತಕ್ಕದ್ದು. ದೇಹದಲ್ಲಾಗುವ ಇಂತಹ ಅನುಭವಗಳು ಮಾತ್ರವೇ ನೂತನ ಸ್ವಭಾವದ ಬೆಳವಣಿಗೆಗೆ ಮತ್ತು ದೇವರ ರಾಜ್ಯದ ಸಿದ್ಧತೆಗೆ ಬಹಳಷ್ಟು ಲಾಭಧಾಯಕವಾಗಿರುತ್ತವೆ. ಯೂದನ ಬದಲಾಗಿ ನಮ್ಮ ಕರ್ತನು ತಾನೇ ಆರಿಸಿಕೊಂಡ ಅಪೋಸ್ತಲನ ಅನುಭವಗಳ ಬಗ್ಗೆ ಉಳಿದೆಲ್ಲದವುಗಳಿಗಿಂತ ಹೆಚ್ಚಾಗಿ ಹೊಸ ಒಡಂಬಡಿಕೆಯು ವ್ಯವಹರಿಸುತ್ತದೆ ಮತ್ತು ಇದು ಆತನು ಕ್ರಿಸ್ತನನ್ನು ದಮಸ್ಕದ ಹಾದಿಯಲ್ಲಿ ಅಂಗೀಕರಿಸುವುದರಿಂದ ಪ್ರಾರಂಭಗೊಳ್ಳುತ್ತದೆ.

ಆತನ ವಿವಿಧ ಅನುಭವಗಳನ್ನು ನೋಡುವ ನಾವು ಆತನು ತನಗೆ ನೀಡಲ್ಪಟ್ಟ ಅದ್ಭುತ ಕಾರ್ಯಗಳನ್ನು ಮಾಡುವ ವರವನ್ನು ಕಾರ್ಯಗತಗೊಳಿಸಿದ್ದಲ್ಲದೆ, ನಂತರ ಸಭೆಯಲ್ಲಿ ಆತನು ಅದನ್ನು ಸತ್ಯಕ್ಕೆ ಬರುವವರ ಪ್ರಕರಣಗಳಲ್ಲಿ ಇನ್ನೂ ಹೆಚ್ಚಾಗಿ ಪ್ರಯೋಗಿಸಿದನು. ಆದರೆ, ದಾಖಲೆಗಳು ತೋರಿಸುವಂತೆ, ಗುಣಪಡಿಸುವ ಈ ಶಕ್ತಿಯನ್ನು ಆತನು ತನಗಾಗಿಯಾಗಲೀ ಅಥವಾ ನಮ್ಮ ಮುಂದೆ ಭಕ್ತರೆಂದು, ಪೂರ್ಣವಾಗಿ ಪ್ರತಿಷ್ಟಿಸಿಕೊಂಡವರು ಎಂದು ತೋರಿಸಿಕೊಳ್ಳುವವರಿಗಾಗಿ ಎಂದಿಗೂ ಉಪಯೋಗಿಸಲಿಲ್ಲ. ಅಂದಿನ ಭಕ್ತರು ಕಾಯಿಲೆಗಳಿಂದ ಮುಕ್ತರಾಗಿದ್ದರು ಎಂದಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತಿಮೋಥೆಯನಿಗೆ ನಾವು ಈಗ ಹೆಸರಿಸುವ "Chronic dyspepsia' (ದೀರ್ಘಕಾಲೀನ ಅಜೀರ್ಣತೆ) ಇತ್ತು ಎಂಬುದು ನಮಗೆ ತಿಳಿದದೆ ಮತ್ತು ಎಪಫ್ರೋದೀತನು ಅಸ್ವಸ್ಥನಾಗಿದ್ದನು ಎಂಬುದನ್ನು ಮರೆಮಾಚಿರುವುದಿಲ್ಲ. ಹೌದು, "ಅವನು ರೋಗದಲ್ಲಿ ಬಿದ್ದು ಸಾಯುವಹಾಗಿದ್ದನೆಂಬುದು ನಿಜವೇ" (ಪಿಲಿಪ್ಪಿ 2:27). ಇದು ಆತನ ಪಾಪದ ದೆಸೆಯಿಂದಲ್ಲ, ಆದರೆ "ಕ್ರಿಸ್ತನ ಕೆಲಸದ ನಿಮಿತ್ತ ಸಾಯುವ ಹಾಗಿದ್ದನು" (ಪಿಲಿಪ್ಪಿ 2:30). ಈ ಎರಡನೆಯವನ ವಿಷಯದಲ್ಲಿ ಕರ್ತನು ಯಾವ ವಿಶೇಷವಾದ ಆಹಾರ ಅಥವಾ ಔಷಧಿಯನ್ನು ಕರ್ತನು ಆಶೀರ್ವಾದದಾಯಕವಾಗಿ ಸಂತೋಷದಿಂದ ಒದಗಿಸಿದನೆಂದು

ನಮಗೆ ತಿಳಿಯದು; ಆದರೆ ಮೊದಲನೆಯವನ ವಿಷಯದಲ್ಲಿ ಅಪೋಸ್ತಲನು ಪ್ರಾರ್ಥಿಸಲಿಲ್ಲ ಅಥವಾ ಗುಣಪಡಿಸುವ ಯಾವುದೇ ಕರವಸ್ತ್ರವನ್ನಾಗಲೀ, ಕೈವಸ್ತ್ರವನ್ನಾಗಲೀ ಕಳುಹಿಸಿಕೊಡಲಿಲ್ಲ. ಆದರೆ, ತಿಮೋಥೆಯನಿಗೆ "ಇನ್ನು ಮೇಲೆ ನೀರನ್ನು ಮಾತ್ರ ಕುಡಿಯುವವನಾಗಿರದೆ ನಿನ್ನ ಅಜೀರ್ಣದ ಮತ್ತು ನಿನಗೆ ಆಗಾಗ ಉಂಟಾಗುವ ಅಸ್ವಸ್ಥತೆಯ ಪರಿಹಾರಕ್ಕಾಗಿ ದ್ರಾಕ್ಷಾರಸವನ್ನು ಸ್ವಲ್ಪವಾಗಿ ತೆಗೆದುಕೋ" (1ತಿಮೋಥೆ 5:23) ಎಂಬ ಸಲಹೆಯನ್ನಷ್ಟೆ ನೀಡುತ್ತಾನೆ. ಇಲ್ಲಿ ಆತನು ದ್ರಾಕ್ಷಾರಸವನ್ನು ಮಧ್ಯ ಅಥವಾ ಮತ್ತುಬರಿಸುವ ಪಾನಿಯವನ್ನಾಗಿ ಸೂಚಿಸದೆ ಕೇವಲ ಔಷಧಿಯನ್ನಾಗಿ ಸೂಚಿಸುತ್ತಾನೆ. ನಮಗೆ ತಿಳಿದುಬರುವಂತೆ ಪ್ರತಿಷ್ಠೆ ಪಡಿಸಿಕೊಂಡ ಈ ಇಬ್ಬರು ಸಹೋದರನ್ನು ಗುಣಪಡಿಸಲು ಪೌಲನು ದೇವರ ಶಕ್ತಿಯನ್ನು ಮೊರೆಹೊಕ್ಕಲಿಲ್ಲ ಅಥವಾ ಅದನ್ನು ಬಳಕೆಮಾಡಲಿಲ್ಲ ಎಂಬುದು ನಾವು ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶವಾಗಿದೆ. ಅವರುಗಳು ತಮ್ಮ ದೈಹಿಕ ದೌರ್ಬಲ್ಯ ಮತ್ತು ವೇದನೆಗಳನ್ನು ತಾಳಿಕೊಂಡೇ ಅವುಗಳಿಂದ ಆಶೀರ್ವಾದ ಹೊಂದುತ್ತಾ, ಅದೇ ಸಮಯದಲ್ಲಿ ತಮ್ಮ ಬುದ್ದಿಗೆ ತೋರಿಬಂದ ಆಹಾರ ಮತ್ತಿತರ ನಿವಾರಣೋಪಾಯಗಳನ್ನು ಮಾಡಿದರು. ಪ್ರತಿಷ್ಠೆಪಡಿಸಿಕೊಂಡ ಪ್ರತಿಯೊಬ್ಬರೂ, ನೂತನ ಸೃಷ್ಟಿಗಳೆಲ್ಲರೂ ಇದೇ ಕ್ರಮವನ್ನು ಅನುಸರಿಸತಕ್ಕದ್ದು ಎಂಬುದಕ್ಕೆ ಇದುವೇ ಸರಿಯಾದ ಉದಾಹರಣೆಯಾಗಿದೆ ಎಂದು ನಾವು ನಂಬುತ್ತೇವೆ. ಅವರು ಎಂದಿಗೂ ಶಾರೀರಿಕ ಗುಣಪಡಿಸುವಿಕೆಗಾಗಿ, ಜೀವನ ವೈಭೋಗ ಮುಂತಾದವುಗಳಿಗಾಗಿ ಬೇಡಿಕೊಳ್ಳಬಾರದು. ಹೆಚ್ಚೆಂದರೆ, ನಮ್ಮ ಕರ್ತನ ಮಾದರಿ ಪ್ರಾರ್ಥನೆಯಲ್ಲಿ ಕರ್ತನು ತಾನೇ ಅವರುಗಳಿಗೆ ಅತ್ಯುತ್ತಮವಾದವುಗಳೆಂದು ಕಂಡುಕೊಳ್ಳುವ ಸಂಗತಿಗಳನ್ನು ಅಂದರೆ ದಿನನಿತ್ಯದ ಆಹಾರವನ್ನು ಬೇಡಿಕೊಳ್ಳಬೇಕೆಂದು ದೃಢಪಡಿಸುತ್ತಾನೆ. ಆದರೆ ದಿನ ನಿತ್ಯದ ಆಹಾರವನ್ನು ಬೇಡಿಕೊಳ್ಳುವಾಗಲೂ ಅವರು ಅದಕ್ಕಾಗಿ ದುಡಿಯುಬೇಕು ಮತ್ತು ನಂತರದಲ್ಲಿ ದೈವಾಶೀರ್ವಾದವು ಆತನ ವಿವೇಕಕ್ಕನುಸಾರವಾಗಿದ್ದು ಅನುಭವ ಮುಂತಾದವುಗಳಿಂದ ಆತನ ಗುಣಲಕ್ಷಣಗಳನ್ನು ವೃದ್ಧಿಪಡಿಸುವ ದೆಸೆಯಲ್ಲಿ ಆತನಿಗೆ ಯಾವುದು ಲಾಭ ಎಂಬುದನ್ನು ನಿರೀಕ್ಷಿಸಬಹುದಾಗಿದೆ. ಒಂದು ವೇಳೆ ಆತನಿಗೆ ಕೇವಲ ಆಹಾರ, ವಸ್ತ್ರ ಮುಂತಾದ ಅಲ್ಪವಾದ ಅಗತ್ಯತೆಗಳು ಮಾತ್ರವೇ ಸಾಕು ಎನ್ನುವುದಾದರೆ. ಅದು ಅವರಿಗೆ ಆತನ ಮೇಲಿನ ಪ್ರೀತಿಯ, ತಾಳ್ಮೆಯ ಮತ್ತು ನಂಬಿಕೆಯ ಪರೀಕ್ಷೆಯಾಗಿದೆ. ಆತನು ಅವರಿಗೆ ಅಧಿಕವಾಗಿ ದಯಪಾಲಿಸಿದರೆ ಅದೂ ಸಹಾ ಅವರಿಗೆ ಅದೇ ರೀತಿಯಲ್ಲಿ ಆದರೆ ವಿರುದ್ಧ ದಿಕ್ಕಿನಲ್ಲಿ ನಂಬಿಕೆ, ಪ್ರೀತಿ ಮತ್ತು ಶ್ರದ್ಧೆಯ ಪರೀಕ್ಷೆಯಾಗಿದೆ. – ಈ ಒಳ್ಳೆಯ ಸಂಗತಿಗಳನ್ನು ಯಾವ ಪ್ರಮಾಣದಲ್ಲಿ ಆತನ ಕಾರಣಕ್ಕಾಗಿ ಸಹೋದರರ ಸೇವೆಯಲ್ಲಿ ಅವರು ತ್ಯಾಗಮಾಡುತ್ತಾರೆ ಎಂಬುದನ್ನು ನಿರೂಪಿಸುವುದಾಗಿದೆ. ಅದರಂತೆ, ದೈವಿಕ ವಿವೇಕವು ಸದೃಢವಾದ ಆರೋಗ್ಯ ಮತ್ತು ಚೈತನ್ಯವನ್ನು ನೀಡುವುದು ಉತ್ತಮ ಎಂದು ಕಂಡುಕೊಳ್ಳುವುದಾದರೆ, ಪ್ರೀತಿ ಮತ್ತು ಶ್ರದ್ಧೆಯನ್ನು ತ್ಯಾಗಮಾಡಿ ಇದನ್ನು ಸಮಗ್ರವಾಗಿ ಕರ್ತನ ಕಾರಣಕ್ಕಾಗಿ ವಿನಿಯೋಗಿಸುವುದೋ ಇಲ್ಲವೋ ಅಥವಾ ಅವನ್ನು ಸ್ವಾರ್ಥ ಪ್ರಯತ್ನಗಳಿಗೆ ಉಪಯೋಗಿಸಬೇಕೋ ಎಂಬುದು ನಿಷ್ಠಾವಂತರ ಪರೀಕ್ಷೆಯಾಗಿದೆ. ಅಥವಾ ಮತ್ತೊಂದೆಡೆಯಲ್ಲಿ ದೇವರು ತನ್ನ ಅನುಗ್ರಹದಲ್ಲಿ ಜೀವನಶಕ್ತಿ ಮತ್ತು ಚೈತನ್ಯವನ್ನು ಮಿತಿಯಾದ ಅಳತೆಯಲ್ಲಿ ನೀಡುವುದಾದರೆ ಸಣ್ಣ ಅವಕಾಶಗಳನ್ನು ಬಯಸಿ ಅವನ್ನು ಪಟ್ಟು ಹಿಡಿದು ಉಪಯೋಗಿಸುವ ಪ್ರೀತಿ ವಿಧೇಯತೆ,, ಸಮರ್ಪಣೆ, ತಾಳ್ಮೆ ಮತ್ತು ಉತ್ಸಾಹ ಇವುಗಳನ್ನು ರುಜುವಾತು ಪಡಿಸುವ ವಿಶ್ವಾಸ ಮತ್ತು ಶ್ರದ್ಧೆಯ ಪರೀಕ್ಷೆಯು ವಿರುದ್ಧ ದೃಷ್ಟಿಕೋನದಿಂದ ಆರಂಭವಾಗುತ್ತದೆ.

## ನೂತನ ಸೃಷ್ಟಿಯ ವಿರೋಧಿಗಳಾಗಿ ನಾಮಾಂಕಿತ ಕ್ರೈಸ್ತ ಸಭೆ

## The Nominal Church as an Adversary to the New Creation

ಹೆಸರಿಗೆಮಾತ್ರದ ಸಭೆಯಲ್ಲಿರುವಾಗಲೇ ಅಥವಾ ಅವರ ಕೆಲವೊಂದು ಪ್ರತಿನಿಧಿಗಳ ಮೂಲಕ ಅಥವಾ ಅವರ ಪಾರುಪತ್ಯಗಳ ಮೂಲಕ ಕರ್ತನ ಜ್ಞಾನವು ದೊರೆತದ್ದರಿಂದ ಅನೇಕರು ಪಂಥೀಯ (Sectarian) ಪದ್ಧತಿಗಳನ್ನು ಅವರ ಆತ್ಮೀಕತೆಯ ತಾಯಿಯೆಂದು ಭಾವಿಸುವ ಒಲವು ತೋರುತ್ತಾರೆ ಮತ್ತು ಅದರಂತೆ ಅವರ ಪ್ರೀತಿ ಮತ್ತು ಹಂಗುಗಳನ್ನು ಅದರೆಡೆ ತೋರುವ ಭಾವವುಳ್ಳವರಾಗಿರುತ್ತಾರೆ. ಇವುಗಳೆಲ್ಲವೂ ಈ ಲೋಕದ ಪದ್ಧತಿಗಳು – ಬಾಬೇಲ್ – ನಿಜವಾಗಿಯೂ ನೂತನ ಸೃಷ್ಟಿಗೆ ವಿರೋಧವಾಗಿದೆ ಎಂದು ಗ್ರಹಿಸಲು ಅವರಿಗೆ ಕಷ್ಟವಾಗುತ್ತದೆ. ಈ ವಿಷಯದಲ್ಲಿ ಅವರಿಗಿರುವ ನಿಕಟತೆ ಮತ್ತು ಅತಿ ಕಡಿಮೆ ದೃಷ್ಟಿಕೋನಗಳೇ ಈ ಕಷ್ಟಕ್ಕೆ ಕಾರಣವಾಗಿವೆ. ಅವರು ತಮ್ಮ ದೃಷ್ಟಿಯನ್ನು ಮೇಲಕ್ಕೆ ಎತ್ತಬೇಕಾಗಿದೆ ಮತ್ತು ಈ ದೈವಿಕ ದೃಷ್ಟಿಕೋನದಿಂದ ನಾಮ ಮಾತ್ರದ ಸಭೆಗೂ ಸತ್ಯಕ್ಕೂ, ಗೋಧಿಗೂ, ಹಣಜಿಗೂ ಬಹಳ ಅಂತರವಿದೆ ಎಂಬುದನ್ನು ಅವರು ಗ್ರಹಿಸಬೇಕಾಗುತ್ತದೆ. ಹಣಜಿಯು ಗೋಧಿಯನ್ನು ಉತ್ಪಾದಿಸಲಾರದು ಅದರಂತೆ ನಾಮಾಂಕಿತ ಸಭೆಯು ನಿಜ ಕ್ರೈಸ್ತರನ್ನು ಉತ್ಪಾದಿಸಲಾರದು. ಅದರ ಧೋರಣೆಗಳು ವಿರುದ್ಧ ದಿಕ್ಕಿನಲ್ಲಿರುತ್ತವೆ. ದೇವರ ಗ್ರಂಥವು ಹೇಳುವಂತೆ ದೈವಿಕ ಶಕ್ತಿಯು' ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟು ಮಾಡುವಂತಾದ್ದಾಗಿದೆ. ನೂತನ ಜೀವಿತದ ಶಕ್ತಿಯು ಅನಂತರದಲ್ಲಿ ದೈವಾನುಗ್ರಹದ ಪಾಲನೆಯಲ್ಲಿ ವೃದ್ಧಿಹೊಂದುತ್ತದೆ. ಈ ಫಲವನ್ನು ಉತ್ಪಾದಿಸುವಲ್ಲಿ ಪ್ರಾಪಂಚಿಕತನದಿಂದ ಸ್ಫೂರ್ತಿಯನ್ನು ಪಡಕೊಳ್ಳುವುದಿಲ್ಲ. ಸತ್ಯದಿಂದ ಬೇಧಿಸಲ್ಪಟ್ಟ ನಾಮಾಂಕಿತ ಸಭೆಗಳವರು ದೈವಿಕ ಸತ್ಯದ ಕೆಲವೊಂದು ಲಕ್ಷಣಗಳ ಬಗ್ಗೆ ಕೇಳಿದವರೂ ನೋಡಿದವರೂ ಆಗಿದ್ದಾರೆ. ಅವರುಗಳೂ ಹೆಚ್ಚು ಕಡಿಮೆ ತಪ್ಪು ಸರಿಯ ಬಗ್ಗೆ ಜ್ಞಾನೋದಯ ಹೊಂದಿದ್ದಾರೆ ಮತ್ತು ಒಳ್ಳೆಯವು ಯಾವುವು ಮತ್ತು ಕೆಟ್ಟವುಗಳು ಯಾವುವು ಎಂಬುದರ ಬಗ್ಗೆ ಒಂದು ಮಟ್ಟದ ನಿಶ್ಚಿತಾಭಿಪ್ರಾಯಕ್ಕೆ ಬಂದಿರುತ್ತಾರೆ. ಆದರೆ ಅವರು ಈ ಎಲ್ಲಾ ವೃತ್ತಾಂತಗಳನ್ನು ಹೊಂದಿದ್ದರೂ ಅವನ್ನು ಅಸಡ್ಡೆ ಮಾಡುವವರೂ, ದೇವರ ಚಿತ್ತವನ್ನು ನಿರ್ಲಕ್ಷಿಸುವವರೂ ಮತ್ತು ದೇವರ ಕೃಪೆಯನ್ನು ವಿಶೇಷವಾಗಿ, ಅವರು ಪ್ರಸ್ತುತಕಾಲದಲ್ಲಿ ತಮ್ಮ ವೈಯುಕ್ತಿಕ ಅಥವಾ ಸಾಮಾಜಿಕ

ಅನುಕೂಲತೆಗಳಿಗಾಗಿ ಸೇವೆಮಾಡುವವರೆಗೆ ತಮ್ಮ ಇಚ್ಚಾನುಸಾರವೇ ವಿನಿಯೋಗಿಸುತ್ತಾರೆ ಹೊರತು ಹೆಚ್ಚೇನು ಅಲ್ಲ; ಇದಕ್ಕೆ ವ್ಯತಿರಿಕ್ತವಾಗಿ, ನಾವೀಗಾಗಾಲೇ ಕಂಡುಕೊಂಡಂತೆ ಸತ್ಯ ಸಭೆಯು ಸತ್ಯವನ್ನು ಕೇಳಿದವರನ್ನು ಮಾತ್ರವಲ್ಲ, ತಮ್ಮನ್ನು ಪ್ರೀತಿಸಿ, ತಮ್ಮನ್ನು ಅಲ್ಲಿಗೆ ತಂದಾತನಿಗೆ ತಮ್ಮದೆಲ್ಲವನ್ನು ಪೂರ್ಣವಾಗಿ ಸಮರ್ಪಿಸಿದವರನ್ನು ಹೊಂದಿರುತ್ತದೆ. ಅವರುಗಳು ಕರ್ತನನ್ನು ತಿಳಿದುಕೊಳ್ಳಲು ಆತನನ್ನು ಹಿಂಬಾಲಿಸಿದವರು ಮತ್ತು ತಮ್ಮ ಶಕ್ತಾನುಸಾರವಾಗಿ ಆತನಿಗೆ ವಿಧೇಯರಾಗಿರುವವರೂ ಆಗಿದ್ದು ಹಾಗೆ ಹಿಂಬಾಲಿಸುವಾಗ ಅವರು ತಮ್ಮ ಜೀವವನ್ನು ಪ್ರಿಯವೆಂದೆಣಿಸುವವರಲ್ಲ. ನಾಮಾಂಕಿತ ಸಭೆಯು ಈ ಲೋಕದ ಬೆಳಕಾಗಲಾರದು. ಆದರೆ ಅವರು ಕತ್ತಲಿಗೆ ಬದಲಾಗಿ ಬೆಳಕನ್ನು ಆರಿಸಿಕೊಂಡ ಗುಂಪಿನವರಾಗಿದ್ದರೂ ಆ ಬೆಳಕು ನಿಜವಾದ ಕ್ರೈಸ್ತರ ಮೂಲಕ ಸ್ವಲ್ಪವಾಗಿ ಮಾತ್ರವೇ ಅನ್ಯಜನರ ರಾಜ್ಯದವರೊಂದಿಗೆ ಮತ್ತು ವಿವಿಧ ವಿಜ್ಞಾನಗಳೊಂದಿಗೆ ಪ್ರಕಾಶಿಸುವಂತೆ ಬಯಸುವವರಾಗಿದ್ದಾರೆ. ಸತ್ಯ ಸಭೆಯ ಪ್ರತಿಯೊಬ್ಬ ಸದಸ್ಯರೂ ಎಲ್ಲಿದ್ದರೂ ಪ್ರಕಾಶಿಸುವ ಮತ್ತು ಉರಿಯುವ ಬೆಳಕಾಗಿದ್ದಾರೆ.

ಈ ಎರಡು ವರ್ಗದವರೊಳಗಿನ ವ್ಯತ್ಯಾಸವು ಹೆಚ್ಚಾದಷ್ಟೂ ಸತ್ಯದ ಸಭೆಗೆ ಅದು ಉತ್ತಮವಾಗಿದೆ; ನಿಜವಾಗಿಯೂ ದೀಪ ಹೊರುವ ನಿಷ್ಠಾವಂತರ ದೀಪಗಳು ಸಾಮಾನ್ಯವಾಗಿ ಹೆಚ್ಚು ಪ್ರಮಾಣದಲ್ಲಿ ಶೋಭಿಸುತ್ತವೆ. ಹೆಸರಿಗೆ ಮಾತ್ರ ವ್ಯವಸ್ಥಿತ ಸಮುದಾಯವಾಗಿವವರ ದೀಪಗಳು ಭೀಕರವಾದ ಅಂಧಕಾರ ಮತ್ತು ಅಂಧ ವಿಶ್ವಾಸಗಳಲ್ಲಿ ಹುದುಗಿಸಲ್ಪಟ್ಟಿದ್ದು ಹಿಂಸೆಗೊಳಗಾಗುವ ಪ್ರಮಾಣದಲ್ಲಿ ಸತ್ಯ ಸಭೆಯು ಮತ್ತಷ್ಟು ಬೆಳಗುತ್ತದೆ. ನಿಜವಾಗಿಯೂ ಈ ನಾಮಾಂಕಿತ ಸಭೆಗಳಿಂದಲೇ ಎಲ್ಲಾ ಉಪದ್ರವಗಳೂ ಉಂಟಾಗುತ್ತಿವೆ.

ದೇವರು ಚುಕ್ಕಾಣಿ ಹಿಡಿದಿದ್ದಾನೆ ಮತ್ತು ನೂತನ ಸೃಷ್ಟಿಗಳ ಎಲ್ಲಾ ಸಂಗತಿಗಳನ್ನು ಅವರ ಕರೆಯಲ್ಲಿ ಮಾತ್ರವಲ್ಲ, ಪರಲೋಕರಾಜ್ಯಕ್ಕೆ ಅವರು ತಮ್ಮನ್ನು ಸಿದ್ಧಪಡಿಸಿಕೊಳ್ಳುವಾಗ ಅವರನ್ನು ಹೊಳಪಿಸುವದಕ್ಕಾಗಿ ಉಂಟಾಗುವ ಅವರ ಎಲ್ಲಾ ಕಷ್ಟ ಸಂಕಟಗಳಲ್ಲಿ, ಪರೀಕ್ಷೆಗಳಲ್ಲಿ ಮತ್ತು ಉಪದ್ರವಗಳಲ್ಲಿ ನಿರ್ದೇಶಿಸುವವನಾಗಿದ್ದಾನೆ ಎಂಬ ಸತ್ಯವನ್ನು ನಾವು ಒಮ್ಮೆ ಗ್ರಹಿಸುವಾಗ, ದೇವರ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಮಾನವ ಸಂಸ್ಥೆಗಳು ಮಾಡುವ ಕಾರ್ಯಗಳನ್ನು ನಾವು ಮೆಚ್ಚುವುದನ್ನು ಕಡಿಮೆಗೊಳಿಸುತ್ತದೆ. ಇವುಗಳನ್ನು ದೇವರು ಎಂದೂ ಸಂಘಟಿಸಲಿಲ್ಲ ಮತ್ತು ಸಂಘಟಿಸಿಕೊಳ್ಳುವ ಅಧಿಕಾರ ನೀಡಲಿಲ್ಲ. ಆದರೆ ದೇವರ ಸಲಹೆಯೊಂದಿಗಿನ ಸಾಮರಸ್ಯದಲ್ಲಿ ಇವರುಗಳು ವಿಷಯಲಂಪಟರೂ, ಐಹಿಕತೆಯುಳ್ಳವರೂ, ಪವಿತ್ರಾತ್ಮಕ್ಕೆ ವಿರುದ್ಧವಾದವರು ಎಂದು ನಾವು ತಿಳಿಯುತ್ತೇವೆ. ಇದರಲ್ಲಿ ನಾವು ಸತ್ಯ ಸಭೆಯವರು ಕೆಲಮಟ್ಟಿಗೆ ಈ ಹೆಸರು ಮಾತ್ರದ ವ್ಯವಸ್ಥಿತ ಸಮುದಾಯದೊಂದಿಗೆ ನಿಕಟ ಅನ್ಯೋನ್ಯತೆ ಹೊಂದಿಲ್ಲವೆಂದು ಹೇಳುತ್ತಿಲ್ಲ. ಆದರೆ, ಇದರಲ್ಲಿಯೂ ಸಹಾ ಅವರು ಭಿನ್ನವಾದ ಉತ್ಸಾಹವನ್ನು ಹೊಂದಿದವರಾಗಿ ತಮ್ಮನ್ನು ಪ್ರತ್ಯೇಕಿಸಿಕೊಂಡಿದ್ದಾರೆ ಎಂದು ಹೇಳುತ್ತೇವೆ. ದೇವರ ಈ ಆತ್ಮಿಕ ಮಕ್ಕಳನ್ನು ಆತನ ಕೃಪೆಯ ವಾಕ್ಯಗಳಿಂದ ಪಡಕೊಂಡು ಮತ್ತು ಅವರನ್ನು ಕೆಲಮಟ್ಟಿಗೆ ಪ್ರೇಮದಿಂದ ಪಾಲಿಸಿ ಪೋಷಿಸಿ ಮತ್ತು ಹಣಜಿಯಂತಿರುವ ಈ ಮಾನವ ಪಂಥೀಯ ಪದ್ಧತಿಗಳಿಂದ ಮುಂದೆ ತರುವುದು ಹೇಗೆಂದರೆ, ಒಂದು ಜಾತಿಯ ಕ್ರಿಮಿಯ ಮರಿಗಳನ್ನು ಶತ್ರುವಿನ ಬೆನ್ನಿಗೆ ಚುಚ್ಚಿ, ಒಳನುಗ್ಗಿಸಿ ಅವುಗಳು ಅಲ್ಲಿಯೇ ಬೆಳ್ಚಗಿದ್ದು, ಪೋಷಿಸಲ್ಪಟ್ಟು, ವೃದ್ಧಿಹೊಂದಿ ಜನನತಾಳಿ ಬಿಡುಗಡೆ ಹೊಂದುವ ಸಮಯಯದವರೆಗೆ ಇರುತ್ತವೆ ಎಂದು ಉತ್ತಮವಾಗಿ ವಿವರಿಸಲಾಗಿದೆ. ಅಂದರೆ, ಅದನ್ನು ತಾತ್ಕಾಲಿಕವಾಗಿ ಹೊತ್ತುಕೊಂಡ ಕ್ರಿಮಿಯು ಮರಣ ಹೊಂದುತ್ತದೆ. ಅದರಂತೆ ದೇವರಿಂದ ಪಡೆಯಲ್ಪಟ್ಟ ನೂತನ ಸೃಷ್ಟಿಗಳು ಹೆಚ್ಚುಕಡಿಮೆ ಬಾಬಿಲೋನಿನ ಸಂಸ್ಥೆಗಳೊಂದಿಗೆ ನಿಕಟವಾಗಿದ್ದಾರೆ. ಆದರೆ ದೇವರ ಮೇಲ್ವಿಚಾರಿಕೆಯಲ್ಲಿ ಅವರು ಬಾಬಿಲೋನಿನ ಚಿತ್ತಕ್ಕೆ ವಿರುದ್ಧವಾಗಿ ಮುಂದಕ್ಕೆ ತರಲ್ಪಟ್ಟವರಾಗಿದ್ದಾರೆ. ಈ ವರೆಗೆ ಬಿಡುಗಡೆಯ ಅಂಶವು ಮುಟ್ಟಿಯದೆ ಮತ್ತು ನೂತನ ಸೃಷ್ಟಿಯನ್ನು ಪಡೆದಾತನು ಅವರನ್ನು – "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪದಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18:4) ಎಂದು ಕರೆಯುತ್ತಾನೆ.

ಹೆಸರಿಗೆ ಮಾತ್ರದ ಸಭೆಯ ಪದ್ಧತಿಗಳಿಂದ ನೂತನ ಸೃಷ್ಟಿಗಳಿಗೆ ನಿರಂತರವಾದ ಪ್ರಲೋಭನೆಗಳಿವೆ. –ತಪ್ಪಾದ ಸಿದ್ಧಾಂತಗಳ ಮೂಲಕ ಮಾತ್ರವಲ್ಲ, ಸಾಂಪ್ರದಾಯಿಕವಾದ ಧರ್ಮ ಶ್ರದ್ಧೆ ಮತ್ತು ಕಪಟಾಚಾರಣೆ ಇವುಗಳಿಂದ ಅವರು ತುಟಿಗಳ ಮೂಲಕ ಮಾತ್ರ ದೇವರ ಬಳಿಗೆ ಬರುತ್ತಾರೆ. ಆದರೆ ಹೃದಯವು ಆತನಿಂದ ದೂರವಿರುತ್ತದೆ ಮತ್ತು ಆಲೋಚನೆಗಳು, ಮನೋಭಾವನೆಗಳು, ಮಾತುಗಳು ಮತ್ತು ಕಾರ್ಯಗಳೆಲ್ಲವೂ ಸತ್ಯದ ಆತ್ಮನಿಂದ ಮತ್ತು ಅದು ಬೋಧಿಸುವ ಸಮರ್ಪಣೆ ಇವುಗಳೊಂದಿಗೆ ಸಾಮರಸ್ಯ ಹೊಂದಿರುವುದಿಲ್ಲ. ಹೆಸರಿಗೆಮಾತ್ರದ ಸಭೆಯವರು ಕರ್ತನ ಹೆಸರಿನೊಂದಿಗೆ, ಆತನಿಗೆ ಮಾಡುವ ದೀನ ಸೇವೆಯೊಂದಿಗೆ ಈ ಲೋಕದ ಸ್ಫೂರ್ತಿ, ಧ್ಯೇಯ ಮತ್ತು ಹಂಬಲಗಳನ್ನು ಒಟ್ಟಿಗೂಡಿಸದೇ ಹೋಗಿರುತ್ತಿದ್ದರೆ ಈ ಲೋಕದಿಂದ ನೂತನ ಸೃಷ್ಟಿಯವರಿಗೆ ಉಂಟಾಗುವ ಶೋಧನೆಗಳು ತುಲನಾತ್ಮಕವಾಗಿ ಶಕ್ತಿಹೀನವಾಗಿರುತಿತ್ತು. ನೆಮ್ಮದಿ, ಮನುಷ್ಯರ ಗೌರವ, ವೇತನ, ತ್ಯಾಗದಿಂದ ವಿಮುಕ್ತಿ, ಈ ಲೋಕವು ನೀಡುವ ಉತ್ತಮ ಸಂಗತಿಗಳನ್ನು ಸಂಪಾದಿಸುವ ಖಚಿತತೆ ಇವುಗಳು ನೂತನ ಸೃಷ್ಟಿಗಳಿಗೆ ಬಾಬಿಲೋನ್ ಹಿಡಿಯುವ ನಿರಂತರವಾಗಿ ಮೋಸಗೊಳಿಸುವಂತವುಗಳು ಮತ್ತು ಅಮಿಷಗಳು, ಪಾಶ ಮತ್ತು ಬೋನುಗಳು. ವಿರೋಧಿಯ ಬೇರೆ ಯಾವುದೇ ಪಾಶವಾಗಲೀ ಇಷ್ಟೊಂದು ಮೋಹಕವಾಗಿ, ಕೃತಿಮವಾಗಿ, ಮತ್ತು ಶಕ್ತಿದಾಯಕವಾಗಿರುವುದಿಲ್ಲ.

## ದೇವರ ಸರ್ವಾಯುಧಗಳು (ಎಫೆಸ. 6: 11–13)

## The Armor of God -Eph. 6:11-13

**"ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಯನ್ನು ಎದುರಿಸುವುದಕ್ಕೂ... ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ" (ಎಫೆಸ. 6: 13)**

ಇಲ್ಲಿಯೂ ಸಹಾ ಅಪೊಸ್ತಲನು ನಮ್ಮ ದಿನಗಳು ವಿಶೇಷವಾಗಿ ಯುಗಾಂತ್ಯದ "ಕೇಡಿನ ದಿವಸ'ಕ್ಕೆ ಸಮೀಪವಾಗಿವೆ ಎಂದು ನಮ್ಮನ್ನು ಮುನ್ನೆಚ್ಚರಿಸುತ್ತಾನೆ. ಆ ದಿನದಲ್ಲಿ ಸೈತಾನನ ಶಕ್ತಿಯು ವಿಶಿಷ್ಟವಾಗಿ ಕಾರ್ಯರೂಪಕ್ಕೆ ಬರುತ್ತವೆ. **"ಸಾಧ್ಯವಾದರೆ ಆಯ್ದುಕೊಂಡವರನ್ನು ಸಹಾ ಮೋಸಗೊಳಿಸುವುದು"**. ಸೈತಾನನ ಎಲ್ಲಾ ಭ್ರಮೆಗಳ ವಿರುದ್ಧ ರುಜುವಾತಾಗುವ ಆಯುಧವೊಂದರ ಬಗ್ಗೆ ಆತನು ಮಾತನಾಡುತ್ತಾನೆ. ಅದು ಮಾಂಸ ಶರೀರಕ್ಕೆ ಪಟ್ಟ ಆಯುಧವಾಗಿರದೆ ನೂತನ ಸೃಷ್ಟಿಗಳ ಮನಸ್ಸಿಗೆ ಸಂಬಂಧ ಪಟ್ಟದ್ದಾಗಿದೆ. ದೇವರು ಇದನ್ನು ಮಾನವ ಸಾಧನತೆಯಲ್ಲಿ ಉಂಟು ಮಾಡಿದ್ದಾನೆ. ಇದು ಆತನ ಹಂಚಿಕೆ, ಆತನ ವಾಕ್ಯ, ಆತನ ಸಂದೇಶ, ಆತನ ಸತ್ಯತೆ. ಈ "ಕೇಡಿನ ದಿನ" ದಲ್ಲಿ ಬೇರೆ ಯಾವುದೇ ಆಯುಧವು ಲಭ್ಯವಿಲ್ಲ. ಈ ವಿಷಮಸ್ಥಿತಿಗೆ ಸಮಸ್ತ ಆಯುಧಗಳೂ ಬೇಕಾಗುತ್ತವೆ – ಹೀಗಿದ್ದಾಗ್ಯೂ, ಹಿಂದಿನ ಕಾಲದಲ್ಲಿ, ಅದರ ಭಾಗವನ್ನಷ್ಟೇ ಬಳಸುತ್ತಿದ್ದರು.

**ಸೊಂಟದ ನಡುಕಟ್ಟು:** ಸೇವೆಯ ಪ್ರತಿಷ್ಠೆಯನ್ನು ಪ್ರತಿನಿಧಿಸುತ್ತದೆ. ಅಪೋಸ್ತಲನು ನಾವು ತಪ್ಪಾದ ಅಸತ್ಯಸೇವೆಗೆ ಪ್ರತಿಷ್ಟೆಗೊಂಡಿರದೆ ಸತ್ಯದ ಸೇವೆಗೆ ಪ್ರತಿಷ್ಠೆಗೊಂಡಿದ್ದೇವೆಂದು ನೋಡಿಕೊಳ್ಳುವಂತೆ ಆಜ್ಞಾಪಿಸುತ್ತಾನೆ. ಪ್ರತಿಯೊಬ್ಬರೂ ತಮ್ಮ ಸೊಂಟಪಟ್ಟಿ ಇಲ್ಲವೆ ನಡುಕಟ್ಟನ್ನು ಪರೀಕ್ಷಿಸಿಕೊಳ್ಳಲಿ. ಅದು ಆತನಿಗೆ ಸೂಕ್ತವಾಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳಲಿ, ಅದನ್ನು ಕಟ್ಟಿಕೊಳ್ಳಲಿ. ಸತ್ಯದ ಸೇವಕನಾಗಲು ಅಥವಾ ಕನಿಷ್ಟ ಸೇವೆಯ ಸ್ಫೂರ್ತಿ ಹೊಂದಿರಲಿ.

**ನೀತಿಯೆಂಬ ವಜ್ರಕವಚ:** (ಅಥವಾ ನೀತಿನಿರ್ಣಯವೆಂಬ) ಕ್ರಮಾಂಕದಲ್ಲಿ ಎರಡನೆಯದಾಗಿ ಬರುತ್ತದೆ. ದೇವರು ನ್ಯಾಯದ ಮಟ್ಟವನ್ನು ಗ್ರಹಿಸದ, ಒಪ್ಪಿಕೊಳ್ಳದ ಯಾರನ್ನೂ, ಅಥವಾ ಆತನ ಮಗನ ಅಮೂಲ್ಯ ರಕ್ತದಿಂದ ದೊರೆಯುವ ನೀತಿನಿರ್ಣಯದ ಸಮರ್ಥನೆಯನ್ನು, (ನಂಬಿಕೆಯ ಮೂಲಕ) ಕೃಪಾಭರಿತ ದೈವೀಕವ್ಯವಸ್ಥೆ ಇಂತಹವುಗಳನ್ನು ನಿರಾಕರಿಸುವ ಯಾರನ್ನೂ ತನ್ನ ಶಿಲುಬೆಯ ಸೈನಿಕರನ್ನಾಗಿ ಮಾನ್ಯಮಾಡುವುದಿಲ್ಲ.

ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವುದರಲ್ಲಿ **ಸಿದ್ದವಾದ ಮನಸ್ಸೆಂಬ ಕೆರಗಳು:** ಇವನ್ನು ಮರೆಯಲಾಗದು. ಶಿಲುಬೆಯ ದಾಸನು ದೇವರ ಶಾಂತಿ ಹೊಂದಿಕೊಳ್ಳದೆ ಒರಟಾದ ಸ್ಥಳಗಳಲ್ಲಿ ಆತನಿಗೆ ಸಹಾಯ ಮಾಡುವ ತನ್ನ ಕಾರ್ಯಸರಣಿಯನ್ನು ಪ್ರಾರಂಭಿಸಿದರೆ ಎಲ್ಲರೊಡನೆ ಶಾಂತಿಯನ್ನು ಬಯಸಿ ಸಾಧ್ಯವಾದ ಮಟ್ಟಿಗೆ ಎಲ್ಲರೊಡನೆ ಸತ್ಯದೊಂದಿಗೆ ರಾಜಿ ಮಾಡಿಕೊಳ್ಳಲು ಶಾಂತಿಯಿಂದಿರಲು ಬಯಸುವವರಿಗಿಂತ ಬಹಳ ಕಷ್ಟಪಟ್ಟರೂ ಬಹಳ ಕಡಿಮೆಯಾಗಿ ಸಾಧಿಸಬೇಕಾಗುತ್ತದೆ. ಈ ಪಾದರಕ್ಷೆ ಧರಿಸದವರು ತೊಂದರೆಗಳನ್ನು ಅಟ್ಟಿಸಿಕೊಂಡು ಹೋಗುವವರಾಗಿದ್ದಾರೆ ಮತ್ತು ಅದನ್ನೆ ಸ್ವಲ್ಪವಾಗಿ ಪಡೆಯುವುದು ನಿಶ್ಚಯ.

**ನಂಬಿಕೆಯೆಂಬ ಗುರಾಣಿಯು:** Skepticism, ಹೆಚ್ಚಾದ ಟೀಕೆಗಳು, ವಿಕಸನ ಮತ್ತು Demonology ಇವೇ ಮುಂತಾದ ವಿರೋಧಿಯ ಉರಿ ಬಾಣಗಳಿಂದ – ನಮ್ಮನ್ನು ರಕ್ಷಿಸಿಕೊಳ್ಳಲು ಅತ್ಯವಶ್ಯವಾಗಿದೆ. **"ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ"** (ಇಬ್ರಿಯ11:6) **"ಲೋಕವನ್ನು ಜಯಸಿದಂಥದು ನಮ್ಮ ನಂಬಿಕೆಯೇ"** (1 ಯೋಹಾನ 5:4)

**ರಕ್ಷಣೆಯೆಂಬ ಶಿರಸ್ತ್ರಾಣವು:** ಬೌದ್ಧಿಕ ಅಥವಾ ತತ್ವಶಾಸ್ತ್ರ ಸಂಬಂಧಿತವಾಗಿ ದೇವರ ಯೋಜನೆಯನ್ನು ಮೆಚ್ಚಿಕೊಳ್ಳುವುದು ಅಥವಾ ಅರ್ಥಮಾಡಿಕೊಳ್ಳುವುದನ್ನು ಪ್ರತಿನಿಧಿಸುತ್ತದೆ. ಸುವ್ಯಕ್ತವಾಗಿ, ಇದು ಇಂದಿಗಿಂತಲೂ ಹಿಂದೆ ಕಡಿಮೆ ಅವಶ್ಯಕವಾಗಿತ್ತು; ಮತ್ತು ಈ **"ಸುಗ್ಗಿಕಾಲ"** ದಲ್ಲಿ, ವಿರೋಧಿಯು ಸತ್ಯವನ್ನು ಅತ್ಯುಗ್ರವಾಗಿ ಆಕ್ರಮಣ ಮಾಡುವಾಗ, ಎಲ್ಲಾ ವೈಜ್ಞಾನಿಕ ಮತ್ತು ಶಿಕ್ಷಣಿಕ ಸಂಗತಿಗಳನ್ನು ಸತ್ಯದ ನಾಶಮಾಡುವ ಸಾಧನವನ್ನಾಗಿ ಮಾಡುತ್ತಿರುವಾಗ, ಈ ಶಿರಸ್ತ್ರಾಣವು ಬಿಡಲಾಗದ ಅತ್ಯವಶ್ಯಕ ವಸ್ತುವಾಗಿದೆ. ಮತ್ತು ಈಗ ಮಾತ್ರವೇ ಇದು ಇಂಥಹ ಗಾತ್ರದಲ್ಲಿ, ರೂಪದಲ್ಲಿ ದೊರೆಯುತ್ತಲಿದ್ದು ಅದನ್ನು ಶಿಲುಬೆಯ ದೀನ ಸೇವಕನು ಧರಿಸಬಹುದಾಗಿದೆ. ನಂಬಿಕೆಯೆಂಬ ಗುರಾಣಿಯು ನಮ್ಮನ್ನು ರಕ್ಷಿಸುವಂತೆ ದೇವರು ಆಕ್ರಮಣಕಾರನನ್ನು ಹಿಡಿದಿಟ್ಟಿದ್ದಾನೆ. ಈಗ ಸರ್ವಾಯುಧಗಳು ಪ್ರಮಾಣಿಕರ ಅಗತ್ಯತೆಗಾಗಿ ನೀಡಲ್ಪಟ್ಟಿವೆ.

**ಆತ್ಮನೆಂಬ ಖಡ್ಗ** : ದೇವರ ಚಿಕ್ಕ ತಂಡದಲ್ಲಿ ದೇವರ ವಾಕ್ಯವು ಮಾತ್ರವೇ ವಿರೋಧಿಯನ್ನು ಎದುರಿಸುವ ಏಕೈಕ ಅಸ್ತ್ರವಾಗಿದೆ. ಕರ್ತನು ತಾನು ಸೈತಾನನೊಂದಿಗೆ ನಡೆಸಿದ "ಶ್ರೇಷ್ಟ ಹೋರಾಟ"ದಲ್ಲಿ ಸಾಮಾನ್ಯವಾಗಿ– "ಎಂದು ಬರೆದದೆ' ಎಂಬ ಮಾತನ್ನು ಉಪಯೋಗಿಸಿದನು. ಇದುವೇ ಆತನ ಹಿಂಬಾಲಕರ ಹೋರಾಟದ ಕೂಗಾಗಿರಬೇಕು. ಸತ್ಯ ಸೈನಿಕರಿಗಿಂತ ಇತರರು ಮಾತ್ರವೇ ಕರ್ತನಿಗಾಗಿ ಐಹಿಕ ಆಯುಧಗಳನ್ನು, ಮಾನವ ತತ್ವ ಶಾಸ್ತ್ರವನ್ನು ಹಾಗೂ ಈ ಲೋಕದ ಜ್ಞಾನವನ್ನು ಮತ್ತು ಸಂಸ್ಥೆಗಳನ್ನು, ಅಧಿವೇಶನಗಳ ವಿಧಿ ಕಟ್ಟಳೆಗಳನ್ನು, ಧರ್ಮಾಧಿಕಾರಿಗಳ ಸಭೆ (ಸಿನೋಡ್) ಗಳನ್ನು, ಸಭಾ ಪಾಲನೆಯವರನ್ನು ಪ್ರಯೋಗಿಸಿದರು. ಆದರೆ ನಾವು **"ಕೇಡಿನ ದಿನದಲ್ಲಿ"** ದೇವರ ವಾಕ್ಯದ ಮೇಲೆ ಆತುಕೊಳ್ಳತಕ್ಕದ್ದು "ಎಂದು ಬರೆದದೆ". ನಾವು ಸೈತಾನನ ಕೋಪ, ಹೊಟ್ಟೆಕಿಚ್ಚು, ಮತ್ಸರ, ಕಚ್ಚಾಟ ಇವೇ ಮುಂತಾದ ಆಯುಧಗಳನ್ನು ಉಪಯೋಗಿಸಲಾಗದು. ಕರ್ತನ ಸೈನ್ಯಕ್ಕೆ ಸೇರಿದ ಮೇಲೆ **"ಆತ್ಮನೆಂಬ ಕತ್ತಿ"**ಯನ್ನು ಜಾಗರೂಕ ಅಧ್ಯಯನ ಮತ್ತು ಸಮರ್ಪಣೆ, ನಂತರ ದೇವರಾತ್ಮನ ನಡೆಸುವಿಕೆ ಇವುಗಳಿಂದ ಪಡೆದುಕೊಳ್ಳಬಹುದು. ■

* * * * * *